ಜನಶಕ್ತಿ

ದುಡಿಯುವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 10 ಸಂಚಿಕೆ 52 ಡಿಸೆಂಬರ್ 25, 2016 ಪುಟ 16 ರೂ.10/-

Web : www.janashakthi.co.in e-mail : js_weekly@yahoo.com



ಕಾ. ಕಪ್ಪಣ್ಣವರ

ಲಾಲ್ ಸಲಾಂ

ಎದ್ದೇಳಿ! ಹಕ್ಕುಗಳಿಗಾಗಿ ಹೋರಾಡಿ !!



ಜನವಾದಿ ಮಹಿಳಾ ಸಮ್ಮೇಳನದ ಕರೆ



ಗ್ರಾಮೀಣ ಕಾರ್ಮಿಕರನ್ನು ಸಂಘಟಿಸುವತ್ತ



6ನೇ ಕೃಷಿ ಕೂಲಿಕಾರರ ರಾಜ್ಯ ಸಮ್ಮೇಳನ

19-21 ಡಿಸೆಂಬರ್ 2016 ಕುಂದಾಪುರ ಉಡುಪಿ ಜಿಲ್ಲೆ

• ಗಂಗಾವತಿ, ಹೊಸಪೇಟೆ ಕೋಮುದಳ್ಳುರಿ



ಕರಾವಳಿ ಕೋಮು ಶಕ್ತಿಗಳನ್ನು ಮಣಿಸಿ

- ಜಿ.ವಿ.ಶ್ರೀರಾಮರೆಡ್ಡಿ



ವಿಯೆಟ್ನಾಮಿನಲ್ಲಿ ಜನಮೈತ್ರಿ ಉತ್ಸವ

ಜನತೆಯ ಮೇಲೆ 'ಹಣಕಾಸು ಪೋಖ್ರಾನ್'

ದೇಶವನ್ನು ಅಮೆರಿಕಾದ ಮಿಲಿಟರಿ ಮೈತ್ರಿಯಲ್ಲಿ ಸಿಲುಕಿಸುವತ್ತ ಇನ್ನೊಂದು ಹೆಜ್ಜೆ

ಸಿಪಿಐ(ಎಂ) ಪೊಲಿಟ್‌ಬ್ಯುರೊ ಖಂಡನೆ

ಭಾರತಕ್ಕೆ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಒಂದು 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಸ್ಥಾನಮಾನವನ್ನು ಕೊಡುವ ಶರತ್ತುಗಳನ್ನು ಅಮೆರಿಕನ್ ರಕ್ಷಣಾ ಕಾರ್ಯದರ್ಶಿ ಆಸ್ಟೊನ್ ಕಾರ್ಟರ್ ಭೇಟಿ ಕಾಲದಲ್ಲಿ ಅಂತಿಮಗೊಳಿಸಲಾಗಿದೆ. ಈ ಮೂಲಕ ಮೋದಿ ಸರಕಾರ ದೇಶವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳೊಂದಿಗೆ ಒಂದು ಮಿಲಿಟರಿ ಮೈತ್ರಿಯಲ್ಲಿ ಸಿಲುಕಿಸುವತ್ತ ಮತ್ತೊಂದು ಹೆಜ್ಜೆ ಇಟ್ಟಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

ಒಂದು 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಸ್ಥಾನಮಾನ ಆಸ್ಟ್ರೇಲಿಯ, ನ್ಯೂಝಿಲೆಂಡ್, ಫಿಲಿಪೈನ್ಸ್, ಜಪಾನ್ ಮತ್ತು ದಕ್ಷಿಣ ಕೊರಿಯಾದಂತಹ ಅದರ ನಿಕಟ ಮಿಲಿಟರಿ ಮಿತ್ರದೇಶಗಳಿಗೆ ಸಮನಾದದ್ದು.

ಈ ಹಿಂದಿನ 'ಸಮರ ಸಾಗಾಣಿಕೆ ವಿನಿಮಯ ಒಪ್ಪಂದ ಮನವಿ ಪತ್ರ'(ಎಲ್‌ಇಎಂಒಎ) ಬೆನ್ನಲ್ಲಿ ಬಂದಿರುವ ಈ ಹೊಸ ಒಪ್ಪಂದ ಭಾರತದ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾಯತ್ತತೆಯನ್ನು ಮತ್ತಷ್ಟು ಅತಿಕ್ರಮಿಸುತ್ತದೆ, ಇದನ್ನು ಸಿಪಿಐ(ಎಂ) ಬಲವಾಗಿ ವಿರೋಧಿಸುತ್ತದೆ ಎಂದು ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

ಮೋದಿ ಸರಕಾರ ಈ ಒಪ್ಪಂದದ ಪೂರ್ಣಪಾಠವನ್ನು ಸಾರ್ವಜನಿಕಗೊಳಿಸಿಲ್ಲ. ಭಾರತ ಸಾರ್ವಭೌಮತೆ ಮತ್ತು ರಾಷ್ಟ್ರೀಯ ಹಿತಾಸಕ್ತಿಗಳ ಮೇಲೆ ಜೀವನ್ಮರಣ ಪರಿಣಾಮ ಬೀರುವ ಈ ಒಪ್ಪಂದಗಳನ್ನು ಜನತೆಯ ಮುಂದಿಡಬೇಕಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

'ವಿಕಲತೆಗಳಿರುವ ವ್ಯಕ್ತಿಗಳ ಹಕ್ಕುಗಳ ಮಸೂದೆ'ಗೆ ಕೊನೆಗೂ ರಾಜ್ಯಸಭೆಯ ಅಂಗೀಕಾರ

ಲೋಕಸಭೆಯಲ್ಲೂ ಈ ಅಧಿವೇಶನದಲ್ಲೇ ಅಂಗೀಕಾರ : ಅಂಗವಿಕಲರ ಹಕ್ಕುಗಳ ಸಂಘಟನೆಗಳ ಆಶಯ

ಮೂರು ವರ್ಷಗಳ ಹಿಂದೆ ರಾಜ್ಯಸಭೆಯಲ್ಲಿ ಮಂಡಿಸಿದ್ದ 'ವಿಕಲತೆಗಳಿರುವ ವ್ಯಕ್ತಿಗಳ ಹಕ್ಕುಗಳ ಮಸೂದೆ' ಕೊನೆಗೂ ಪಾಸಾಗಿದೆ. ರಾಜ್ಯಸಭೆ ಸುಮಾರು ಎರಡು ಗಂಟೆಗಳ ಚರ್ಚೆಯ ನಂತರ ಇದನ್ನು ಅಂಗೀಕರಿಸಿದೆ. ಇದಿಗ ಲೋಕಸಭೆ ಇದನ್ನು ಅಂಗೀಕರಿಸಬೇಕಾಗಿದೆ.

ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಮತ್ತು ಅಖಿಲ ಭಾರತ ಅಂಗವಿಕಲರ ಮೈತ್ರಿ(ಎಐಡಿಎ) ಮತ್ತಿತರ ಸಂಘಟನೆಗಳೊಂದಿಗೆ ಸರಕಾರ ಈ ಮಸೂದೆಯಲ್ಲಿ ಕೆಲವು ತಿದ್ದುಪಡಿಗಳನ್ನು ತಂದು ಸಂಸತ್ತಿನ ಈ ಅಧಿವೇಶನದಲ್ಲಿ ಅಂಗೀಕರಿಸಬೇಕು ಎಂದು ಸತತ ಪ್ರಚಾರಾಂದೋಲನ ನಡೆಸಿಕೊಂಡು ಬಂದಿದ್ದವು. ಸಂಸತ್ತಿನ ಸ್ಥಾಯೀ ಸಮಿತಿಯ ಶಿಫಾರಸುಗಳು ಮೇ 2015ರಂದು ಬಂದಂದಿನಿಂದ ಹಂತ-ಹಂತವಾಗಿ ರಾಷ್ಟ್ರವ್ಯಾಪಿ ಪ್ರಚಾರಾಂದೋಲನಗಳು ನಡೆದಿವೆ. ದಿಲ್ಲಿ ಕಳೆದ ವರ್ಷದ ಡಿಸೆಂಬರ್ 3 ಮತ್ತು ಈ ವರ್ಷವೂ ಡಿಸೆಂಬರ್ 3ರಂದು ಬೃಹತ್ ರ‍್ಯಾಲಿಗಳನ್ನು ಕಂಡಿತು. ಬೆಂಗಳೂರು ಸೇರಿದಂತೆ ಇತರ ನಗರಗಳಲ್ಲೂ ಇಂತಹ ರ‍್ಯಾಲಿಗಳು ನಡೆದವು. ಕೊನೆಗೂ ಈಗ ರಾಜ್ಯಸಭೆ ಇದನ್ನು ಅಂಗೀಕರಿಸಿದ್ದನ್ನು ಈ ಸಂಘಟನೆಗಳು ಸ್ವಾಗತಿಸಿವೆ.

ಈ ಸಂಘಟನೆಗಳು ಈ ಮಸೂದೆಯ ಬಗ್ಗೆ ವ್ಯಕ್ತಪಡಿಸಿದ್ದ ಕೆಲವು ಆತಂಕಗಳನ್ನೂ ಅಧಿಕೃತ ತಿದ್ದುಪಡಿಗಳ ಮೂಲಕ ಸರಿಪಡಿಸಿರುವ ಬಗ್ಗೆಯೂ ಈ ಸಂಘಟನೆಗಳು ಹರ್ಷ ವ್ಯಕ್ತಪಡಿಸಿವೆ. ಒಂದು ಪ್ರಮುಖ ತಿದ್ದುಪಡಿ ಎಂದರೆ ಈಗ 'ಸಂಸ್ಥೆಗಳು' ಎಂಬ ನಿರೂಪಣೆಯಲ್ಲಿ ಖಾಸಗಿ ಸಂಸ್ಥೆಗಳನ್ನೂ ಸೇರಿಸಲಾಗಿದೆ. ಸರಕಾರ ಮಂಡಿಸಿದ್ದ ಮಸೂದೆಯಲ್ಲಿ 'ತಾರತಮ್ಯ'ದ ನಿರೂಪಣೆ ಇರಲಿಲ್ಲ. ಅದನ್ನೀಗ ಸೇರಿಸಲಾಗಿದೆ. ವಿಕಲತೆಗಳಿರುವ ಮಹಿಳೆಯರು ಮತ್ತು ಮಕ್ಕಳ ಕುರಿತಾದ ಅಂಶಗಳನ್ನು ಬಲಪಡಿಸಲಾಗಿದೆ.

ಆದರೆ ಮಸೂದೆಯ ಸೆಕ್ಷನ್ 3(3)ರಲ್ಲಿ ಅದನ್ನು ಜಾರಿಗೊಳಿಸುವ ಅಧಿಕಾರಿಗಳಿಗೆ ಅಂಗವಿಕಲರ ವಿರುದ್ಧ ಪಕ್ಷಪಾತ ನಡೆಸಲು ಸಾಕಷ್ಟು ಅವಕಾಶವಿತ್ತು. ಅದನ್ನು ಸರಿಪಡಿಸಬೇಕು ಎಂಬುದು ಅಂಗವಿಕಲರ ಹಕ್ಕುಗಳ ಸಂಘಟನೆಗಳ ಒಂದು ಪ್ರಮುಖ ಬೇಡಿಕೆಯಾಗಿತ್ತು. ಅದನ್ನು ಪೂರ್ಣವಾಗಿ ಈಡೇರಿಸಿಲ್ಲ, ಪಕ್ಷಪಾತದ ಅವಕಾಶವನ್ನು ಕಡಿಮೆ ಮಾಡುವ ಪ್ರಯತ್ನ ಮಾಡಲಾಗಿದೆಯಷ್ಟೇ ಎಂದು ಈ ಸಂಘಟನೆಗಳು ಹೇಳಿವೆ.

ಆದರೆ, ಸಿಪಿಐ(ಎಂ) ಸದಸ್ಯರು ಮಂಡಿಸಿದ ತಿದ್ದುಪಡಿಗಳಿಗೆ ಸ್ಪಂದಿಸಿದ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣದ ಮಂತ್ರಿಗಳು ಈ ಅಂಶವನ್ನು ಅಂಗವಿಕಲರ ವಿರುದ್ಧ ದುರುಪಯೋಗಪಡಿಸಿಕೊಳ್ಳದಂತೆ ನಿಯಮಗಳನ್ನು ರೂಪಿಸಲಾಗುವುದು ಎಂದರು.

ಅದೇ ರೀತಿಯಲ್ಲಿ ಉದ್ಯೋಗದಲ್ಲಿ ಮೀಸಲಾತಿ ಕುರಿತಾದ ಸೆಕ್ಷನ್ 33ರಲ್ಲಿ ಮೀಸಲಾತಿಯ ಪ್ರಮಾಣವನ್ನು ಒಟ್ಟು ಕೇಡರ್ ಸಂಖ್ಯೆಯ ಮೇಲೆ ನಿರ್ಧರಿಸಬೇಕು, ಗುರುತಿಸಿದ ಹುದ್ದೆಗಳ ಆಧಾರದಲ್ಲಿ ಅಲ್ಲ ಎಂಬ ಸಿಪಿಐ(ಎಂ) ರಾಜ್ಯಸಭಾ ಸದಸ್ಯರಾದ ಸೀತಾರಾಮ್ ಯೆಚೂರಿ, ಕೆ.ಕೆ.ರಾಗೇಶ್ ಮತ್ತು ಸಿ.ಪಿ. ನಾರಾಯಣನ್ ಮಂಡಿಸಿದ ತಿದ್ದುಪಡಿಗಳ ಬಗ್ಗೆಯೂ ಮಂತ್ರಿಗಳು ಆಶ್ವಾಸನೆ ನೀಡಿದರು.

ಆದರೆ ಉದ್ಯೋಗದಲ್ಲಿ ಶೇಕಡಾವಾರನ್ನು 5%ದಿಂದ 4% ಕ್ಕೆ ಇಳಿಸಬಾರದು ಮತ್ತು ಅಂಗವಿಕಲತೆಯ ವ್ಯಕ್ತಿಗಳ ರಾಷ್ಟ್ರೀಯ ಮತ್ತು ರಾಜ್ಯ ಆಯೋಗಗಳನ್ನು ರದ್ದು ಮಾಡುವ ಅಂಶವನ್ನು ತೆಗೆಯಬೇಕೆಂಬ ಸಂಘಟನೆಗಳ ಬೇಡಿಕೆಯನ್ನು ಮನ್ನಿಸದಿರುವ ಬಗ್ಗೆ ಅವು ಅಸಂತೃಪ್ತಿಯನ್ನು ವ್ಯಕ್ತಪಡಿಸಿವೆ.

ಈ ಅಧಿವೇಶನದಲ್ಲಿ ಉಳಿದಿರುವ ಇನ್ನೆರಡು ದಿನಗಳಲ್ಲಿ ಲೋಕಸಭೆ ಕೂಡ ಇದನ್ನು ಅಂಗೀಕರಿಸುತ್ತದೆ ಮತ್ತು ನಿಯಮಗಳನ್ನು ರೂಪಿಸುವಾಗ ಮಂತ್ರಿಗಳ ಆಶ್ವಾಸನೆಗಳಂತೆ ಅಂಗವಿಕಲರ ಸಂಘಟನೆಗಳ ಆತಂಕಗಳನ್ನು ಗಮನಿಸಲಾಗುತ್ತದೆ ಎಂದು ಎನ್‌ಪಿಆರ್‌ಡಿ ಆಶಯ ವ್ಯಕ್ತಪಡಿಸಿದೆ.

ETV ವರದಿಗಾರ ರಮಾಕಾಂತ>
ಪ್ರತಾಪ್ ಸಿಂಹ ಅವರೆ, ನೋಟು ರದ್ದತಿಯಿಂದ ಜನರಿಗೆ
ಇಷ್ಟೆಲ್ಲಾ ತೊಂದರೆ ಆಗುತ್ತೆ ಅಂಥ ಮೊದಲೇ ತಿಳಿದಿರಲಿಲ್ಲ?
ಪ್ರತಾಪ್ ಸಿಂಹ>
ತೊಂದರೆ ಆಗುತ್ತೆ. ಜಯಲಲಿತಾ ಚೇತರಿಸಿಕೊಂಡಿದ್ದಾರೆ,
ಡಿಸ್ಚಾರ್ಜ್ ಮಾಡ್ತೀವಿ ಅಂಥ ಡಾಕ್ಟರ್ ಹೇಳಿದ್ರು,
ಆದ್ರೆ ಅವರು ಸತ್ತೇಹೋದ್ರು, ಏನ್ಮಾಡೋಕಾಗುತ್ತೆ?

ಸಿ. ಸಿದ್ದಯ್ಯ



ದೇಶದ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾಯತ್ತತೆಗೆ ಧಕ್ಕೆ :130 ಕೋಟಿ ಜನತೆಗೆ ಅಗೌರವ

ಪ್ರಧಾನಿಗಳಿಗೆ ಯೆಚೂರಿ ಪತ್ರ

ಈ ಹೊಸ ಒಪ್ಪಂದದ ಹಿನ್ನೆಲೆಯಲ್ಲಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಮತ್ತು ರಾಜ್ಯಸಭಾ ಸದಸ್ಯ ಸೀತಾರಾಮ್ ಯೆಚೂರಿಯವರು ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದು ಅಮೆರಿಕಾದಲ್ಲಿ ಇದನ್ನು ಪ್ರಕಟಿಸಿ ಮಂಜೂರಾತಿಗೆ ಅಲ್ಲಿನ ಸೆನೆಟ್ ಮುಂದೆ ಇಡಲಾಗಿದೆಯಾದರೂ ಇಲ್ಲಿ ಭಾರತ ಸರಕಾರ ಯಾವ್ಯಾವ ಶರತ್ತುಗಳಿಗೆ ಒಪ್ಪಿದೆ ಎಂಬುದನ್ನು ತಿಳಿಸಿಲ್ಲ ಎಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ. ಅಲ್ಲದೆ ಇದನ್ನು ಭಾರತೀಯ ಜನತೆಯನ್ನು ಪ್ರತಿನಿಧಿಸುವ ಸಂಸತ್ತು ಅಧಿವೇಶನದಲ್ಲಿರುವಾಗಲೇ, ಅದರ ಗಮನಕ್ಕೆ ತರದೆ ಅಮೆರಿಕಾದೊಂದಿಗೆ ಕುದುರಿಸಿ 130 ಕೋಟಿ ಜನತೆಗೆ ಅಗೌರವ ತೋರಿಸಿದೆ, ಅಮೆರಿಕಾದಲ್ಲಿ ಪ್ರಕಟವಾಗಿರುವ ವಿವರಗಳ ಪ್ರಕಾರ ಮೋದಿ ಸರಕಾರ ದೇಶದ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾಯತ್ತತೆಗೆ ಧಕ್ಕೆ ತರುವ ಶರತ್ತುಗಳಿಗೆ ಒಪ್ಪಿದೆ ಎಂಬ ಗಂಭೀರ ಸಂಗತಿಯತ್ತ ಪ್ರಧಾನಿಗಳ ಗಮನ ಸೆಳೆದಿದ್ದಾರೆ. ಅವರ ಪತ್ರದ ಪೂರ್ಣ ಪಾಠವನ್ನು ಇಲ್ಲಿ ಕೊಡಲಾಗಿದೆ:

ಪ್ರಧಾನ ಮಂತ್ರಿಗಳೇ,

ನಿಮ್ಮ ಮಂತ್ರಿಮಂಡಲ ಡಿಸೆಂಬರ್ 8, 2016ರಂದು ಹೊರಡಿಸಿದ ಒಂದು ಜಂಟಿ ಹೇಳಿಕೆಯ ಮೂಲಕ ಪ್ರಕಟಿಸಿರುವ ಪ್ರಕಾರ 'ಅಮೆರಿಕ ಸಂಯುಕ್ತ ಸಂಸ್ಥಾನಗಳಿಂದ ಭಾರತಕ್ಕೆ 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಹುದ್ದೆಯನ್ನು ಅಂತಿಮಗೊಳಿಸಿದ್ದಕ್ಕೆ ಸಂಬಂಧಪಟ್ಟಂತೆ ನಾನು ಈ ಪತ್ರವನ್ನು ನಿಮಗೆ ಬರೆಯುತ್ತಿದ್ದೇನೆ. ಇದು ಈ ವರ್ಷದ ಆರಂಭದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳು ಮತ್ತು ಭಾರತದ ಮಂತ್ರಿಗಳು 'ಸಮರ ಸಾಗಾಣಿಕೆ ವಿನಿಮಯ ಒಪ್ಪಂದದ ಮನವಿ ಪತ್ರ'ಕ್ಕೆ ಸಹಿ ಹಾಕಿದ್ದನ್ನು ಅನುಸರಿಸಿ ಬಂದಿದೆ.

'ಪ್ರಮುಖ ರಕ್ಷಣಾ ಭಾಗೀದಾರ' ಎನ್ನುವುದು ಹೇಳಿಕೆಯಲ್ಲಿ ತಿಳಿಸಿರುವಂತೆ "ಭಾರತಕ್ಕೆ ವಿಶಿಷ್ಟವಾದ ಒಂದು ಸ್ಥಾನಮಾನ" ಮತ್ತು ಇದು "ಭಾರತವನ್ನು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಅತಿ ನಿಕಟ ಮಿತ್ರರು ಮತ್ತು ಭಾಗೀದಾರರುಗಳಿಗೆ ಸಮನಾದ ಮಟ್ಟಕ್ಕೆ ತರುತ್ತದೆ." ಈ ಮೂಲಕ ರಕ್ಷಣಾ ಸಂಬಂಧಗಳನ್ನು ಕುರಿತಂತೆ ಭಾರತದ ದೀರ್ಘಕಾಲದ ಧೋರಣೆಯಿಂದ ಗಮನಾರ್ಹ ರೀತಿಯಲ್ಲಿ ದೂರ ಸರಿಯಲಾಗಿದೆ, ಮತ್ತು ಇದನ್ನು ಸಂಸತ್ತನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಮಾಡಲಾಗಿದೆ.

ಅಮೆರಿಕನ್ ಸರಕಾರ ಈ 'ಪ್ರಮುಖ ರಕ್ಷಣಾ ಭಾಗೀದಾರ' ಎಂಬ ಹುದ್ದೆಯ ವಿವರಗಳನ್ನು ಅಮೆರಿಕನ್ ಸೆನೆಟ್‌ಗೆ ಮಂಜೂರಾತಿಗೆ 'ಎಫ್‌ವೈ 2017 ಎನ್‌ಡಿಎಎ'-ರಾಷ್ಟ್ರೀಯ ರಕ್ಷಣಾ ಅಧಿಕಾರ ನೀಡಿಕೆ ಕಾಯ್ದೆಯ ಭಾಗವಾಗಿ ಸಲ್ಲಿಸಿದೆ. ಆದರೆ ನಿಮ್ಮ ಸರಕಾರ ಇಂತಹ ಒಂದು ಮಹತ್ವದ ವ್ಯವಹಾರದ ಬಗ್ಗೆ ಸಂಸತ್ತಿನಲ್ಲಿ ಒಂದು ಹೇಳಿಕೆಯನ್ನೂ ಕೂಡ ಕೊಟ್ಟಿಲ್ಲ. ದೇಶ ಈ '2017 ಎನ್‌ಡಿಎಎ' ಓದಿಕೊಂಡು ಈ ವ್ಯವಹಾರದ ಅಮೆರಿಕನ್ ಭಾಗವನ್ನು ನೋಡಬಹುದಾಗಿದೆ, ಆದರೆ ಅಮೆರಿಕಾದ ಒಂದು 'ಪ್ರಮುಖ ರಕ್ಷಣಾ ಭಾಗೀದಾರ'ನಾಗಲು ಭಾರತ ಯಾವ ಶರತ್ತುಗಳಿಗೆ ಬದ್ಧವಾಗಿದೆ ಎಂಬುದು ಅಜ್ಞಾತವಾಗಿಯೇ ಉಳಿದಿದೆ.

ನಾನು ನಿಮ್ಮ ಗಮನವನ್ನು '2017 ಎನ್‌ಡಿಎಎ'ಯ ಸೆಕ್ಷನ್ 1292ರ 'ಇ' ಪರಿಚ್ಛೇದಕ್ಕೆ ಸೆಳೆಯ ಬಯಸುತ್ತೇನೆ. ಇದು "ರಕ್ಷಣಾ ಸಾಮಗ್ರಿಗಳು, ರಕ್ಷಣಾ ಸೇವೆಗಳು, ಮತ್ತು ಸಂಬಂಧಪಟ್ಟ ತಂತ್ರಜ್ಞಾನ, ಸೂಕ್ಷ್ಮ ಸೈಬರ್‌ಭದ್ರತೆ ಮತ್ತು ಅಂತಿಮವಾಗಿ ಬಳಕೆಯ ಮೇಲುಸ್ತುವಾರಿಯ ಒಪ್ಪಂದಗಳನ್ನು ತಪಾಸಣೆ ಮಾಡುವ ವ್ಯವಸ್ಥೆಗಳ" ಬಗ್ಗೆ ಹೇಳುತ್ತದೆ. ಅಂದರೆ ಭಾರತಕ್ಕೆ ಮಾರಿರುವ ಸಾಮಗ್ರಿಗಳು ಮತ್ತು ತಂತ್ರಜ್ಞಾನಗಳ ಮೇಲುಸ್ತುವಾರಿಯ ಬಗ್ಗೆ. ನಂತರ ಪರಿಚ್ಛೇದ (ಎಫ್) ಭಾರತ ತನ್ನ "ರಫ್ತು ನಿಯಂತ್ರಣ ಮತ್ತು ಖರೀದಿ ವ್ಯವಸ್ಥೆಗಳನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ವ್ಯವಸ್ಥೆಗಳೊಂದಿಗೆ" ಹೊಂದಿಸಿಕೊಳ್ಳುತ್ತದೆ ಎನ್ನುತ್ತದೆ. ಇವು ನಿಮ್ಮ ಸರಕಾರ ಕೊಟ್ಟಿರುವ ಮಹತ್ವದ ರಿಯಾಯ್ತಿಗಳು, ಇವು ಭಾರತೀಯ ರಕ್ಷಣಾ ಪಡೆಗಳನ್ನು ಅಮೆರಿಕನ್ ತಪಾಸಣೆಗೆ ಮತ್ತು ಭಾರತೀಯ ರಕ್ಷಣಾ ಉತ್ಪಾದನೆಯನ್ನು ಅಮೆರಿಕನ್ ಹತೋಟಿಗೆ ಒಳಪಡಿಸುತ್ತವೆ.

ನಿಮ್ಮ ಸರಕಾರ ಭಾರತೀಯ ಸಾರ್ವಭೌಮತೆ ಮತ್ತು ಸಾಮರಿಕ ಸ್ವಾಯತ್ತತೆಗೆ ಧಕ್ಕೆ ತರುತ್ತಿದೆ ಎಂಬ ಗಂಭೀರ ಆಶಂಕೆಗಳು ಏಳುತ್ತವೆ. 2017 ಎನ್‌ಡಿಎಎ'ಯ ಸೆಕ್ಷನ್ 1292ರ ಪರಿಚ್ಛೇದ (ಐ) ಈ ಸಂಗತಿಗಳನ್ನು ಸಾಕಷ್ಟು ಸ್ಪಷ್ಟಗೊಳಿಸುತ್ತದೆ. "ದಕ್ಷಿಣ ಏಶ್ಯದಲ್ಲಿ ಮತ್ತು ಇನ್ನೂ ದೊಡ್ಡ ಇಂಡೋ-ಏಶ್ಯ-ಫ್ಯಾಸಿಫಿಕ್ ಪ್ರದೇಶಗಳಲ್ಲಿ ಅಮೆರಿಕ ಸಂಸಯುಕ್ತ ಸಂಸ್ಥಾನಗಳ ಹಿತಗಳನ್ನು ಈಡೇರಿಸಲು ಭಾರತದೊಂದಿಗೆ ರಕ್ಷಣಾ ಮತ್ತು ಭದ್ರತಾ ಸಹಕಾರವನ್ನು" ಹೆಚ್ಚಿಸಲಾಗಿದೆ ಎಂದು ಅದು ವಿಶದವಾಗಿ ಎತ್ತಿ ತೋರಿದೆ. ಈ ಮೂಲಕ ನಮ್ಮದೇ ನೆರೆಕರೆಯಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಿರಿಯ ಮಿತ್ರನಾಗಲು ನಿಮ್ಮ ಸರಕಾರ ಬದ್ಧಗೊಳಿಸಿಕೊಂಡಿದೆ ಎಂಬುದು ಬೇಸರದ ಸಂಗತಿ. ಇದು ಭಾರತದ ಸ್ವತಂತ್ರ ವಿದೇಶಾಂಗ ಧೋರಣೆಯ ಹೆಣಪೆಟ್ಟಿಗೆಯ ಮೇಲೆ ಹೊಡೆದಿರುವ ಅಂತಿಮ ಮೊಳೆ ಎಂಬುದನ್ನು ತೋರಿಸುತ್ತದೆ.

'ಪ್ರಮುಖ ರಕ್ಷಣಾ ಭಾಗೀದಾರ' ಹುದ್ದೆಯ ಪ್ರಕಟಣೆಯ ಭಾಗವಾಗಿ ರಕ್ಷಣಾ ಮಂತ್ರಾಲಯ ಸಂಸತ್ತಿನ ಎರಡೂ ಸದನಗಳು ಅಧಿವೇಶನದಲ್ಲಿ ಇದ್ದಾಗಲೇ, ಈಗಲೂ ಇರುವಾಗಲೇ, ಇವೆಲ್ಲವುಗಳಿಗೆ ಬದ್ಧವಾಗಿರುವುದಂತೂ ಅವಮಾನದ ಸಂಗತಿ. ಇದು ಸಂಸದೀಯ ವ್ಯವಸ್ಥೆಯ ಸ್ಥಾಪಿತ ನಿಯಮಾವಳಿಗಳು ಮತ್ತು ಆಚರಣೆಗಳ ಸಂಪೂರ್ಣ ಉಲ್ಲಂಘನೆಯಾಗಿದೆ.

ಅಲ್ಲದೆ, ನಿಮ್ಮ ಸರಕಾರ ಸಂಸತ್ತನ್ನು ನಿರ್ಲಕ್ಷಿಸುವಲ್ಲಿ ಬಹಳ ಆಸಕ್ತಿ ಹೊಂದಿರುವಂತೆ ಕಾಣುತ್ತದೆ ಎಂದು ನಾನು ಹೇಳಲೇಬೇಕಾಗಿದೆ. ಏಕೆಂದರೆ, ಎಲ್‌ಇಎಂಒಎ ಪತ್ರವನ್ನು ಕೂಡ ಇನ್ನೂ ಯಾವುದೇ ಸದನದ ಮುಂದೆಯಾಗಲೀ, ರಕ್ಷಣಾ ಇಲಾಖೆಯ ಸ್ಥಾಯೀ ಸಮಿತಿಯ ಮುಂದಾಗಲೀ ಇಟ್ಟಿಲ್ಲ. ಸಂಸತ್ತು ಈ ಮಹಾನ್ ದೇಶದ ಜನತೆಯನ್ನು ಪ್ರತಿನಿಧಿಸುತ್ತದೆ, ಅದನ್ನು ಉದ್ದೇಶಪೂರ್ವಕವಾಗಿಯೇ ಉಪೇಕ್ಷಿಸುವ ದಾರಿಯನ್ನು ಆರಿಸಿಕೊಂಡು ನೀವು 130 ಕೋಟಿ ಭಾರತೀಯರಿಗೆ ಅಗೌರವ ತೋರಿಸುತ್ತಿದ್ದೀರಿ ಎಂದು ನೆನಪಿಸುವ ಅಗತ್ಯವಿಲ್ಲ.

ನಾನು, ಈ ಎರಡೂ ಪತ್ರಗಳನ್ನು ಸಂಸತ್ತಿನ ಮುಂದಿಡಬೇಕು ಮತ್ತು ತಕ್ಷಣವೇ ಸಾರ್ವಜನಿಕಗೊಳಿಸಬೇಕು ಎಂದು ಆಗ್ರಹಿಸುತ್ತೇನೆ.

ಸಂಸತ್ತಿಗೆ ನಿಮ್ಮ ಸರಕಾರದ ಹೊಣೆಗಾರಿಕೆಗಳ ಭಾಗವಾಗಿ ನೀವು 'ಸಮರ ಸಾಗಾಣಿಕೆ ವಿನಿಮಯ ಒಪ್ಪಂದದ ಮನವಿ'ಯ ಪೂರ್ಣ ಪತ್ರವನ್ನು ಮತ್ತು ಪ್ರಮುಖ ರಕ್ಷಣಾ ಭಾಗೀದಾರ' ಹುದ್ದೆಯ ಭಾಗವಾಗಿ ಒಪ್ಪಿರುವ ಶರತ್ತುಗಳ ಪಟ್ಟಿಯನ್ನು ತಕ್ಷಣವೇ ಸಂಸತ್ತಿನ ಮುಂದೆ, ಈ ಚಳಿಗಾಲದ ಅಧಿವೇಶನವನ್ನು ಮುಗಿಸುವ ಮೊದಲು ಇಡುತ್ತೀರಿ ಎಂದು ಆಶಿಸುತ್ತೇನೆ.

ಬಿಜೆಪಿ ಕೋಮುವಾದಿ ದಾಳಿ, ಎದುರಿಸಲಾರದ ಕಾಂಗ್ರೆಸ್

ಸಂಪಾದಕೀಯ

ಚುನಾವಣೆ ಹತ್ತಿರ ಬರುತ್ತಿದ್ದಂತೆ ಕಾಂಗ್ರೆಸ್ ಸರಕಾರದ ಮೇಲೆ ಬಿಜೆಪಿ ರಾಜಕೀಯ ದಾಳಿ ತೀವ್ರವಾಗುತ್ತಿದೆ. ಹಲವು ರಂಗಗಳಲ್ಲಿ ದಾಳಿಗಳನ್ನು ಅದು ತೀವ್ರಗೊಳಿಸಿದೆ. ಅದರ ದಾಳಿಯ ಮುಖ್ಯ ಅಸ್ತ್ರ ಕೋಮುವಾದವೇ ಆಗಿರುವುದರಿಂದ ಅದನ್ನೇ ಬೀಸಲಾರಂಭಿಸಿದೆ. ಹನುಮ ಜಯಂತಿ ಮತ್ತು ಪೈಗಂಬರರ ಜನ್ಮದಿನ (ಈದ್ ಮಿಲಾದ್) ಒಂದೇ ದಿನ ಬಂದಿದ್ದರ ದುರ್ಬಳಕೆ ಮಾಡಿಕೊಂಡು ಕೋಮುಗಲಭೆ ಸೃಷ್ಟಿಸಲು ಪ್ರಯತ್ನಿಸುತ್ತಿದೆ. ಅದರ ಪ್ರಬಲ ಕೋಟೆಗಳಾದ ಕರಾವಳಿ, ಚಿಕ್ಕಮಗಳೂರು, ಕೊಡಗಿನಿಂದ ಆಚೆಗೂ, ಅದೂ ಉತ್ತರ ಕರ್ನಾಟಕದಲ್ಲಿ ಕೋಮುಗಲಭೆ ಹುಟ್ಟು ಹಾಕುವಲ್ಲಿ ಸಫಲವಾಗಿದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ಮತ್ತು ಬಳ್ಳಾರಿ ಜಿಲ್ಲೆಯ ಹೊಸಪೇಟೆಯ ಚಿತ್ತವಾಡ್ಗಿಗಳಲ್ಲಿ ಕೆಲವು ದಿನಗಳಿಂದ ಗಂಭೀರ ಪರಿಸ್ಥಿತಿ ಉಂಟಾಗಿದೆ. ಈ ಎರಡೂ ಕಡೆ ಹನುಮ ಜಯಂತಿ ಮತ್ತು ಈದ್–ಮಿಲಾದ್ ಧ್ವಜ, ಬ್ಯಾನರ್ ಕಟ್ಟುವ ವಿಷಯವಾಗಿ ವಾಗ್ವಾದ ನೆಪಮಾಡಿಕೊಂಡು ಗಲಭೆ ಆರಂಭವಾಗಿದೆ. ಮೆರವಣಿಗೆಗಳ ಸಂಧರ್ಭದಲ್ಲಿ ಸಹ ಘರ್ಷಣೆಗಳಾಗಿವೆ.

ಗಂಗಾವತಿಯಲ್ಲಿ ಭಾನುವಾರ (ಡಿಸೆಂಬರ್ 11) ನಡೆದ ಕೋಮುಗಲಭೆ ಹಿನ್ನೆಲೆಯಲ್ಲಿ ನಗರಾದ್ಯಂತ ಹೇರಿದ್ದ ನಿಷೇಧಾಜ್ಞೆ ಮಧ್ಯೆಯೂ ವಿಶ್ವ ಹಿಂದೂ ಪರಿಷತ್ ಕಾರ್ಯಕರ್ತರು ಹಾಗೂ ಹನುಮ ಮಾಲಾಧಾರಿಗಳು ಸೋಮವಾರ (ಡಿಸೆಂಬರ್ 12) ಸಂಕೀರ್ತನಾ ಯಾತ್ರೆ ನಡೆಸಿದರು. ಈ ವೇಳೆ ನಡೆದ ಕಲ್ಲುತೂರಾಟದಲ್ಲಿ 6 ಪೊಲೀಸರು ಸೇರಿ 8 ಮಂದಿ ಗಾಯಗೊಂಡಿದ್ದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ.

ಮಲ್ಲಿಕಾರ್ಜುನ ಮಠದಲ್ಲಿ ಸಭೆ ನಡೆಸಿದ ವಿಶ್ವಹಿಂದೂ ಪರಿಷತ್ ಮುಖಂಡರು, ಅಂಜನಾದ್ರಿ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ತೆರಳಲು ತೀರ್ಮಾನಿಸಿ, ಹನುಮ ಮಾಲಾಧಾರಿಗಳೊಂದಿಗೆ ಮಲ್ಲಿಕಾರ್ಜುನ ಮಠದಿಂದ ಗಣೇಶ ವೃತ್ತ, ಗಾಂಧಿ ವೃತ್ತದವರೆಗೆ ಮೆರವಣಿಗೆ ನಡೆಸಿದರು. ಸ್ಥಳಕ್ಕೆ ಧಾವಿಸಿದ ಬಳ್ಳಾರಿ ವಲಯ ಐಜಿ ಎಸ್.ಮುರುಗನ್ ಹಾಗೂ ಎಸ್ಪಿ ಡಾ.ಕೆ.ತ್ಯಾಗರಾಜನ್ ಅವರು ಮೆರವಣಿಗೆ ನಡೆಸದಂತೆ ತಾಕೀತುಮಾಡಿದರು. ಇದಕ್ಕೆ ಜಗ್ಗದ ವಿಎಚ್ಪಿ ಕಾರ್ಯಕರ್ತರು ಹಾಗೂ ಹನುಮ ಮಾಲಾಧಾರಿಗಳು, ಪಾದಯಾತ್ರೆಗೆ ಅವಕಾಶ ನೀಡುವಂತೆ ಪಟ್ಟುಹಿಡಿದರು. ಪೊಲೀಸರೊಂದಿಗೆ ತೀವ್ರ ವಾಗ್ವಾದ ನಡೆಸಿದರು. ಈ ಸಂದರ್ಭದಲ್ಲಿ ಉದ್ರಿಕ್ತರು ಕಲ್ಲು, ಇಟ್ಟಿಗೆ ತೂರಾಟ ನಡೆಸಿದರು ಎಂದು ತಿಳಿದು ಬಂದಿದೆ.

ಮೆರವಣಿಗೆಯಲ್ಲಿ ಭಾಗವಹಿಸಿದ್ದ ಹಲವು ವಿಎಚ್ಪಿ ಕಾರ್ಯಕರ್ತರು ಹಾಗೂ ಹನುಮ ಮಾಲಾಧಾರಿಗಳು ಕೈಗಳಲ್ಲಿ ಖಡ್ಗ, ತ್ರಿಶೂಲ, ಬಡಿಗೆ, ಕಲ್ಲು, ಕಬ್ಬಿಣದ ಸಲಾಕೆ ಸೇರಿ ಇತರ ಮಾರಕಾಸ್ತ್ರಗಳನ್ನು ಝಳಪಿಸಿದರು. ಭಾನುವಾರ (ಡಿಸೆಂಬರ್ 11) ನಡೆದ ಕೋಮುಗಲಭೆ ಸುದ್ದಿ ಕೇಳಿ, ಬಳ್ಳಾರಿ, ರಾಯಚೂರು, ಬೆಳಗಾವಿ, ಹುಬ್ಬಳ್ಳಿ–ಧಾರವಾಡ, ಗದಗ, ದಾವಣಗೆರೆ, ಹಾವೇರಿ, ಚಿತ್ರದುರ್ಗ, ಕೋಲಾರ ಸೇರಿ ರಾಜ್ಯದ ನಾನಾ ಜಿಲ್ಲೆಗಳಿಂದ ಆಗಮಿಸಿದ್ದ ನೂರಾರು ಹನುಮ ಮಾಲಾಧಾರಿಗಳು ಪ್ರತಿಭಟನಾ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಕಲ್ಲು ತೂರಾಟದಲ್ಲಿ ಪೊಲೀಸರು ಸೇರಿ, ಕೆಲವು ಮಾಲಾಧಾರಿಗಳು ಗಾಯಗೊಳ್ಳುತ್ತಿದ್ದಂತೆ ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು ಎಂದೂ ವರದಿಯಾಗಿದ್ದು, ಇದರಿಂದ ಸಂಘಪರಿವಾರ ಯೋಜಿತ ರೀತಿಯಲ್ಲಿ ಈ ಕೋಮುಗಲಭೆಗಳನ್ನು ಸೃಷ್ಟಿಸಿದೆ ಎಂಬುದು ಸ್ಪಷ್ಟವಾಗಿದೆ.

ಹೊರಗಿನಿಂದ ಭಜರಂಗದಳ ಕಾರ್ಯಕರ್ತರನ್ನು ಕರೆಯಿಸಿ ಬಿಜೆಪಿ ಮುಖಂಡರು ಗಲಭೆ ಸೃಷ್ಟಿಸುತ್ತಿದ್ದಾರೆ. ಇದಕ್ಕೆ ಪ್ರತಿಯಾಗಿ ಶಾಸಕ ಇಕ್ಬಾಲ್ ಅನ್ಸಾರಿ ತಮ್ಮ ಬೆಂಬಲಿಗರನ್ನು ಪ್ರಚೋದಿಸಿ ಘರ್ಷಣೆ ಮತ್ತಷ್ಟು ಉಲ್ಬಣವಾಗುವಂತೆ ನೋಡಿಕೊಳ್ಳುತ್ತಿದ್ದಾರೆ ಎಂದು ತಟಸ್ಥವಿರುವವರಿಂದ ಆರೋಪ ಬಂದಿದೆ. ಬಿಜೆಪಿಯ ಕೋಮುವಾದಿ ದಾಳಿಯನ್ನು ಎದುರಿಸುವ ಬದಲಾಗಿ ಕೋಮುವಾದಿ ಧ್ರುವೀಕರಣಕ್ಕೆ ಕಾಂಗ್ರೆಸ್ ಪ್ರಯತ್ನಿಸುತ್ತಿದೆ.

ಹೊಸಪೇಟೆಯ ಚಿತ್ತವಾಡ್ಗಿಯಲ್ಲಿ ಬಿಗಿ ಪೊಲೀಸ್ ಭದ್ರತೆ ನಡುವೆಯೂ ಮಂಗಳವಾರ (ಡಿಸೆಂಬರ್ 13) ಗುಂಪು ಘರ್ಷಣೆ ನಡೆದಿದ್ದು, ಇಬ್ಬರು ಯುವಕರ ಮೇಲೆ ಹಲ್ಲೆ ನಡೆದು ನಗರದಲ್ಲಿ ಉದ್ವಿಗ್ನ ಪರಿಸ್ಥಿತಿ ಉಂಟಾಗಿತ್ತು. ಎರಡೂ ಗುಂಪಿನವರು ಕಟ್ಟಿದ್ದ ಬ್ಯಾನರ್, ಧ್ವಜಗಳನ್ನು ನಗರಸಭೆ ಸಿಬ್ಬಂದಿ ಮಂಗಳವಾರ (ಡಿಸೆಂಬರ್ 13) ತೆರವುಗೊಳಿಸುತ್ತಿದ್ದರು. ಇದನ್ನು ನೋಡಿಕೊಂಡು ನಿಂತಿದ್ದವರು, ಅಲ್ಲಿ ಹಾದು ಹೋಗುತ್ತಿದ್ದ ಇಬ್ಬರು ಯುವಕರ ಮೇಲೆ ದಾಳಿ ನಡೆಸಿದರು ಎಂದು ವರದಿಯಾಗಿದೆ.

ಎರಡೂ ಕಡೆ ಪರಿಸ್ಥಿತಿ ಸ್ವಲ್ಪ ಮಟ್ಟಿಗೆ ನಿಯಂತ್ರಣಕ್ಕೆ ಬಂದಿದೆ. ಆದರೆ ಈ ವರೆಗೆ ಕೋಮುವಾದ ಹೆಚ್ಚಾಗಿ ತಟ್ಟದ ಈ ಪ್ರದೇಶಗಳಲ್ಲೂ ಕೋಮುವಾದೀಕರಣ ಆರಂಭವಾಗಿದೆ ಎಂಬುದು ಸ್ಪಷ್ಟ.

ತನ್ನ ಪ್ರಭಾವ ಪ್ರಬಲವಾಗಿರುವ ಪ್ರದೇಶದಲ್ಲಿ ಸಂಘ ಪರಿವಾರ ತನ್ನ ಕೋಮುವಾದಿ ಆಟ ಮುಂದುವರೆಸಿದೆ. ಚಿಕ್ಕಮಗಳೂರು ತಾಲ್ಲೂಕಿನ ಬಾಬಾ ಬುಡನ್ ಗಿರಿ ಸ್ವಾಮಿ ದರ್ಗಾ ಐ.ಡಿ.ಪೀಠದಲ್ಲಿ ಮಂಗಳವಾರ (ಡಿಸೆಂಬರ್ 13) ಆಚರಿಸಲಾದ ದತ್ತ ಜಯಂತಿಯಲ್ಲಿ ಯೆಡಿಯೂರಪ್ಪ, ಸಿ.ಟಿ.ರವಿ ಸೇರಿದಂತೆ ಬಿಜೆಪಿ ಮತ್ತಿತರ ಸಂಘ ಪರಿವಾರದ ನಾಯಕರು ಭಾಗವಹಿಸಿದರು. ವಿಶ್ವ ಹಿಂದೂ ಪರಿಷತ್ ಮತ್ತು ಬಜರಂಗದಳ ನೇತೃತ್ವದಲ್ಲಿ ದತ್ತ ಮಾಲಾಧಾರಿಗಳು, ಐ.ಡಿ.ಪೀಠ ಮಾರ್ಗದ ಹೊನ್ನಮ್ಮನ ಹಳ್ಳದಲ್ಲಿ ಪವಿತ್ರ ಸ್ನಾನ ಮಾಡಿ, ಪಡಿ ಹೊತ್ತು ದತ್ತ ಪೀಠಕ್ಕೆ ತೆರಳಿದರು. ಸಂಘಪರಿವಾರದ ಕಾರ್ಯಕರ್ತರು ದತ್ತಾ ಮಾಲೆ ಧರಿಸಿ ರಾಜ್ಯದ ವಿವಿಧೆಡೆಯಿಂದ ಸಾವಿರಾರು ಸಂಖ್ಯೆಯಲ್ಲಿ ಬಂದಿದ್ದರು. ಐ.ಡಿ.ಪೀಠದಿಂದ ಸುಮಾರು 4ರಿಂದ 5 ಕಿ.ಮೀ ದೂರ ಇರುವಾಗಲೇ ಬೆಳಿಗ್ಗೆ 11 ಗಂಟೆಗೆ ಟ್ರಾಫಿಕ್ ಜಾಮ್ ಉಂಟಾಯಿತು. ಮುಕ್ಕಾಲು ತಾಸಿನಲ್ಲಿ ಸಂಚರಿಸಬಹುದಾದ ಮಾರ್ಗ ಕ್ರಮಿಸಲು ವಾಹನ ಚಾಲಕರಿಗೆ ಕನಿಷ್ಠ 8ರಿಂದ 10 ಗಂಟೆ ಅವಧಿ ಬೇಕಾಗುವಷ್ಟು ಜನ ಸೇರಿದ್ದರು.

ಸಂಘಪರಿವಾರ ಬೆಂಗಳೂರಿನಲ್ಲಿ ಬೃಹತ್ ಹಿಂದೂ ಆಧ್ಯಾತ್ಮಿಕ ಮತ್ತು ಸೇವಾ ಮೇಳ ಸಂಘಟಿಸಿದೆ. ಈ ಮೇಳದಲ್ಲಿ ಆರ್‌ಎಸ್‌ಎಸ್ನ ಹಿರಿಯ ಪ್ರಚಾರಕ ಸು. ರಾಮಣ್ಣ ಮಾತನಾಡುತ್ತಾ 'ಭಾರತಕ್ಕಾಗಿ ಪ್ರಾಣಕೊಡುವ ದಿನಗಳು ಮುಗಿದು, ಬಲಿ ತೆಗೆದುಕೊಳ್ಳುವ ದಿನಗಳು ಪ್ರಾರಂಭವಾಗಿವೆ' ಎಂದು ಅತ್ಯಂತ ಪ್ರಚೋದನಾಕಾರಿಯಾಗಿ ಮಾತನಾಡಿದ್ದಾರೆ. ಈ ಮೇಳದಲ್ಲಿ 'ರಾಷ್ಟ್ರಭಕ್ತಿ ಜಾಗೃತಿ–ರಾಷ್ಟ್ರವಂದನಾ' ಮುಂತಾದ ಕಾರ್ಯಕ್ರಮಗಳನ್ನು ಆಯೋಜಿಸಿದ್ದು, ಸಂಘಪರಿವಾರದ ಸೇವಾ ಸಂಸ್ಥೆಗಳನ್ನು ಶಾಲಾ ಮಕ್ಕಳನ್ನು ಒಳಗೊಳ್ಳಲಾಗಿತ್ತು.

ಕರಾವಳಿಯಲ್ಲಂತೂ ಸಂಘಪರಿವಾರದ ಅಟಾಟೋಪ ಎಗ್ಗಿಲ್ಲದೆ ಮುಂದುವರೆಯುತ್ತಿದೆ. ಇಂತಹ ಭೀಕರ ಕೋಮುವಾದಿ ದಾಳಿಯನ್ನು ಎದುರಿಸಿ ಸೆಕ್ಯುಲರ್ ಶಕ್ತಿಗಳನ್ನು ಕ್ರೋಢಿಕರಿಸುವ ಕೆಲಸದಲ್ಲಿ ಕಾಂಗ್ರೆಸ್ ಎಂದಿನಂತೆ ಪೂರ್ಣವಾಗಿ ಸೋಲುತ್ತಿದೆ. ಕೆಲವು ಕಡೆ ಕೋಮುವಾದಿ ಧ್ರುವೀಕರಣದ ಆಟವನ್ನು ಆಡುತ್ತಿದೆ. ಮಾತ್ರವಲ್ಲ ಕಾಂಗ್ರೆಸಿಗರ ಭ್ರಷ್ಟಾಚಾರ ಮತ್ತು ಲೈಂಗಿಕ ಹಗರಣದಿಂದ ದುರ್ಬಲವಾಗಿ ಸೆಲ್ಫ್ ಗೋಲುಗಳನ್ನು ಹಾಕಿಕೊಳ್ಳುತ್ತಿದೆ. ಮೇಟಿ ಲೈಂಗಿಕ ಹಗರಣ, ನೋಟು ಬದಲಾವಣೆ ಹಗರಣಗಳಲ್ಲಿ ಕೆಲವು ಸಚಿವರ ಮೇಲೆ ಇ.ಡಿ./ಐ.ಟಿ. ದಾಳಿಯ ದಟ್ಟ ಅನುಮಾನ ಕಾಂಗ್ರೆಸಿನ ರಾಜಕೀಯ ಸ್ಥೈರ್ಯವನ್ನು ಪೂರ್ಣವಾಗಿ ಕುಗ್ಗಿಸಿದೆ. ಬಿಜೆಪಿ ಕೇಂದ್ರ ಸರಕಾರದ ನೋಟು ರದ್ದತಿಯ ರಾಜಕೀಯ ಪ್ರಮಾದವನ್ನು ಬಳಸಿಕೊಂಡು ಅದರ ಮೇಲೆ ರಾಜಕೀಯ ದಾಳಿ ಮಾಡುವಲ್ಲೂ ಕಾಂಗ್ರೆಸ್ ಪೂರ್ಣ ವಿಫಲವಾಗಿದೆ.

ಆದ್ದರಿಂದ ಬಿಜೆಪಿಯ ಕೋಮುವಾದಿ ಮತ್ತು ಇತರ ದಾಳಿಗಳ ವಿರುದ್ದ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳು ಸೆಕ್ಯುಲರ್ ಶಕ್ತಿಗಳನ್ನು ಅಣಿ ನೆರೆಸಿ ಹೋರಾಡಬೇಕಾಗಿದೆ.

ಸ್ಫೋಟಗೊಳ್ಳುತ್ತಿರುವ ಹಗರಣ ಅನೈತಿಕ ವರ್ತನೆಗಳು ಮತ್ತು ಕೋಮುವಾದಿ ಅಕ್ರಮಣಗಳನ್ನು ಮರೆಸುವ ತಂತ್ರಗಳು

ಎಸ್. ವೈ. ಗುರುಶಾಂತ್

ಕರ್ನಾಟಕದ ಸಾರ್ವಜನಿಕ ರಂಗದಲ್ಲೀಗ ಹಲವು ಹಗರಣಗಳ ಸ್ಫೋಟ. ಕಪ್ಪು ಹಣ ತಡೆಯಲೆಂದೇ ಕೆಲ ನೋಟುಗಳನ್ನು ರದ್ದು ಪಡಿಸಲಾಗಿದೆಯೆಂದು ಕೇಂದ್ರ ಸರ್ಕಾರ, ಜಿಜೆಪಿ ಎಷ್ಟೇ ಅಬ್ಬರಿಸಿದರೂ ಈ ಸಂದರ್ಭದಲ್ಲಿ ಹಣದ ಕಪ್ಪು ವ್ಯವಹಾರ ಅದೆಷ್ಟು ಅಭಾಧಿತ ಮತ್ತು ಅನಾಹುತ ಎಂಬುದು ಒಂದೊಂದು ಪ್ರಕರಣಗಳಲ್ಲಿಯೂ ಬಿಟ್ಟಿಕೊಳ್ಳುತ್ತಿದೆ. ದುಡಿವಜನ, ಸಾರ್ವಜನಿಕರು ತಮ್ಮದೇ ಹಣ ಪಡೆಯಲು ಸಾಲುಗಳಲ್ಲಿ ಹರಸಾಹಸ ಪಡುತ್ತಿರುವಾಗಲೇ ನೂರಾರು ಕೋಟಿ ರೂ. ಗಳನ್ನು ಅನಾಯಾಸವಾಗಿ ಬಿಳಿ ಮಾಡಿಕೊಂಡು ಮೆರೆಯುವ ಪ್ರಸಂಗಗಳು ಹತ್ತಾರು ಹೊರಬರುತ್ತಿವೆ. ಗಣಿಗಳ್ಳತನದ ಆರೋಪ ಎದುರಿಸುತ್ತಿರುವ ಗಾಲಿ ಜನಾರ್ಧನರೆಡ್ಡಿ ತಮ್ಮ ಮಗಳ ಮದುವೆಗೆ ಮುನ್ನ ನೂರು ಕೋಟಿ ರೂ. ಗಳನ್ನು ಬಿಳಿ ಮಾಡಿಸಿಕೊಂಡ ಪ್ರಕರಣದಲ್ಲಿ ಮುಖ್ಯ ಆರೋಪಿ ಅಧಿಕಾರಿ ಸಿಕ್ಕಿ ಬಿದ್ದಿರುವುದಲ್ಲದೇ, ಸಹಕರಿಸಿದ ಒಬ್ಬನಿಗೆ ಕೊಲೆ ಬೆದರಿಕೆಯೊಡ್ಡಿ, ಆತ್ಮಹತ್ಯೆಗೆ ದೂಡಿದ್ದಾಗಿದೆ. ಸರ್ಕಾರದ ಉನ್ನತ ಹುದ್ದೆಯಲ್ಲಿದ್ದು ಅಕ್ರಮವಾಗಿ ಸಂಪತ್ತಿನಗಳಿಕ್ಕೆಯನ್ನು ತೆರಿಗೆ ಜಾರಿ ಅಧಿಕಾರಿಗಳ ಧಾಳಿಯಿಂದ ಹೊರಬಂದ ಪ್ರಕರಣ ಮತ್ತೊಂದು ಮಗದೊಂದು. ಅದೇ ಹೊತ್ತಿನಲ್ಲಿಯೇ ಅವೆಲ್ಲವನ್ನು ಮರೆಸುವಂತೆ ಸಿದ್ಧರಾಮಯ್ಯನವರ ಸಂಪುಟದ ನಿಕಟ ಸಹೋದ್ಯೋಗಿ ಸಚಿವ ಹೆಚ್.ವೈ. ಮೇಟಿ 'ರಾಸಲೀಲೆ' ಹಗರಣ 'ತಲೆ ದಂಡ' ಮಾಡಿಸಿರುವುದು ಇನ್ನೊಂದು ಪ್ರಕರಣ.

ಮೋದಿಯವರು 500, 1000 ರೂಪಾಯಿಗಳ ನೋಟುಗಳನ್ನು ರದ್ದುಗೊಳಿಸುವುದಾಗಿ ಘೋಷಿಸಿದ ನಿಕಟದಲ್ಲೇ ಬಿಜೆಪಿಯ ಮಾಜಿ ಸಚಿವ ಗಾಲಿಜನಾರ್ಧನ ರೆಡ್ಡಿಯವರು ತಮ್ಮ ಮಗಳ ಮದುವೆಗೆ ಸುಮಾರು 500 ಕೋಟಿ ಹಣ ಖರ್ಚು ಮಾಡಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಸಾರ್ವಜನಿಕ ಮದುವೆಗೆ ಸುಮಾರು 500 ಕೋಟಿ ಹಣ ಖರ್ಚು ಮಾಡಲು ಹೇಗೆ ಸಾಧ್ಯವಾಯಿತು ಎಂಬ ಪ್ರಶ್ನೆ ಸಾರ್ವಜನಿಕವಾಗಿ ಕೇಳಿ ಬಂದಿತ್ತು. ಇದರಲ್ಲಿ 100 ಕೋಟಿ ರೂಪಾಯಿಗಳನ್ನು ವರ್ಗಾವಣೆ ಮಾಡುವಲ್ಲಿ ಕೆ.ಐ.ಡಿ.ಬಿ. ಭೂಸ್ವಾಧೀನ ಅಧಿಕಾರಿ ಭೀಮಾನಾಯಕ್ ಮುಖ್ಯ ಪಾತ್ರ ವಹಿಸಿರುವುದು ಮತ್ತು ಈ ವ್ಯವಹಾರದಲ್ಲಿ ಆಗಿರುವ 'ಡೀಲ್'ಗಳನ್ನು ಆತ್ಮಹತ್ಯೆ ಮಾಡಿಕೊಂಡ ನಾಯಕ್‌ನ ಕಾರು ಚಾಲಕ ರಮೇಶ್‌ಗೌಡ 'ಡೆತ್ ನೋಟ್' ನಲ್ಲಿ ಬಹಿರಂಗ ಪಡಿಸಿದ್ದಾನೆ. ಹೀಗೆ ಮಾಡಿಕೊಡುವಲ್ಲಿ ಶೇ.20 ಕಮೀಷನ್ ಪಡೆದನಲ್ಲದೇ, 2018ರ ಚುನಾವಣೆಯಲ್ಲಿ ಹಗರಿಬೊಮ್ಮನಹಳ್ಳಿಯ ಕ್ಷೇತ್ರದಿಂದ ತನಗೆ ಬಿಜೆಪಿ ಟಿಕೇಟ್ ಕೊಡಬೇಕು, ಎಂಬ ಒಪ್ಪಂದ ಆಗಿರುವುದು ಬಯಲಾಗಿದೆ. ಈ ವ್ಯವಹಾರ ಗಾಲಿ ಜನಾರ್ಧನ ರೆಡ್ಡಿ ಮತ್ತು ಬಿಜೆಪಿ ಸಂಸದ ಶ್ರೀರಾಮುಲು ರವರ ಮುಖ್ಯ ಪಾತ್ರವಿರುವುದನ್ನೂ ತಿಳಿಸಿದೆ. ಮಾತ್ರವಲ್ಲ, ಲೋಕಾಯುಕ್ತದಲ್ಲಿ ದಾಖಲಾಗಿರುವ ಕೇಸನ್ನು ಮುಚ್ಚಿ ಹಾಕಲು ನ್ಯಾಯಾಧೀಶರಿಗೆ ಲಂಚ ನೀಡಿದ್ದು, ಸಹೋದರರ ಹೆಸರಿನಲ್ಲಿ ಕೋಟ್ಯಾಂತರ ಆಸ್ತಿ ಮಾಡಿರುವುದು, ಗಾಲಿಯವರಿಗೆ ಹಣ ವರ್ಗಾವಣೆ ಮಾಡಿದ ಹಂತಗಳು, ಭಾಗಿಯಾದವರ ಎಲ್ಲಾ ವಿವರಗಳಿವೆ. ಇಷ್ಟು ವಿಷಯಗಳು ತಿಳಿದಿವೆ ಎಂದೇ ಡ್ರೈವರ್ ರಮೇಶ್‌ಗೌಡ ಬಾಯಿ ತೆ-ಗೆದರೆ ಕೊಲೆ ಮಾಡಿಸುವುದಾಗಿ ಬೆದರಿಕೆ ಹಾಕಿದ್ದರಿಂದ ತೀವ್ರ ಕ್ಲೇಷಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದಾಗಿ ಹೇಳಿರುವುದು ಅಧಿಕಾರಿ ಭೀಮಾನಾಯಕ್ ಮತ್ತು ಗಾಲಿ ಪರಿವಾರದ ಕ್ರಿಮಿನಲ್ ತಂಡವನ್ನು ತೆರೆದಿಡುತ್ತದೆ. ಗಣಿ ಆಕ್ರಮಗಳ ಕ್ರಮಿನಲ್ ಕೇಸುಗಳನ್ನು ಎದುರಿಸುತ್ತಾ ಜೈಲಿನಲ್ಲಿದ್ದ ರೆಡ್ಡಿ ಮತ್ತವರ ಪರಿವಾರ ಈಗಲೂ ನಡೆಸುತ್ತಿರುವ ಘೋರ ಪಾತಕಗಳನ್ನು ಇದು ಬಹಿರಂಗಗೊಳಿಸಿದೆ.

ಈಗ ಅಧಿಕಾರಿಯಾಗಿರುವ ಭೀಮಾನಾಯಕ್‌ಗೆ ಹಿಂದೆ 2008 ರಿಂದ 2011ರವರೆಗೆ ಬಳ್ಳಾರಿಯಲ್ಲಿ ತಹಶೀಲ್ದಾರ್ ಆಗಿರುವಾಗ ಗಾಲಿ ಸಹೋದರರ 'ಸೇವೆ'ಯನ್ನು ನಿಷ್ಟವಾಗಿ ಮಾಡುತ್ತಾ ಬಂದದ್ದು, ವಿಮಾನ ನಿಲ್ದಾಣಕ್ಕೆ ಎಂಬ ಹೆಸರಿನಲ್ಲಿ ಜನಾರ್ಧನರೆಡ್ಡಿಯವರಿಗೆ ಭೂ ಮಾಫಿಯಾಕ್ಕೆ ಅನುವು ಮಾಡಲು ರೈತರ ಜಮೀನು ಸ್ವಾಧೀನ ಪಡಿಸುವಲ್ಲಿ, ಪ್ರತಿಭಟಿಸಿದ ರೈತರ ಮೇಲೆ ಗುಂಡು ಹಾರಿಸಿ, ಲಾಠಿ ಚಾರ್ಜ್ ಮಾಡಿಸಿ ದಬ್ಬಾಳಿಕೆ ಮಾಡುವಲ್ಲಿ ಸಕ್ರಿಯ ಪಾತ್ರವಿದೆ. ಅಲ್ಲಿಂದ

ಪುಟ 4 ಕ್ಕೆ

ಸ್ಫೋಟಗೊಳ್ಳುತ್ತಿರುವ ಹಗರಣ ಅನೈತಿಕ.............

ಪುಟ 3 ರಿಂದ

ವರ್ಗಾವಣೆಯಾದರೂ, ಸರಕಾರಕ್ಕೆ ನಿಷ್ಠವಾಗದೇ ಲೂಟಿಖೋರ ರೆಡ್ಡಿಗಳಿಗೆ ನಿಷ್ಠನಾಗಿ ಕೆಲಸ ಮಾಡಿರುವುದು ಆತಂಕಕಾರಿ. ಇಷ್ಟೊಂದು ನಗ್ನವಾಗಿ ಕ್ರಿಮಿನಲ್ ಕೃತ್ಯಗಳು ನಡೆದರೂ ಕೇಂದ್ರ ಸರಕಾರ, ರಾಜ್ಯ ಸರಕಾರ ಕಣ್ಣು ಮುಚ್ಚಿ ಕುಳಿತಿದ್ದು ಖಂಡನೀಯ. ಗಾಲಿಯವರ ಮದುವೆ ಖರ್ಚುಗಳ ಬಗ್ಗೆ ತೀವ್ರವಾಗಿ ಟೀಕೆ ಬಮದ ಹಲವು ದಿನಗಳ ಬಳಿಕ, ಮದುವೆ ಮುಗಿದ ಮೇಲೆ ಕೇಂದ್ರದ ಆದಾಯ ತೆರಿಗೆ ಇಲಾಖೆ ಧಾಳಿಯ ನೆಪದ ನಾಟಕ ಮಾಡಿ ಮರೆಯಾದದ್ದು ಬಿಜೆಪಿ ಮತ್ತು ಮೋದಿಯವರ ಢೋಂಗೀತನವನ್ನು ತೋರಿಸುತ್ತದೆ. ಈಗ ರಮೇಶ್‌ಗೌಡನ 'ಕಗ್ಗೊಲೆ' ಯಿಂದ ಸಂಗತಿಗಳು ಹೊರಬಂದವೇ ಹೊರತು ತನಿಖೆ, ಜಾರಿ ಇಲಾಖೆಗಳಿಮದ ಅಲ್ಲ ಎಂಬುದೇ ದುರಂತ.

ಹಾಗೆ ನೋಡಿದರೆ ಮೋದಿಯವರ ಕಪ್ಪುಹಣದ 'ಮಾಸ್ಟರ್ ಸ್ಟ್ರೋಕ್' ದಿನಗಳೆಂದತೆ ಜನ ಸಾಮಾನ್ಯರ ಜೀವ ಹಿಂಡುವ ಧಾಳಿಯಾಗುತ್ತಿರುವುದು ಅನುಭವಕ್ಕೆ ಬರುತ್ತಾ ಅಸಹನೆ, ವಿರೋಧ- ಹೆಚ್ಚುತ್ತಿರುವಾಗ ಜನರನ್ನೂ ಯಾಮಾರಿಸಲು ಕೆಲವರ ಮನೆಗಳ ಮೇಲೆ ಧಾಳಿ ಮಾಡಿ ಹಣ, ಆಸ್ತಿ ಜಪ್ತಿ ಮಾಡಲಾಗುತ್ತಿದೆ. ಇದನ್ನೂ ಯಾವಾಗಲೋ ಮಾಡಬೇಕಿದ್ದ, ಮಾಡಬಹುದಾದ ಸ್ಟ್ರೋಕ್‌ಗಳು, ಧಾಳಿಗಳು.

ಕರ್ನಾಟಕ ಸರಕಾರದಲ್ಲಿ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕರಂತಹ ಹುದ್ದೆಯಲ್ಲಿರುವ ಚಿಕ್ಕರಾಯಪ್ಪ, ಹೆದ್ದಾರಿ ಯೋಜನಾ ಪ್ರಾಧಿಕಾರದ ಅಧಿಕಾರಿ ಜಯಚಂದ್ರ ಅವರ ಮನೆಗಳ ಮೇಲೆ ಆಧಾಯ ತೆರಿಗೆ ಇಲಾಖೆ ಅಧಿಕಾರಿಗಳು ಧಾಳಿ ಮಾಡಿ 2000 ಮುಖ ಬೆಲೆಯ 5.7 ಕೋಟಿ ಹಣ ಜಪ್ತಿ 152 ಕೋಟಿ ರೂ.ಗ: ಅಕ್ರಮ ಆಸ್ತಿ ಪತ್ತೆ ಮಾಡಿದ್ದಾರೆ. ಅವರನ್ನೂ ಬಂಧಿಸಲಾಗಿದೆ. ವಿಶೇಷವೆಂದರೆ ಇವರಿಬ್ಬರೂ ಮುಖ್ಯಮಂತ್ರಿಗಳ ಆಪ್ತ ಸಚಿವರ ಆಪ್ತರು ಎಂಬುದು. ಅಲ್ಲದೇ ಇವರ ಜೊತೆ ಸಿಕ್ಕಿ ಬಿದ್ದಿರುವ ಇನ್ನೊಬ್ಬ ಚಂದ್ರಕಾಂತ್ ಎಂಬುವವ ಒಬ್ಬ ರಿಯಲ್ ಎಸ್ಟೇಟ್ ಉದ್ಯಮಿ. ಅಂದರೆ ಸರಕಾರದ ಅಧಿಕಾರಸ್ಥ ಸಚಿವರು, ಭೂ ದಂದ-ಗಾರರು, ಪರಿಸ್ಪರ ಜೊತೆ ಸೇರಿ ನಡೆಸುವ ಅಕ್ರಮಗಳ ಸ್ವರೂಪವನ್ನೂ ಇದು ಬಯಲಾಗಿಸುತ್ತದೆ.

ಇವುಗಳ ಬೆನ್ನಲ್ಲೇ ಸ್ಫೋಟಗೊಂಡದ್ದು ಆಯುಷ್ ಇಲಾಖೆಯಲ್ಲಿ ನೌಕರಳಾಗಿರುವ ವಿಜಯಲಕ್ಷ್ಮಿ ಜೊತೆ ಅಬಕಾರಿ ಸಚಿವ ಮೇಟಿಯವರು ನಡೆಸಿದ್ದರು ಎನ್ನಲಾದ 'ರಾಸಲೀಲೆ' ಪ್ರಕರಣ. ಇದು ಮೇಲ್ನೋಟಕ್ಕೆ ನಿಜ ಎಂಬಂತೆ ಕಾಣುತ್ತಿವೆ. ಆದರೆ ಈ ಪ್ರಕರಣವನ್ನು ತಮ್ಮ ಸ್ವಾರ್ಥ ಹಿತಗಳಿಗೆ ಬಳಸುವ ಯೋಜಿತ ಕೃತ್ಯವೂ ಎದ್ದು ಕಾಣುತ್ತಾ ಇವುಗಳ ಸಿ.ಡಿ. ಬಿಡುಗಡೆ ಮಾಡಿದ ಆರ್.ಟಿ.ಐ. ಕಾರ್ಯಕರ್ತ ರಾಜಶೇಖರ ಮತ್ತು ಆತನೊಂದಿಗೆ ಇತರರು ಕೋಟ್ಯಾಂತರ ಹಣಕ್ಕಾಗಿ ಬ್ಲಾಕ್‌ಮೇಲ್ ಮಾಡಿದ್ದು, ಇದರಲ್ಲಿ ಗನ್‌ಮ್ಯಾನ್ ಆಗಿದ್ದ ಸುಭಾಶ್ ಎನ್ನುವ ಪೇದೆ ಶಾಮೀಲಾಗಿರುವುದು ಇದೆ. ಆರಂಭದಲ್ಲಿ ಮೇಟಿ ನಿರಾಕರಿಸಿದರೂ ಕೊನೆಗೆ ರಾಜೀನಾಮೆ ನೀಡಬೇಕಾಗಿ ಬಂದದ್ದು ಕಾಂಗ್ರೆಸ್ ಪಕ್ಷಕ್ಕೆ, ಸರಕಾರ-ಕ್ಕೆ ಬಿದ್ದ ಪ್ರಬಲ ಏಟು. ಇನ್ನೂ ಕನಿಷ್ಠ ಇಬ್ಬರು ಸಚಿವರ ತಲೆ ದಂಡಕ್ಕೆ ರಂಗ ಸಿದ್ಧವಾಗಿದೆ ಎಂಬ ಸುದ್ದಿ ಹಬ್ಬಿರುವುದು ರಾಜ್ಯದ ರಾಜಕಾರಣದ ತೀವ್ರ ವಿದ್ಯಾಮಾನಗಳ ತಿರುವಿಗೆ ಕಾರಣವಾಗಲೂಬಹುದು. ತೀವ್ರವಾದ ಗೊಂದಲ, ಆಘಾತಗಳಿಗೆ ಕಾರಣವಾಗಿವೆ. ಸಾರ್ವಜನಿಕರ ಸೇವೆಗೆಂದು ಈ ರಂಗದಲ್ಲಿರುವವರು ತಲುಪಿರುವ ನೈತಿಕ ಅಧಃಪತನ ಪ್ರಜಾಪ್ರಭುತ್ವ ವ್ಯವಸ್ಥೆಗೆ ಗಂಡಾಂತರಕಾರಿಯಾಗಿದೆ.

ಮುಖ್ಯವಾದ ಅಂಶವೆಂದರೆ ರಾಜ್ಯದಲ್ಲಿ, ಭೀಕರ ಬರ ಬಾಯಿ ತೆರೆದಿದೆ. ಕೇಂದ್ರ ಸರಕಾರದ ನೋಟುಗಳ ಬದಲಾವಣೆ ದುಡಿವ ಜನರನ್ನೂ ದಿಕ್ಕರಿಸಿದೆ. ಕೇಂದ್ರ ಸರಕಾರದ ನೀತಿಗಳೆದುರು ಬೆಳೆಯುತ್ತಿರುವ ಅತೃಪ್ತಿ. ಹೀಗಾಗೀ ದೇಶ ಮಾರುವ ಮೋದಿ ನೀತಿಗಳ ಅಪಾಯ ಜನರಿಗೆ ತಿಳಿಯದಂತೆ ಮಾಡಲು ಬಿಜೆಪಿ ಆರ್‌ಎಸ್‌ಎಸ್ ಪರಿವಾರ ರಾಜ್ಯದಲ್ಲಿ ವ್ಯಾಪಕ ಕೋಮು ವಿಭಜನೆಯ ಧೃವೀಕರಣಕ್ಕಾಗಿ ವ್ಯಾಪಕ ಗಲಭೆಗಳನ್ನೂ ಹುಟ್ಟು ಹಾಕುತ್ತಿದೆ. ಒಂದೆಡೆ ಉದಾರೀಕರಣ ಹುಟ್ಟು ಹಾಕಿದ ಹಗರಣಗಳು, ಅಕ್ರಮಗಳ ಕ್ರೌರ್ಯದ ಮುಖ. ಭ್ರಷ್ಟತೆ ಅನಾವರಣವಾಗುತ್ತಿರುವಾಗಲೇ, ರಾಜ್ಯದ ಕಾಂಗ್ರೆಸ್ ಸರಕಾರ ಮತ್ತು ಆ ಪಕ್ಷದ ದಿವಾಳಿತನವೂ ಹೊರ ಬಂದು, ಜನ ಕೋಮುವಾದೀ ರಾಜಕೀಯವನ್ನೂ ಮುಖಾಮುಖಿಯಾಗಿ ಎದುರಿಸುವ ಛಾತಿಯನ್ನೂ ದುರ್ಬಲಗೊಳಿಸುತ್ತಿದೆ. ಬಂದರ್ಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳು ಪರಸ್ಪರ ಪರ್ಯಾಯ ಅಲ್ಲ ಎಂಬುದನ್ನೂ ಈ ಪ್ರಕರಣಗಳು ಮತ್ತೇ ಸಾಬೀತು ಮಾಡಿತ್ತಿವೆ.

ಇದೇ ಹೊತ್ತಿನಲ್ಲಿ ಗಮನಿಸಬೇಕಾದ್ದು, ರಾಜ್ಯದಲ್ಲಿ ಬಿಜೆಪಿಯನ್ನು ಅಧಿಕಾರಕ್ಕೆ ತರಲು ಇಡೀ ಸಂಘ ಪರಿವಾರ ಆಕ್ರಮಣಕಾರಿಯಾಗಿ ಧಾವಿಸುತ್ತಿರುವುದು. ಬಾಬಾಬುಡನ್‌ಗಿಯ ಬಾಬಾ ಬುಡನ್ ದರ್ಗಾ ಪೀಠದಲ್ಲಿ ಹಿಂದೆಂದೂ ಇಲ್ಲದ ಸುಪ್ರೀಂಕೋರ್ಟ್ ಆದೇಶಕ್ಕೆ ವಿರುದ್ಧವಾದ 'ದತ್ತ ಜಯಂತಿ'ಯನ್ನು ಆಚರಿಸಿ ಪರಂಪರೆ, ಸಂವಿಧಾನವನ್ನು ಸಂಘ ಪರಿವಾರ ಉಲ್ಲಂಘಿಸಿ ಸೌಹಾರ್ದತೆಯ ಕೇಂದ್ರವನ್ನು ಮತೀಯಕರಣಗೊಳಿಸುತ್ತಿವೆ. 'ಹನುಮ ಜಯಂತಿ; ಹೆಸರಿನಲ್ಲಿ ಹಿಂದೆಂದೂ ಇಲ್ಲದ ಮಾಲಾಧಾರಣೆ, ಇತ್ಯಾದಿ ಮೂಲಕ ಗಲಭೆ ಎಬ್ಬಿಸುತ್ತಿದೆ. ಕರಾವಳಿಯಲ್ಲಿ ತುಳು ಪರಂಪರಯನ್ನೇ ಬುಡಮೇಲು ಮಾಡುತ್ತಿದೆ. ಹೀಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಆಕ್ರಮಣಕಾರಿಯಾಗಿ ಸಂಘ ಪರಿವಾರ ಜನರನ್ನೂ ಕೋಮುವಾದದ ಸುತ್ತ ಕೇಂದ್ರೀಕರಿಸುತ್ತಿದೆ. ಹಾಗೇ ಬಿಜೆಪಿ ತಂತ್ರ-ಕುತಂತ್ರಗಳನ್ನು ಹೊಸೆದು ರಂಗಕ್ಕೆ ಇಳಿದಿದೆ. ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನೂ ಶಿಥಿಲಗೊಳಿಸಲು ವ್ಯವಸ್ಥಿತ ಧಾಳಿಗಳನ್ನೂ ಯೋಜಿಸಿರುವುದು ನಿರ್ಲಕ್ಷಿಸಲಾಗದು. ಕೇಂದ್ರ ಸರಕಾರ ಸರ್ವ ಬಲವನ್ನೂ ಬಳಸಲಾಗುತ್ತಿದೆ.

ಆದರೆ ಇದನ್ನೂ ಎದುರಿಸಲು ಕಾಂಗ್ರೆಸ್ ಸಿದ್ಧವಿದೆಯೇ ? ಎಂದರೆ ಆ ಸೂಚನೇಗಳೇ ಕಾಣುತ್ತಿಲ್ಲ. ಮೇಲಾಗಿ ಬಿಜೆಪಿಗೆ ಆಹಾರವನ್ನೂ ಕಾಂಗ್ರೆಸ್ ಒದಗಿಸುತ್ತಿದೆ. ಜನಾರ್ಧನ್ ಪೂಜಾರಿಯಂತಹ ಹಿರಿಯ ನಾಯಕರೂ ಕಾಂಗ್ರೆಸ್ ವಿರುದ್ಧ ಬಹಿರಂಗ ಸಮರ ಸಾರಿದ್ದಾರೆ. ಜೆಡಿಎಸ್ ಯಥಾ ರೀತಿ ಮಾಧ್ಯಮಗಳ ಮೇಲೆ ಘರ್ಜನೆಯ ಹೋರಟಿದೆ. ಈ ಸನ್ನಿವೇಶದಲ್ಲಿ ಜನತೆಯ ಪ್ರಶ್ನೆಗಳು ಮುನ್ನೆಲೆಗೆ ಬರಬೇಕಿದೆ. ಪರ್ಯಾಯಗಳ ರಾಜಕೀಯಕ್ಕಾಗಿ ಆಂದೋಲನ ಯಶಸ್ವಿಗೊಳಿಸಬೇಕಾಗಿದೆ.

ಕ್ಯೂಬಾದಲ್ಲಿ ಉಚಿತ ಶಿಕ್ಷಣ, ಆರೋಗ್ಯ



ಓದು, ವಿಚಾರ ಮಾಡು ಮತ್ತು ಪ್ರಶ್ನಿಸು ಎಂಬುದು ಕ್ಯಾಸ್ಟ್ರೋ ಅವರ ಸಂದೇಶವಾಗಿತ್ತು. ನಾಯಕರು ಹೇಳುವ ಮಾತುಗಳನ್ನು ಕುರುಡಾಗಿ ನಂಬಬಾರದು. ಪ್ರತಿಯೊಂದು ವಿಷಯವನ್ನು ಪರಾಮರ್ಶಿಸಿ ಜನರು ತೀರ್ಮಾನ ತೆಗೆದುಕೊಳ್ಳಬೇಕು ಎಂದು ಫಿಡೆಲ್ ಕ್ಯಾಸ್ಟ್ರೋ ಬಯಸಿದ್ದರು. ವಿಶ್ವದ ಸಣ್ಣ ದೇಶಗಳಲ್ಲೊಂದಾದ ಕ್ಯೂಬಾದಲ್ಲಿ ಎಲ್ಲರಿಗೂ ಉಚಿತ ಆರೋಗ್ಯ ಮತ್ತು ಉಚಿತ ಶಿಕ್ಷಣ ನೀಡಲಾಗುತ್ತಿದೆ. ಆದರೆ ಭಾರತದಲ್ಲಿ ಅಸ್ಪೃಶ್ಯತೆಯನ್ನು ಇಂದಿಗೂ ನಿವಾರಣೆ ಮಾಡಲಾಗಿಲ್ಲ ಎಂದು ಸಿಪಿಎಂ ರಾಜ್ಯ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್ ತಿಳಿಸಿದ್ದಾರೆ.

ತುಮಕೂರಿನ ಗಾಂಧಿನಗರಲ್ಲಿ ಡಿಸೆಂಬರ್ 04ರಂದು ಸಿಐಟಿಯು, ಎಸ್‌ಎಫ್‌ಐ ಮತ್ತು ಡಿವೈಎಫ್‌ಐ ವತಿಯಿಂದ ಕ್ಯೂಬಾ ಮಾಜಿ ಅಧ್ಯಕ್ಷ ಫಿಡೆಲ್ ಕ್ಯಾಸ್ಟ್ರೋ ಅವರಿಗೆ ಶ್ರದ್ಧಾಂಜಲಿ ಸಭೆ ಹಮ್ಮಿಕೊಳ್ಳಲಾಗಿತ್ತು.

ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಸಿಪಿಎಂ ರಾಜ್ಯ ಮಂಡಳಿ ಸದಸ್ಯ ಜಿ.ಎನ್.ನಾಗರಾಜ್, ಫಿಡೆಲ್ ಕ್ಯಾಸ್ಟ್ರೋ ಕ್ಯೂಬಾದ ಅಧಿಕಾರ ವಹಿಸಿಕೊಂಡ ಒಂದು ವಾರದಲ್ಲೇ ಬಂಡವಾಳಗಾರರು ಅಕ್ರಮವಾಗಿ ಹೊಂದಿದ್ದ ಎಲ್ಲರ ಆಸ್ತಿಯನ್ನು ಸರ್ಕಾರದ ವಶಕ್ಕೆ ಪಡೆದುಕೊಂಡರು. ಬಾಡಿಗೆ ಮನೆಯಲ್ಲಿ ವಾಸ ಮಾಡುತ್ತಿದ್ದವರಿಗೆ ಅರ್ಧ ಬಾಡಿಗೆ ನೀಡುವಂತೆ ಆದೇಶಿಸಿದರು. ಅರ್ಧದಷ್ಟು ವಿದ್ಯುತ್ ಶುಲ್ಕವನ್ನು ಕಡಿತ ಮಾಡಲಾಯಿತು. ಇದರಿಂದ ಎಲ್ಲ ಜನರ ಕೈಯಲ್ಲಿ ಹಣ ಉಳಿತಾಯವಾಯಿತು. ತಮಗೆ ಬೇಕಾದ ವಸ್ತುಗಳನ್ನು ಕೊಳ್ಳಲು ಅನುಕೂಲವಾಯಿತು. ಹೀಗಾಗಿ ಸಾಕಷ್ಟು ಬದಲಾವಣೆಯಾಯಿತು ಎಂದು ಹೇಳಿದರು.

ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಟಿ.ಆರ್. ರೇವಣ್ಣ ಮಾತನಾಡಿ, ಫಿಡಲ್ ಕ್ಯಾಸ್ಟ್ರೋ ತತ್ವ ಸಿದ್ಧಾಂತಗಳನ್ನು ಎಲ್ಲರೂ ಅಳವಡಿಸಿಕೊಳ್ಳಬೇಕು. ಸಣ್ಣ ರಾಷ್ಟ್ರವೊಂದರ ಅಧ್ಯಕ್ಷರಾಗಿದ್ದರೂ ವಿಶ್ವದ ಗಮನ ಸೆಳೆದರು. ಲೆನಿನ್‌ನಂತಹ ಮಹಾನ್ ನಾಯಕರು ಕೂಡ ವಿಶ್ವದಲ್ಲಿ ಶಾಂತಿ ನೆಲಸಬೇಕೆಂದು ಬಯಸಿದರು. ಮಹಾತ್ಮ ಗಾಂಧಿಗಿಂತಲೂ ಲೆನಿನ್ ಶಾಂತಿ ಇರಬೇಕೆಂದು ಪ್ರತಿಪಾದಿಸಿದವರಲ್ಲಿ ಪ್ರಮುರಾಗಿದ್ದಾರೆ ಎಂದರು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಿಐಟಿಯು ಜಿಲ್ಲಾಧ್ಯಕ್ಷ ಸ್ಯೆಯದ್ ಮುಜೀಬ್ ಮಾತನಾಡಿದರು.

ಸಭೆಯಲ್ಲಿ ಕಟ್ಟಡ ಕಾರ್ಮಿಕ ಸಂಘ ಅಧ್ಯಕ್ಷ ಬಿ.ಉಮೇಶ್, ಸಮುದಾಯ ಕಾರ್ಯದರ್ಶಿ ಕೆ.ಈ.ಸಿದ್ದಯ್ಯ, ಸಿಐಟಿಯು ಪ್ರಧಾನ ಕಾರ್ಯದರ್ಶಿ ಎನ್.ಕೆ.ಸುಬ್ರಹ್ಮಣ್ಯ, ಷಣ್ಮುಖಪ್ಪ, ಡಿವೈಎಫ್‌ಐ ಎಸ್. ರಾಘವೇಂದ್ರ ಉಪಸ್ಥಿತರಿದ್ದರು. ಸಮುದಾಯದ ಸದಸ್ಯ ಲಕ್ಷ್ಮಣ್ ಕ್ರಾಂತಿಗೀತೆ ಹಾಡಿ, ಸ್ವಾಗತಿಸಿದರು. ರಾಮಚಂದ್ರು ವಂದಿಸಿ, ಎಸ್‌ಎಫ್‌ಐ ಕಾರ್ಯದರ್ಶಿ ಈ.ಶಿವಣ್ಣ ನಿರೂಪಿಸಿದರು.

ವರದಿ: ಎಸ್.ರಾಘವೇಂದ್ರ

ಕೋಲಾರದಲ್ಲಿ ಅಪ್ರತಿಮ ಕ್ರಾಂತಿಕಾರಿ ಫಿಡೆಲ್ ಕ್ಯಾಸ್ಟ್ರೋಗೆ ಶ್ರದ್ಧಾಂಜಲಿ


ಕ್ಯೂಬಾ ದೇಶದ ಜನತೆಯ ನೇತಾರ ಸಮಾಜವಾದಿ ಕ್ರಾಂತಿಕಾರಿ ಸಂಗಾತಿ ಫಿಡೆಲ್ ಕ್ಯಾಸ್ಟ್ರೋರವರಿಗೆ ಡಿಸೆಂಬರ್ 04ರಂದು ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಸಿಪಿಐ(ಎಂ) ತಾಲೂಕು ಸಮಿತಿಯಿಂದ ಶ್ರದ್ಧಾಂಜಲಿ ಸಭೆ ನಡೆಯಿತು.

ಶ್ರದ್ಧಾಂಜಲಿ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದ ಬಂಗಾರಪೇಟೆ ತಾಲೂಕು ಸಮಿತಿಯ ಕಾರ್ಯದರ್ಶಿ ಕಾ||ಜಿ.ಅರ್ಜುನನ್ ರವರು ಮಾತಾಡುತ್ತಾ ಫಿಡೆಲ್ ಕ್ಯಾಸ್ಟ್ರೋರವರು ಕ್ರಾಂತಿಕಾರಿ ಹೋರಾಟದ ಮೂಲಕ ಕ್ಯೂಬಾ ದೇಶದಲ್ಲಿ ಸಮಾಜವಾದವನ್ನು ಸ್ಥಾಪಿಸಿದರು. ಸಾಮ್ರಾಜ್ಯಶಾಹಿಗೆ ಒಂದು ಸವಾಲಾಗಿ ಜೀವನದುದ್ದಕ್ಕೂ ಸೆಟೆದು ನಿಂತವರು. ಆರಂಭದಲ್ಲಿ ಗೆರಿಲ್ಲ ಯುದ್ಧ ತಂತ್ರದ ಮೂಲಕ ಸಶಸ್ತ್ರ ಹೋರಾಟವನ್ನು ಆರಂಭಿಸಿದ ಅವರು ನಂತರ ಕಾರ್ಮಿಕರನ್ನು, ರೈತರನ್ನು, ಜನಸಾಮಾನ್ಯರನ್ನು ಒಗ್ಗೂಡಿಸಿ ಬಂಡವಾಳಶಾಹಿ ಸರ್ವಾಧಿಕಾರಿ ಸರ್ಕಾರಕ್ಕೆ ವಿರುದ್ಧವಾಗಿ ಕ್ರಾಂತಿ ನಡೆಸಿದ ಪ್ರಪಂಚದ ಹೆಸರಾತ ಜನನಾಯಕ ಫಿಡೆಲ್ ಕ್ಯಾಸ್ಟ್ರೋ. ದೇಶದಲ್ಲಿ ಜನತೆಗಾಗಿ ಹೋರಾಡುತ್ತಿರುವ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷಕ್ಕೆ ಒಂದು ಬಲವಾದ ಶಕ್ತಿಯಾಗುತ್ತಿದೆ ಎಂದು ಶ್ರದ್ಧಾಂಜಲಿ ಅರ್ಪಿಸಿದರು.

ಜಿಲ್ಲಾ ಸಮಿತಿ ಸದಸ್ಯ ಸಂಗಾತಿ ಕಾ||ಅಚ್ಯುತರವರು ಮಾತಾಡುತ್ತಾ ಮಹಾನ್ ಮಾರ್ಕ್ಸ್‌ವಾದಿ ಚಿಂತಕ ಫಿಡೆಲ್ ಕ್ಯಾಸ್ಟ್ರೋರವರು ಸಣ್ಣ ವಯಸ್ಸಿನಲ್ಲೇ ಭ್ರಷ್ಟಾಚಾರದ ವಿರುದ್ಧ, ಬಡತನದ ವಿರುದ್ಧ, ಅನಾರೋಗ್ಯದ ವಿರುದ್ಧ ಹೋರಾಡಲು ಜನತೆಯನ್ನು ಎಚ್ಚರಗೊಳಿಸಿದರು. ಅಪಾರ ಜನತೆಯ ವಿಶ್ವಾಸವನ್ನು ಗಳಿಸಿ ಆ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಮಾರ್ಕ್ಸ್‌ವಾದವನ್ನು ಅಳವಡಿಸಿಕೊಂಡು ಸಾಮಾನ್ಯ ಜನತೆಯ ದನಿಗೆ ದನಿಯಾಗಿ ಸಮಾಜವಾದಿ ಸಮಾಜ ನಿರ್ಮಾಣ ಮಾಡುತ್ತಾ ಕ್ರಾಂತಿಯ ಆಶಯವನ್ನು ಕಡೆಯವರೆಗೂ ಕಾಪಾಡಿಕೊಂಡು ಬಂದರು. ನಮ್ಮ ಪ್ರದೇಶದಲ್ಲಿ ಪಕ್ಷವನ್ನು, ಸಂಘಟನೆಗಳನ್ನು ಐಕ್ಯತೆಯಿಂದ ಬಲಿಷ್ಠವಾಗಿ ಕಟ್ಟುವುದೇ ನಾವು ಅವರಿಗೆ ಅರ್ಪಿಸುವ ಕ್ರಾಂತಿಕಾರಿ ಶ್ರದ್ಧಾಂಜಲಿಯಾಗುತ್ತದೆ ಎಂದರು.

ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾಗಿರುವ ಕಾಂ||ವಿ.ತಂಗರಾಜ್, ಕಾಂ||ವಿ.ಶ್ರೀನಿವಾಸನ್, ಕಾಂ||ಎ. ಆರ್. ಬಾಬು ಮಾತನಾಡಿದರು.

20ನೇ ಶತಮಾನದ ಮಹಾನ್ ಕ್ರಾಂತಿಕಾರಿ ಫಿಡೆಲ್ ಕ್ಯಾಸ್ಟ್ರೋರವರಿಗೆ ಮೈಸೂರಿನಲ್ಲಿ ಹಮ್ಮಿಕೊಂಡಿದ್ದ ಶ್ರದ್ಧಾಂಜಲಿ ಸಭೆಯನ್ನು ಉದ್ದೇಶಿಸಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಹಾಗೂ ಮಾಜಿ ಶಾಸಕರಾದ ಕಾಂ||ಜಿ.ವಿ.ಶ್ರೀರಾಮರೆಡ್ಡಿರವರು ಮಾತನಾಡಿದರು. ಡಿಸೆಂಬರ್ 07ರಂದು ಹಮ್ಮಿಕೊಂಡಿದ್ದ ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಕಾಂ||ಕೆ.ಬಸವರಾಜು ವಹಿಸಿದ್ದರು.



ಮುಖ್ಯ ಅತಿಥಿಗಳಾಗಿ ಸಿಪಿಐ ಮುಖಂಡರಾದ ಕಾಂ||ರಾಜು, ಎಸ್‌ಯುಸಿಐ(ಸಿ) ಜಿಲ್ಲಾ ಕಾರ್ಯದರ್ಶಿ ಕಾಂ||ರವಿ ಉಪಸ್ಥಿತರಿದ್ದರು. ಎಡಪಕ್ಷದ ಸಂಗಾತಿಗಳು ಶ್ರದ್ಧಾಂಜಲಿಯಲ್ಲಿ ಭಾಗವಹಿಸಿ ತಮ್ಮ ನಮನವನ್ನು ಸಲ್ಲಿಸಿದರು.

ಕರಾವಳಿಯ ಕೋಮುವಾದಿ ಶಕ್ತಿಗಳನ್ನು ಮಣಿಸಲು ಜಿ.ವಿ.ಶ್ರೀರಾಮರೆಡ್ಡಿ ಕರೆ



ಸೌಹಾರ್ದದ ನೆಲೆಯಾಗಿದ್ದ ಕರಾವಳಿಯಲ್ಲಿ ಕಳೆದ ಕೆಲವು ವರ್ಷಗಳಿಂದ ಕೋಮುವಾದ ತಳವೂರಿದ್ದು, ಸಂಘ ಪರಿವಾರದ ಸಂಘಟನೆಗಳು ಅದರಲ್ಲಿ ಪ್ರಧಾನ ಪಾತ್ರ ವಹಿಸಿದೆ. 1925ರಲ್ಲಿ ಆರ್‌ಎಸ್‌ಎಸ್ ಹುಟ್ಟಿದಂದಿನಿಂದ ದೇಶದಲ್ಲಿ ಕೋಮುವಾದ ತೀವ್ರವಾಗಿ ಬೆಳೆದು ಬಂದಿರುವುದು ಬಾಬ್ರಿ ಮಸೀದಿ ನಾಶದ ಚಳುವಳಿಯ ಬಳಿಕ. ಕರಾವಳಿಯು ಹಿಂದುತ್ವದ ಪ್ರಯೋಗ ಶಾಲೆಯಾಗಿದ್ದು, ಕರಾವಳಿಯಲ್ಲಿ ಲವ್‌ಜಿಹಾದ್, ಗೋರಕ್ಷಣೆ, ನೈತಿಕ ಪೊಲೀಸ್‌ಗಿರಿ ಹೆಸರಲ್ಲಿ ಅಲ್ಪಸಂಖ್ಯಾಕರು, ಮಹಿಳೆಯರ ಮೇಲೆ ದಾಳಿಗಳು ನಡೆದಿವೆ. ಕೊಲೆಗಳು ನಡೆದಿವೆ.

ಕಾಂಗ್ರೆಸ್ಸಿಗಾಗಲೀ, ಪ್ರಾದೇಶಿಕ ಪಕ್ಷಗಳಿಗಾಗಲೀ ಹಿಂದುತ್ವದ ದಾಳಿಗಳನ್ನು ತಡೆಯುವ ಶಕ್ತಿಯಿಲ್ಲ. ಏಕೆಂದರೆ ಅವುಗಳು ಅಧಿಕಾರಕ್ಕಾಗಿ ಕೋಮುವಾದಿ ಶಕ್ತಿಗಳೊಂದಿಗೆ ರಾಜಿ ಮಾಡಿಕೊಳ್ಳುತ್ತಿವೆ. ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ)–ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ ಕೋಮುವಾದಿ ಶಕ್ತಿಗಳನ್ನು ದೇಶದಾದ್ಯಂತ ಎದುರಿಸುತ್ತಿವೆ. ಇಂತಹ ಎಡಪಕ್ಷಗಳನ್ನು ಬಲಪಡಿಸಿದಲ್ಲಿ ಮಾತ್ರ ಕೋಮುವಾದಿಗಳನ್ನು ಮಣಿಸಲು ಸಾ ಧ್ಯ ಎಂಬುದಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಜಿ. ವಿ. ಶ್ರೀರಾಮರೆಡ್ಡಿ ಕರೆ ನೀಡಿದರು.

ಅವರು ಡಿಸೆಂಬರ್ 12ರಂದು ಮಂಗಳೂರಿನ ಪುರಭವನದಲ್ಲಿ ಸಿಪಿಐ(ಎಂ) ದಕ್ಷಿಣ ಕನ್ನಡ ಜಿಲ್ಲಾ ಸಮಿತಿ ಏರ್ಪಡಿಸಿದ್ದ ಕೋಮುವಾದದ ವಿರುದ್ಧ ಜಿಲ್ಲಾ ಸೌಹಾರ್ದ ಸಮಾವೇಶವನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

ಹಿಂದುತ್ವ ಕೋಮುವಾದದ ಪ್ರತಿಪಾದಕರಾದ ಆರ್‌ಎಸ್‌ಎಸ್‌ನ ಶತ್ರುಗಳು ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟೀಷರು ಆಗಿರಲಿಲ್ಲ. ಬದಲು ಅವರ ಬರಹಗಳಲ್ಲಿ ಕಂಡು ಬಂದಂತೆ ಕಮ್ಯೂನಿಸ್ಟರು, ಮುಸ್ಲಿಮರು ಮತ್ತು ಕ್ರೈಸ್ತರು ಅವರ ಶತ್ರುಗಳು. ನರೇಂದ್ರ ಮೋದಿ ಅಧಿಕಾರಕ್ಕೆ ಬಂದ ಮೇಲೆ ನಾಲ್ಕನೆಯದಾಗಿ ಬೌದ್ಧಿಕ ಕೇಂದ್ರಗಳಾದ ವಿಶ್ವವಿದ್ಯಾನಿಲಯಗಳನ್ನು ನಾಶಗೊಳಿಸುವ ಪ್ರಯತ್ನ ನಡೆಯುತ್ತಿದೆ. ಐದನೆಯದಾಗಿ ದಲಿತರ ಮೇಲೆ ದಾಳಿಗಳು ಹೆಚ್ಚುತ್ತಿವೆ. ಮನುಷ್ಯರ ಆಹಾರ ಹಕ್ಕಿನ ಮೇಲೆ ದಾಳಿ ನಡೆಯುತ್ತಿವೆ. ಯಾವ ಬಟ್ಟೆ ತೊಡಬೇಕು, ಯಾವ ಆಹಾರ ಉಣಬೇಕು, ಏನನ್ನು ಮಾತನಾಡಬೇಕು ಎಂದು ಸಂಘ ಪರಿವಾರದ ಸಂಘಟನೆಗಳು ನಿರ್ದೇಶನ ನೀಡುತ್ತವೆ. ವ್ಯಕ್ತಿಯ ಹಕ್ಕು ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಡೆಯುವ ದಾಳಿಗಳು ನಮ್ಮ ಸಂವಿಧಾನದ ಮೇಲೆಯೇ ನಡೆಯುತ್ತಿರುವ ದಾಳಿಗಳಾಗಿವೆ.

ಇತ್ತೀಚೆಗೆ ಮಾಧ್ಯಮದ ಗುಂಪೊಂದು ನಡೆಸಿದ ಸ್ಟಿಂಗ್ ಕಾರ್ಯಾಚರಣೆಯಲ್ಲಿ ಸಂಘ ಪರಿವಾರದ ಕಾರ್ಯಕರ್ತರು ತಾವೇ 'ಲವ್ ಜಿಹಾದ್' ಸೃಷ್ಟಿಸಿ ದಾಳಿ ಮಾಡಿದವರೆಂದು ಹೇಳಿದ್ದು ವರದಿಯಾಗಿದೆ. ಅದೇ ರೀತಿ ಪೊಲೀಸ್ ಇಲಾಖೆಯಲ್ಲೂ ದ.ಕ ಜಿಲ್ಲೆಯಲ್ಲಿ 30% ಮಂದಿ ಹಿಂದುತ್ವವಾದಿಗಳಿದ್ದಾರೆಂದು ಹೇಳಿದ್ದೂ ವರದಿಯಾಗಿದೆ. ಈ ಕಾರಣದಿಂದಲೇ ಕೋಮುವಾದಿ ಶಕ್ತಿಗಳು ದಿಟ್ಟ, ನೇರ ನಡೆಯ ಅಧಿಕಾರಿಗಳನ್ನು ವರ್ಗಾವಣೆ ಮಾಡಲು ಪ್ರಯತ್ನಿಸುತ್ತಿದ್ದಾರೆಂದು ತಿಳಿದು ಬರುತ್ತದೆ. ಸಿದ್ದರಾಮಯ್ಯನವರ ಕಾಂಗ್ರೆಸ್ ಸರಕಾರ ಕೋಮುವಾದಿ ಚಟುವಟಿಕೆ ನಡೆಸಿದವರ ಮೇಲೆ ಕ್ರಮ ಕೈಗೊಳ್ಳುತ್ತಿಲ್ಲ. ಅಂತಹವರ ಚಟುವಟಿಕೆಗೆ ರಕ್ಷಣೆ ನೀಡಲಾಗುತ್ತಿದೆ. ಆದರೆ ರೈತರ, ಕೃಷಿ ಕಾರ್ಮಿಕರ ಅಖಿಲ ಭಾರತ ಜಾಥಾದ ಮೆರವಣಿಗೆಗೆ ಅವಕಾಶ ಕೊಡುತ್ತಿಲ್ಲ. ಕಾಂಗ್ರೆಸ್ ಪಕ್ಷ ಕೋಮುವಾದದ ವಿರುದ್ಧ ಅಳುಕಿ ನಡೆಯುತ್ತಿದೆ ಎಂದು ಜಿ. ವಿ. ಶ್ರೀರಾಮರೆಡ್ಡಿ ಟೀಕಿಸಿದರು.

ಜಾತ್ಯತೀತ ನಿಲುವು ಎಂದರೆ ಧರ್ಮನಿರಪೇಕ್ಷತೆ. ಅಂದರೆ ರಾಜಕಾರಣದಲ್ಲಿ ಧರ್ಮವನ್ನು ಸೇರಿಸಕೂಡದು. ಧರ್ಮ ರಾಜಕೀಯವನ್ನು ನಿಯಂತ್ರಣ ಮಾಡಬಾರದು. ಹಾಗೆ ಮಾಡಿದಲ್ಲಿ ದೇಶ ನಾಶವಾದಂತೆಯೇ ಸರಿ. ಎರಡನೆಯ ಮಹಾಯುದ್ಧ ಕಾಲದಲ್ಲಿ ಜರ್ಮನಿ ಮತ್ತು ಇಟಲಿ ದೇಶಗಳು ನಾಶವಾದುದು ಧರ್ಮ ರಾಜಕೀಯವನ್ನು ನಿಯಂತ್ರಣ ಮಾಡಿದ್ದರಿಂದ. ಕೊನೆಗೂ ಹಿಟ್ಲರ್‌ನ ಪ್ಯಾಸಿಸ್ಟ್ ಸೈನ್ಯವನ್ನು ಸೋಲಿಸಿದ್ದು ರಷ್ಯಾದ ಕೆಂಪು ಸೇನೆ. ಇವತ್ತು ಭಾರತದಲ್ಲಿಯೂ ಎಲ್ಲ ಬಗೆ–ಯ ಕೋಮುವಾದವನ್ನು ಎದುರಿಸುತ್ತಿರುವುದು ಸಿಪಿಐ(ಎಂ) ಮತ್ತು ಎಡಪಕ್ಷಗಳು ಮಾತ್ರವೇ. ಆದುದರಿಂದ ಕೋಮುವಾದವನ್ನು ದೃಢವಾಗಿ ಎದುರಿಸಲು ಎಡಪಕ್ಷಗಳನ್ನು ಬಲಪಡಿಸಬೇಕಾಗಿದೆ ಎಂದು ಕರೆ ನೀಡಿದರು.

ಲೇಖಕಿ ಹಾಗೂ ನಿವೃತ್ತ ಪ್ರಾಂಶುಪಾಲೆ ಚಂದ್ರಕಲಾ ನಂದಾವರ ಮಾತನಾಡಿ, ಕೋಮುವಾದಿ ಶಕ್ತಿಗಳು ಶ್ರೀಮಂತ ಹಾಗೂ ಮೇಲು ವರ್ಗದವರಿಂದ ನಿರ್ದೇಶಿಸಲ್ಪಟ್ಟಿದ್ದು, ಅವರುಗಳು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸುತ್ತಾ ಬಡ ದಲಿತ, ಹಿಂದುಳಿದ ಮಕ್ಕಳನ್ನು ಕೋಮುವಾದಿ ಗೂಂಡಾ ವೃತ್ತಿಗೆ ತಳ್ಳುತ್ತಿರುವ ಸಂಘಟನೆಗಳಾಗಿವೆ. ಇದ–ಕ್ಕೆ ದುಡಿಯುವ ವರ್ಗದ ಕುಟುಂಬದ ಮಕ್ಕಳೂ ಬಲಿ ಬಿದ್ದಿದ್ದಾರೆ. ವಿದ್ಯಾಸಂಸ್ಥೆಗಳಲ್ಲಿ ಬಡವರ ಮಕ್ಕಳನ್ನೇ ಕೋಮುವಾದಿಗಳು ತಮ್ಮ ಹೋರಾಟದ ಕಾಲಾಳುಗಳಾಗಿ ಮಾಡಿದ್ದಾರೆ. ಆಗೊಮ್ಮೆ ಈಗೊಮ್ಮೆ ಅವರು ನೀಡುವ ಕೈಕಾಸಿಗೆ ಬಲಿಯಾದ ಯುವಕರು, ಕೆಲಸ ಮಾಡದೆ ವೈಭವದ ಜೀವನ ಮಾಡುವ ಕನಸು ಕಾಣುತ್ತಾ ಸಮಾಜಕ್ಕೆ ಹೊರೆಯಾಗುತ್ತಿದ್ದಾರೆ.

ಇವತ್ತು ಸಾಹಿತ್ಯಕ್ಕಾಗಿ ಸಾಹಿತ್ಯವಾಗಬಾರದು. ಜನರನ್ನು ಎಚ್ಚರಿಸುವ ಸಾಹಿತ್ಯಬೇಕು. ಬಹುಸಂಖ್ಯಾಕರ ಶಕ್ತಿಯನ್ನು ಬಳಸಬೇಕು. ಆದರೆ ಮನುಷ್ಯತ್ವವನ್ನು ಮೆರೆಯಬೇಕು. ಧಾರ್ಮಿಕತೆಯ ಸೋಗು ಹಾಕಿ ವಾಣಿಜ್ಯ ನಡೆಸುವವರನ್ನು ಬಹಿರಂಗಗೊಳಿಸಬೇಕು. ಸಹೃದಯತೆಯುಳ್ಳ ಜನರನ್ನು ಒಗ್ಗೂಡಿಸಬೇಕು ಎಂಬುದಾಗಿ ಚಂದ್ರಕಲಾ ನಂದಾವರ ಕರೆ ನೀಡಿದರು.

ಸಮಾರಂಭದ ಅಧ್ಯಕ್ಷತೆಯನ್ನು ಹಿರಿಯ ಕಮ್ಯೂನಿಸ್ಟ್ ಮುಖಂಡ ಕೆ.ಆರ್.ಶ್ರೀಯಾನ್ ವಹಿಸಿದ್ದರು. ಯಾದವ ಶೆಟ್ಟಿ ಸ್ವಾಗತಿಸಿ, ಸಿಪಿಐ(ಎಂ) ದ.ಕ ಕಾರ್ಯದರ್ಶಿ ವಸಂತ ಆಚಾರಿ ವಂದಿಸಿದರು. ಸಿಪಿಐ(ಎಂ) ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಯು.ಬಿ.ಲೋಕಯ್ಯ, ಜೆ.ಬಾಲಕೃಷ್ಣ ಶೆಟ್ಟಿ, ಕೃಷ್ಣಪ್ಪ ಸಾಲಿಯಾನ್, ಸುನಿಲ್ ಕುಮಾರ್ ಬಜಾಲ್ ವೇದಿಕೆಯಲ್ಲಿದ್ದರು.

ಶೇ.50 ರಷ್ಟು ಮಹಿಳಾ ಮೀಸಲಾತಿಗಾಗಿ ಪ್ರಚಾರ ಜಾಥಾ

ಮಹಿಳಾ ಸಮಾನತೆಯ ಹೋರಾಟದ ಮುಂಚೂಣಿಯಲ್ಲಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘನೆಯ 11ನೇ ರಾಷ್ಟ್ರೀಯ ಸಮ್ಮೇಳನ ವಿಶ್ವ ಮಾನವ ಹಕ್ಕುಗಳ ದಿನ ಡಿಸೆಂಬರ್ 10–14ರಲ್ಲಿ ಮಧ್ಯಪ್ರದೇಶದ ಭೂಪಾಲ್ ನಲ್ಲಿ ನಡೆದಿದೆ. ಸಂವಿಧಾನದತ್ತ ಹಕ್ಕುಗಳನ್ನು ರಕ್ಷಿಸಲು ಪಣತೊಟ್ಟ ಸಮ್ಮೇಳನದ ಪೂರ್ವಭಾವಿಯಾಗಿ 'ಶಾಸನ ಸಭೆಗಳಲ್ಲಿ 50% ಮೀಸಲಾತಿಗೆ ನಮ್ಮ ಹಕ್ಕು ನಾವು ಅದನ್ನು ಪಡೆದೇ ಪಡೆಯುತ್ತೇವೆ' ಘೋಷಣೆಯಡಿಯಲ್ಲಿ ಕೇರಳದಿಂದ ಭೂಪಾಲ್ ವರೆಗೆ ರಿಲೇ ಜಾಥಾ ನಡೆದಿದೆ. ತಮಿಳುನಾಡಿನ ಹೊಸೂರಿನಿಂದ ಡಿಸೆಂಬರ್ 3ರಂದು ಕರ್ನಾಟಕಕ್ಕೆ ಪ್ರವೇಶಿಸಿತು.

ಜಾಥವನ್ನು ಜನವಾದಿ ಮಹಿಳಾ ಸಂಘಟನೆ ಹಾಗೂ ಆಟೋರಿಕ್ಷಾ ಡ್ರೈವರ್ಸ್ ಯೂನಿಯನ್ಸ್, ಆನೇಕಲ್ ತಾಲ್ಲೂಕು ಸಮಿತಿ ವತಿಯಿಂದ ಅತ್ತಿಬೆಲೆ ಗಡಿಯಲ್ಲಿ ಸ್ವಾಗತ ಮಾಡುವ ಮುಖಾಂತರ ಬರಮಾಡಿಕೊಳ್ಳಲಾಯಿತು.

ಆನೇಕಲ್‌ನ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣದಲ್ಲಿ ಬಹಿರಂಗ ಸಭೆ ನಡೆಸಿ, ಆನೇಕಲ್ ತಾಲ್ಲೂಕು ಸಂಚಾಲಕರಾದ ಅರ್ಚನ ಮಾತನಾಡಿ 'ಶಾಸನ ಸಭೆಗಳಲ್ಲಿ ಶೇ.50% ರಷ್ಟು ಮೀಸಲಾತಿ ನೀಡಬೇಕು ಆಗ ಮಾತ್ರ ದೇಶದಲ್ಲಿ ಮಹಿಳೆಯರ ಮೇಲಿನ ದೌರ್ಜನ್ಯ ಮತ್ತು ಭ್ರಷ್ಠಚಾರವನ್ನು ತಡೆಗಟ್ಟಲು ಸಾಧ್ಯವಾಗುತ್ತದೆ' ಎಂದು ತಿಳಿಸಿದರು.

ಕಾರ್ಯಕ್ರಮದ ನೇತೃತ್ವವವನ್ನು ಸಂಚಾಲಕರಾದ ಅರ್ಚನ, ಕರ್ನಾಟಕ ಪ್ರಾಂತ ರೈತ ಸಂಘದ ಮುಖಂಡರಾದ ಬಾಲರಾಜ್, ಸಿಐಟಿಯುನ ಚಂದ್ರಶೇಖರ್, ಸುರೇಶ್, ಜಾವೀದ್ ಅಹಮ್ಮದ್ ವಹಿಸಿದರು. ಸಭೆಯಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಹಾಗೂ ಜಿಲ್ಲಾ ಪದಾಧಿಕಾರಿಗಳು ಭಾಗವಹಿಸಿದರು.

ಬೆಂಗಳೂರಿನ ವಿವಿಧ ಬಡಾವಣೆಗಳಲ್ಲಿ ಸಭೆ ನಡೆದು ಅಂದು ಸಂಜೆ 5 ಘಂಟೆಗೆ ನಗರದ ಪುರಭವನದ ಎದುರು ಸಮಾರೋಪಗೊಂಡಿತು. ಅಲ್ಲಿಂದ ಮುಂದಕ್ಕೆ ಚಿಕ್ಕಬಳ್ಳಾಪುರದಲ್ಲಿ ಸಭೆಯನ್ನು ನಡೆಸಿ, ಆಂಧ್ರಪ್ರದೇಶದ ಅನಂತಪುರಕ್ಕೆ ತೆರಳಿತು.

ಜಾಥಾವು ಅನೇಕಲ್ ಅತ್ತಿಬೆಲೆ ಶಾಂತಿನಗರ, ಟೌನ್‌ಹಾಲ್ ಭಾಗದಲ್ಲಿ ಸಭೆಯನ್ನು ನಡೆಸಿತು. ರಾಜ್ಯ ಮುಖಂಡರಾದ ಕೆ.ಎಸ್.ಲಕ್ಷ್ಮೀ, ಕೆ.ಎಸ್.ಶಾರದಾ, ಸುನಂದ, ಶ್ರೀಮತಿ, ಗೌರಮ್ಮ, ಕೆ.ಎಸ್.ವಿಮಲಾ, ಮತ್ತಿತರ ಮುಖಂಡರು ಜಾಥಾದೊಟ್ಟಿಗೆ ಭಾಗವಹಿಸಿದ್ದರು.

'ಅಂಗವಿಕಲರ ಮಾನವ ಸರಪಳಿ'

ದೇಶದಾದ್ಯಂತ ನಡೆದ ಅಂಗವಿಕಲರ ಹೋರಾಟದ ಫಲವಾಗಿ ಕೇಂದ್ರ ಸರ್ಕಾರ ನೂತನ "ಅಂಗವಿಕಲ ವ್ಯಕ್ತಿಗಳ ಹಕ್ಕುಗಳ ಕಾಯಿದೆ"ಯನ್ನು ಅಂತಿಮಗೊಳಿಸಿ ರಾಜ್ಯಸಭೆಯ ಅಜೆಂಡದಲ್ಲಿ ಸೇರಿಸಿದೆ. ಅಂಗವಿಕಲರ ಹೋರಾಟಕ್ಕೆ ಸಂದ ಮೊದಲ ಜಯ ಇದು. ಆದರೆ ಅದೇ ಸಮಯದಲ್ಲಿ ರಾಜ್ಯಸಭೆ ಮುಂದೆ ಅದನ್ನು ಇನ್ನೂ ಮಂಡಿಸಲಾಗಲಿಲ್ಲ.

ಈ ಬಾರಿಯ ಚಳಿಗಾಲದ ಅಧಿವೇಶನದಲ್ಲಿ ಸಂಸತ್ತಿನ ಎರಡು ಸದನದಲ್ಲಿ ಮಂಡಿಸಿ ಅಂಗೀಕರಿಸಿ ಕೂಡಲೆ ಜಾರಿ ಮಾಡಬೇಕೆಂದು ಒತ್ತಾಯಿಸಲು ಅಂಗವಿಕಲರ ದಿನಾಚರಣೆಯ ದಿನವಾದ ಡಿಸೆಂಬರ್ 03ರಂದು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದ ಬಳಿ ಒಂದು ಅಂಗವಿಕಲ ವ್ಯಕ್ತಿಗಳ ಸಮುದಾಯದ ಮಾನವ ಸರಪಳಿ ರಚಿಸಿ ಒತ್ತಾಯಿಸಿದರು.

ಅದೇ ಸಮಯದಲ್ಲಿ ಈಗ ರಾಜ್ಯಸಭೆ ಮುಂದೆ ಮುಂಡಿಸಲಾಗುವ ಕಾಯಿದೆಯಲ್ಲಿ ಕೆಲವು ಮುಖ್ಯ ಕೊರತೆಗಳಿವೆ, ಉದ್ಯೋಗ ಮತ್ತು ಶಿಕ್ಷಣ ಮೀಸಲಾತಿ ಪ್ರಸ್ತಾವವನ್ನು ಶೇ.5% ರಿಂದ ಶೇ.4%ಕ್ಕೆ ಇಳಿಸಲಾಗಿದೆ. ಉದ್ಯೋಗಕ್ಕೆ ಸಂಬಂಧಿಸಿದಂತೆ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪನ್ನು ಸದರಿ ಕಾಯಿದೆಯಲ್ಲಿ ಅಳವಡಿಸಲಿಲ್ಲ. ಕೊರತೆಗಳನ್ನು ನೀಗಿಸಿ, ಕಾಯಿದೆಯನ್ನು ಮತಷ್ಟು ಬಳಪಡಿಸಬೇಕೆಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ನೇತೃತ್ವದಲ್ಲಿ ಈ ಮಾನವ ಸರಪಳಿಯನ್ನು ಹಮ್ಮಿಕೊಳ್ಳಲಾಗಿತ್ತು.



ಕರ್ನಾಟಕದಲ್ಲಿ ರಾಜ್ಯ ಸರ್ಕಾರ ನಡೆಸುತ್ತಿರುವ ಕಾಂಗ್ರೆಸ್ ಪಕ್ಷ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ ಆಶ್ವಾಸನೆಯಂತೆ ಶೇ.40% ಅಂಗವಿಕಲತೆಯುಳ್ಳವರಿಗೆ ತಿಂಗಳ ಮಾಶಾಸನ ರೂ.3,000/– ಮತ್ತು ಶೇ.75%ಕಿಂತ ಹೆಚ್ಚು ಅಂಗವಿಕಲತೆಯುಳ್ಳವರಿಗೆ ರೂ.5,000/–ಕ್ಕೆ ಏರಿಸಬೇಕೆಂದು ಒತ್ತಾಯಿಸಲಾಯಿತು.

ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟ ಅಧ್ಯಕ್ಷರಾದ ಜಿ.ಎನ್.ನಾಗರಾಜ್ ಮತ್ತು ಆಶಾ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಯಶ್ರೀ ರಮೇಶ್, ಅಂಗವಿಕಲರನ್ನು ಮತ್ತು ಪಾಲಕರನ್ನು ಉದ್ದೇಶಿಸಿ ಮಾತನಾಡಿದರು. ಸೃಷ್ಠಿ ಸ್ಪೆಷಲ್ ಅಕ್ಯಾಡೆಮಿ ಮೊದಲಾದ ಸಂಸ್ಥೆಗಳು ಈ ಮಾನವ ಸರಪಳಿಯಲ್ಲಿ ಭಾಗವಹಿಸಿದರು.

ಅನಾಣ್ಯೀಕರಣ ಮತ್ತು ನಗದು ರಹಿತ ಆರ್ಥಿಕತೆ



ಪ್ರೊ. ಟಿ.ಆರ್.ಚಂದ್ರಶೇಖರ್

ಕಳೆದ ತಿಂಗಳು ನವೆಂಬರ್ 8 (2016) ರಿಂದ ದೇಶದಲ್ಲಿ ಅನಾಣ್ಯೀಕರಣ ಕ್ರಮದ ಬಗ್ಗೆ, ಅದರಿಂದ ಉಂಟಾಗಿರುವ ಮಾರಾಟ–ಖರೀದಿ ಸಮಸ್ಯೆಗಳ ಬಗ್ಗೆ, ಇದರಿಂದ ಉಂಟಾದ ಜನರ ಸಂಕಷ್ಟದ ಬಗ್ಗೆ, ನಗದಿನ ಕೊರತೆಯ ಬಗ್ಗೆ, ಬ್ಯಾಂಕುಗಳ ಮುಂದೆ ತಮ್ಮ ಹಣಕ್ಕಾಗಿ, ತಮ್ಮಲ್ಲಿರುವ ಹಣವನ್ನು ಠೇವಣಿ ಇಡುವುದಕ್ಕಾಗಿ ಸರದಿ ನಿಂತಿರುವ ಜನರ ಬಗ್ಗೆ, ಹೀಗೆ ಸರದಿ ನಿಂತವರಲ್ಲಿ ಕೆಲವರು ಪ್ರಾಣ ಕಳೆದುಕೊಂಡಿದ್ದರ ಬಗ್ಗೆ ತೀವ್ರ ವಾದಗಳು, ಪ್ರತಿವಾದಗಳು, ಚರ್ಚೆಗಳು ನಡೆಯುತ್ತಿವೆ. ಈ ಚರ್ಚೆಯು ಸಂಸತ್ತಿನೊಳಗೆ, ಮಾಧ್ಯಮಗಳಲ್ಲಿ, ಬೀದಿ ಬೀದಿಗಳಲ್ಲಿ ನಡೆಯುತ್ತಿದೆ. ದೇಶದಲ್ಲಿ ಉಂಟಾಗಿರುವ ನಗದಿನ ಕೊರತೆಯ ಬಗ್ಗೆ ಮಾತನಾಡುತ್ತಾ ರಿಸರ್ವ್ ಬ್ಯಾಂಕಿನ ಗೌರ್ವನರ್ ಉರ್ಜಿತ್ ಪಟೇಲ್ ಅವರು 'ಜನರು ಡಿಜಿಟೈಸ್ ಆಗಬೇಕು' ಎಂದು ಕರೆ ನೀಡಿದ್ದಾರೆ. ಮಧ್ಯಯುಗದಲ್ಲಿ ಫ್ರಾನ್ಸ್ ದೇಶದ ಒಬ್ಬ ರಾಣಿಯು ಜನರು ಅನಾವೃಷ್ಟಿಯಿಂದ ರೊಟ್ಟಿಗಾಗಿ ಹಾಹಾಕಾರ ಪಡುತ್ತಿದ್ದಾರೆ ಅಂದಾಗ 'ಜನರು ಕೇಕ್ ತಿನ್ನಲಿ' ಎಂದು ಕರೆ ನೀಡಿದ್ದು ಇಲ್ಲಿ ಜ್ಞಾಪಕಕ್ಕೆ ಬರುತ್ತದೆ.

ನೀತಿ ಆಯೋಗವು ಡಿಜಿಟಲ್ ವ್ಯವಹಾರಗಳಿಗೆ ಉತ್ತೇಜಿಸುವ ಉದ್ದೇಶದಿಂದ ಲಾಟರಿ ಬಹುಮಾನವನ್ನು ಇಡುತ್ತಿದೆ. ಸರ್ಕಾರವು ಮಾಡಿದ ಅನಾಣ್ಯೀಕರಣವು ಕಪ್ಪುಹಣವನ್ನು ತಡೆಯುವುದಕ್ಕಾಗಿಯೋ ಅಥವಾ ನಗದು ರಹಿತ ಆರ್ಥಿಕತೆಯನ್ನು ರೂಪಿಸುವುದಕ್ಕಾಗಿಯೋ ಎಂಬುದು ತಿಳಿಯುತ್ತಿಲ್ಲ. ನಮ್ಮ ಅರ್ಥಮಂತ್ರಿಗಳು, ಆಳುವ ಪಕ್ಷದ ವಕ್ತಾರರು, ಆಯ್ದ ಅರ್ಥಶಾಸ್ತ್ರಜ್ಞರು, ಬ್ಯಾಂಕುಗಳ ಅಧಿಕಾರಿಗಳು –– ಹೀಗೆ ಅನೇಕರು ಇದು ಕೇವಲ ತಾತ್ಕಾಲಿಕ ತೊಂದರೆ ಮಾತ್ರ; ಮುಂದೆ ಭವಿಷ್ಯದಲ್ಲಿ ಇದರಿಂದ ಒಳ್ಳೆಯದಾಗುತ್ತದೆ ಎಂದು ಅನಾಣ್ಯೀಕರಣದ ಬಗ್ಗೆ ಸಮಜಾಯಿಷಿ ನೀಡುತ್ತಿದ್ದಾರೆ. ಇದು ನಿಜವಿರಲೂಬಹುದು. ಆದ–ರೆ ತತ್ಕಾಲದಲ್ಲಿ ಅಂತಹ ಕ್ರಮದಿಂದ ಬಡವರು, ಗ್ರಾಮೀಣರು, ದುಡಿಮೆಗಾರರು ಮಾತ್ರ ಏಕೆ ಕಷ್ಟ ಪಡಬೇಕು? ಅನಾಣ್ಯೀಕರಣದಿಂದ ಮಧ್ಯಮ ವರ್ಗಕ್ಕಾಗಲಿ, ಉಳ್ಳವರಿಗಾಗಲಿ, ಉದ್ದಿಮೆ ದಾರರಿಗಾಗಲಿ ತೊಂದರೆಯಾಗಿಲ್ಲ. ಇದು ಒಂದು ರೀತಿಯಲ್ಲಿ ಉದ್ದೇಶಪೂರ್ವಕವಾಗಿ ಅಸಮಾನತೆಯನ್ನು ಸೃಷ್ಟಿದಂತಾಗಲಿಲ್ಲವೇ? ಇದನ್ನು ತಡೆಯು ವುದಕ್ಕಾಗುತ್ತಿರಲಿಲ್ಲವೇ?

'ನಗದು ರಹಿತ ಆರ್ಥಿಕತೆ'ಯ ವ್ಯಸನ

'ನಗದು ರಹಿತ ಆರ್ಥಿಕತೆ' ಅನ್ನುವುದನ್ನು ಇಂದು ಆಳುವ ವರ್ಗವು ವ್ಯಸನದಂತೆ ಹಚ್ಚಿಕೊಂಡಿದೆ. ಅಲ್ಲಿ ಇಲ್ಲಿ ಬಡವರು, ತರಕಾರಿ ಮಾರುವವರು, ಕೂಲಿಕಾರರು ಎಟಿಎಮ್/ಡೆಬಿಟ್ ಕಾರ್ಡ್‌ಗಳನ್ನು ಬಳಸುತ್ತಿರುವ ಉದಾಹರಣೆಗಳನ್ನು ತೆಗೆದುಕೊಂಡು ದೇಶ ಹೇಗೆ ಡಿಜಿಟೈಸ್ ಆಗುತ್ತಿದೆ, ಜನರು ಹೇಗೆ ನಮ್ಮ ಕ್ರಮವನ್ನು ಸ್ವಾಗತಿಸುತ್ತಿದ್ದಾರೆ, ದೇಶದಲ್ಲಿ ಸೂರ್ಯ ಹೇಗೆ ಹೊಳೆಯುತ್ತಿದ್ದಾನೆ ಎಂದು ಮಂತ್ರಿ–ಮಹೋದಯರು ತಮ್ಮ ಅನಾಣ್ಯೀಕರಣ ಕ್ರಮವನ್ನು ಕೊಂಡಾಡಿ ಕೊಳ್ಳುತ್ತಿದ್ದಾರೆ. ಈ ಕಾರಣಕ್ಕೆ ಅನಾಣ್ಯೀಕರಣದ ಉದ್ದೇಶ ಕಪ್ಪುಹಣವನ್ನು ಮಟ್ಟ ಹಾಕುವುದಾಗಿತ್ತೊ ಅಥವಾ ದೇಶವನ್ನು ಡಿಜಿಟೈಸ್ ಮಾಡುವುದಾಗಿತ್ತೋ ಎಂಬ ಪ್ರಶ್ನೆ ನಮ್ಮ ಮುಂದೆ ಬಂದು ನಿಲ್ಲುತ್ತದೆ. ನಗದು ರಹಿತ ಆರ್ಥಿಕತೆ ಅನ್ನುವ ಉದ್ದೇಶವು ಅನಾಣ್ಯೀಕರಣದ ನಂತರ ಸರ್ಕಾರಕ್ಕೆ ಹೊಳೆದ ಜ್ಞಾನೋದಯದಂತೆ ಕಾಣುತ್ತದೆ.

ನಗದು ರಹಿತ ಆರ್ಥಿಕತೆ ಅನ್ನುವುದು ಬೃಹತ್ ಸಾಮಾಜಿಕ ಬದಲಾವಣೆಯನ್ನು ಬಯಸುವ ಒಂದು ಸಂಗತಿ. ಅದನ್ನು ಒಂದು ದಿನದಲ್ಲಿ ಅಥವಾ ಒಂದು ತಿಂಗಳಲ್ಲಿ/ಒಂದು ವರ್ಷದಲ್ಲಿ ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಅದೊಂದು ಸಾವಕಾಶವಾಗಿ,

ಅನಾಣ್ಯೀಕರಣದಿಂದ ಉಂಟಾಗಿರುವ ಸಮಸ್ಯೆಗಳನ್ನು ಡಿಜಿಟೈಸೇಶನಿಂದ ಪರಿಹರಿಸಲು ಸಾಧ್ಯವಿಲ್ಲ. ಡಿಜಿಟೈಸೇಶನ್ ಅನ್ನುವುದು ದೀರ್ಘಾವಧಿ ಕ್ರಮ. ಅನಾಣ್ಯೀಕರಣದ ಸಮಸ್ಯೆ ತಕ್ಷಣದ್ದು. ಈ ಭಿನ್ನತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ನಗದು ರಹಿತ ಆರ್ಥಿಕತೆ ಅನ್ನುವುದು ಬೃಹತ್ ಸಾಮಾಜಿಕ ಬದಲಾವಣೆಯನ್ನು ಬಯಸುವ ಒಂದು ಸಂಗತಿ. ಅದನ್ನು ಒಂದು ದಿನದಲ್ಲಿ ಅಥವಾ ಒಂದು ತಿಂಗಳಲ್ಲಿ/ಒಂದು ವರ್ಷದಲ್ಲಿ ಸಾಧಿಸಿಕೊಳ್ಳುವುದು ಸಾಧ್ಯವಿಲ್ಲ. ಅದೊಂದು ಸಾವಕಾಶವಾಗಿ, ವಿಕಾಸಾತ್ಮಕವಾಗಿ ನಡೆಯುವ ಒಂದು ಪ್ರಕ್ರಿಯೆ.

ವಿಕಾಸಾತ್ಮಕವಾಗಿ ನಡೆಯುವ ಒಂದು ಪ್ರಕ್ರಿಯೆ. ನಮ್ಮದು ನೂರು ಕೋಟಿ ಜನಸಂಖ್ಯೆಯನ್ನು ಮೀರಿದ ಮತ್ತು ಜಗತ್ತಿನಲ್ಲಿ ಬೃಹತ್ ಮಾರುಕಟ್ಟೆಯನ್ನು ಹೊಂದಿರುವ ಆರ್ಥಿಕತೆ. ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟು ಜನರು ಅನಕ್ಷರಸ್ಥರು (ಇಂಗ್ಲೀಷ್), ಗ್ರಾಮೀಣವಾಸಿಗಳು, ದಿನಗೂಲಿ ದುಡಿಮೆಗಾರರು. ಸರಿಸುಮಾರು 50–60 ಕೋಟಿ ಜನರು ಒಂದು ದಿನದಲ್ಲಿ ಅಥವಾ ಒಂದು ತಿಂಗಳಲ್ಲಿ ಅಥವಾ 50 ದಿನಗಳಲ್ಲಿ ನಗದು ರಹಿತ ಆರ್ಥಿಕತೆಗೆ ಪರಿವರ್ತಿತವಾಗುವುದು ಸಾಧ್ಯವಿಲ್ಲ.

ಅಥವಾ ಇದನ್ನು ಮತ್ತೊಂದು ರೀತಿಯಲ್ಲಿ ಹೀಗೆ ಹೇಳಬಹುದು. ಜನರೆಲ್ಲರೂ ನಗದು ರಹಿತ ಆರ್ಥಿಕತೆಗೆ ಏಕೆ ಪಕ್ಕಾಗಬೇಕು? ಈ ಕ್ರಮದ ಮೂಲಕ (ಸರ್ಕಾರವು ಜಾರಿಗೊಳಿಸುತ್ತಿರುವ ಸ್ಮಾರ್ಟ್ ಸಿಟಿ ಯೋಜನೆಯನ್ನು ಇಲ್ಲಿ ನೆನಪಿಸಿಕೊಳ್ಳಬಹುದು) ಸರ್ಕಾರವು ಯಾರ, ಯಾವ ವರ್ಗದ ಹಿತಾಸಕ್ತಿಗಳನ್ನು ಕಾಯುವುದಕ್ಕೆ ಪ್ರಯತ್ನಿಸುತ್ತಿದೆ? ನಮ್ಮ ದೇಶದಲ್ಲಿ ಅರ್ಧಕ್ಕಿಂತ ಹೆಚ್ಚು ಆರ್ಥಿಕ ಚಟುವಟಿಕೆಗಳು ಅಸಂಘಟಿತ ವಲಯದಲ್ಲಿ ನಡೆಯುತ್ತವೆ. ಸರಿಸುಮಾರು 60 ರಿಂದ 70 ಕೋಟಿ ಜನರು ಈ ಅಸಂಘಟಿತ ವಲಯವನ್ನೇ ಅವಲಂಬಿಸಿಕೊಂಡಿದ್ದಾರೆ. ಇಲ್ಲಿ ಬಂಡವಾಳ ಅನ್ನುವುದು ಹೆಸರಿಗೆ ಮಾತ್ರ ಅನ್ನುವಂತಿದೆ. ಬೆಳಿಗ್ಗೆ ಎದ್ದು ನೂರು ರೂಪಾಯಿ ಸಾಲ ಪಡೆದುಕೊಂಡು ಸಗಟು ಮಾರುಕಟ್ಟೆಯಲ್ಲಿ ಮಾಲು ಖರೀದಿಸಿ ತಳ್ಳುವ ಗಾಡಿಯಲ್ಲಿ ವ್ಯಾಪಾರ ಮಾಡುತ್ತಾ ಸಂಜೆಯ ವೇಳೆಗೆ ನಾಲ್ಕು ಕಾಸು ದುಡಿದು ಅದರಲ್ಲಿ ಬೆಳಿಗ್ಗೆ ತಂದ ಸಾಲ, ಅದರ ಬಡ್ಡಿ ಹಿಂತಿರುಗಿಸಿ ಉಳಿದದ್ದನ್ನು ಮನೆಗೆ ಕೊಂಡೊಯ್ಯುವ ಕೋಟ್ಯಾಂತರ ದುಡಿಮೆಗಾರರು ನಮ್ಮಲ್ಲಿ ಇದ್ದಾರೆ. ನಗದು ರಹಿತ ಆರ್ಥಿಕತೆ ಯಾರಿಗಾಗಿ ಎಂಬ ಪ್ರಶ್ನೆ ದುತ್ತನೆ ನಮ್ಮೆದುರು ನಿಲ್ಲುತ್ತದೆ. ಬೂಟು ಪಾಲಿಶ್ ಮಾಡುವವರೂ, ಪರಕೆ, ಮಣಿಸರ ಮಾರುವವರು ಡಿಜಿಟೈಸ್ ಆಗುವುದು ಸಾಧ್ಯವೇ? ಅವರೂ ಡಿಜಿಟೈಸ್ ಆಗಬೇಕೆ? ಅವರ ದಿನದ ದುಡಿಮೆಯು ನೂರು–ನೂರೈವತ್ತು ಮೀರುವುದಿಲ್ಲ. ಅದು ಅವರ ಆ ದಿನದ ಖರ್ಚಿಗೆ ಸರಿ ಹೋಗುತ್ತದೆ. ಬ್ಯಾಂಕು ಖಾತೆಗೆ ಜಮೆ ಮಾಡಲು ಅವರಲ್ಲಿ ಉಳಿಯುತ್ತದೆ ಏನು?

ಹಕ್ಕಿನಿಂದ ಹಂಗಿಗೆ ಪರಿವರ್ತನೆ

ಕಷ್ಟಪಟ್ಟು, ಬೆವರು ಹರಿಸಿ, ಪ್ರಾಮಾಣೀಕತೆಯಿಂದ ದುಡಿದು ಸಂಪಾದಿಸಿದ್ದ ತಮ್ಮ ಹಣಕ್ಕಾಗಿ ಬ್ಯಾಂಕುಗಳ ಮುಂದೆ ಜನರು ಹಣಕ್ಕಾಗಿ ಅಂಗಲಾಚಬೇಕಾದ ಪರಿಸ್ಥಿತಿಯು ಬಂದಿದೆ. ಅನಾಣ್ಯೀಕರಣವು ಜನರ ಹಕ್ಕುಗಳನ್ನು ಹಂಗಿನ ಸಂಗತಿಯನ್ನಾಗಿ ಪರಿವರ್ತಿಸುತ್ತಿರುವಂತೆ ಕಾಣುತ್ತದೆ. ಹಣ ಅನ್ನುವುದು ಕೇವಲ ಸರ್ಕಾರದ ಭರವಸೆಯ ಮೇಲೆ ನಿಂತಿರುವ ಒಂದು ವ್ಯವಸ್ಥೆ. ಅದರ ಮೇಲಿನ ವಿಶ್ವಾಸಕ್ಕೆ ಇಂದು ದಕ್ಕೆ ಬಂದಿದೆ. ಇದಕ್ಕಿಂತ ಹೆಚ್ಚಾಗಿ ಜನರು ಹಕ್ಕಿನಿಂದ ಪಡೆಯಬೇಕಾದ ತಮ್ಮ ಹಣವನ್ನು ಬ್ಯಾಂಕುಗಳ ಮುಂದೆ ಸರದಿ ಸಾಲು ನಿಂತುಕೊಂಡು ಅಲ್ಲಿ ದೊರೆತಷ್ಟು ನಗದನ್ನು ಪಡೆದುಕೊಳ್ಳುವ ಹಂಗಿನ ಸ್ಥಿತಿಯು ನಿರ್ಮಾಣವಾಗಿದೆ. ಎಟಿಎಮ್‌ಗಳಲ್ಲಿ ಜನರು ಕಣ್ಣು ಬಿಟ್ಟು ತೆರೆಯುವಷ್ಟರಲ್ಲಿ ನಗದು ಖಾಲಿಯಾಗುತ್ತಿದೆ. ಬ್ಯಾಂಕುಗಳಲ್ಲಿ ಅವರು ಕೊಟ್ಟಷ್ಟು ಹಣ ಪಡೆದುಕೊಳ್ಳಬೇಕು. ಜೋಬಿನಲ್ಲಿರುವ ಎರಡು ಸಾವಿರ ರೂಪಾಯಿಯ ನೋಟನ್ನು ಸ್ವೀಕರಿಸಿ ನಮಗೆ ಚಿಲ್ಲರೆ ನೀಡಲು ವ್ಯಾಪಾರಿಗಳು, ಅಂಗಡಿ ಮಾಲೀಕರು ಸಿದ್ಧವಿಲ್ಲ. ಅವರ ವ್ಯಾಪಾರವು ಅರ್ಧದಷ್ಟು ಬಿದ್ದು ಹೋಗಿದೆ. ದುಡ್ಡಿರುವವರು ದುಡ್ಡಿಲ್ಲದವರಾಗಿದ್ದಾರೆ.

ಗ್ರಾಮೀಣವಾಸಿಗಳ ಪಡಿಪಾಟಲು

ಅನಾಣ್ಯೀಕರಣದ ಬಗೆಗಿನ ಪತ್ರಿಕಾ ವರದಿಗಳು ಹೇಳುವಂತೆ ಇದರಿಂದ ಹೆಚ್ಚು ಹಾನಿಗೆ ಒಳಗಾಗಿರುವವರೆಂದರೆ ಗ್ರಾಮೀಣವಾಸಿಗಳು. ಅನಾವೃಷ್ಟಿಯಿಂದ ಕೃಷಿಯು ಈಗಾಗಲೆ ನೆಲಕಚ್ಚಿದೆ.



ಅನಾಣ್ಯೀಕರಣವು ಅದರ ಮೇಲೆ ಗದಾ ಪ್ರಹಾರನ್ನೇ ಮಾಡಿದೆ. ಇಲ್ಲಿನ ಭೂರಹಿತ ಕೂಲಿಕಾರರ ಬಾಳು ಮೂರಾಬಟ್ಟೆಯಾಗಿದೆ. ಹಣ ಪಡೆಯುವುದಕ್ಕಾಗಿ ಕೂಲಿಕಾರರು ವಾರಕ್ಕೆ ಒಂದು ದಿನ, ಎರಡು ದಿನ ಕೂಲಿಯನ್ನು ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಜ್ಯದಲ್ಲಿ ಸುಮಾರು 30 ಸಾವಿರ ಹಳ್ಳಿಗಳಿವೆ. ಈ ಹಳ್ಳಿಗಳಲ್ಲಿ ಎಷ್ಟು ಎಟಿಎಮ್‌ಗಳಿವೆ, ಎಷ್ಟು ಬ್ಯಾಂಕು ಶಾಖೆಗಳಿವೆ? ಇಲ್ಲಿರುವ ಕೂಲಿಕಾರರಿಗೆ ಯಾರು ಮೊಬೈಲಿನಲ್ಲಿ ವ್ಯವಹಾರ ಮಾಡಲು ಇಂಗ್ಲೀಷ್ ಭಾಷೆಯನ್ನು ಹೇಳಿಕೊಡುತ್ತಾರೆ–ಕಲಿಸಿ ಕೊಡುತ್ತಾರೆ? ಇಂದಿಗೂ ಬ್ಯಾಂಕಿಗೆ ಹೋದರೆ ಅನೇಕರು ಹಣ ವಾಪಸ್ಸು ಪಡೆಯುವ ಫಾರಮನ್ನು ತುಂಬಿ ಕೊಡುವಂತೆ ದಂಬಾಲು ಬೀಳುತ್ತಾರೆ. ಅದಕ್ಕಾಗಿ ಅವರು ಗಂಟೆಗಟ್ಟಲೆ ಕಾಯಬೇಕಾಗುತ್ತದೆ. ಡಿಜಿಟೈಸೇಶನ್ ಅನ್ನುವುದು ಭಾಷೆಯ ಪ್ರಶ್ನೆಯೂ ಆಗಿದೆ. ಬ್ಯಾಂಕಿನ, ಎಟಿಎಮ್‌ನ, ಡಿಜಿಟೈಸ್ ವ್ಯವಹಾರದ ದಾಖಲೆಗಳನ್ನು ಭದ್ರವಾಗಿಟ್ಟುಕೊಳ್ಳುವುದು ವಸತಿರಹಿತರಿಗೆ ಸಾಧ್ಯವೇ? ಇವೆಲ್ಲ ಉರ್ಜಿತ್ ಪಟೇಲ್ ಅವರಿಗಾಗಲಿ ಅಥವಾ ಅರವಿಂದ ಪಾಣಿಗಾ–ರಿಯ ಅವರಿಗಾಗಲಿ ಅರ್ಥವಾಗುವುದು ಸಾಧ್ಯವಿಲ್ಲ. ಇವರೆಲ್ಲ ಅನಾಣ್ಯೀಕರಣವನ್ನು ನಿರ್ವಹಿಸುತ್ತಿರುವ ರೀತಿಯನ್ನು ನೋಡಿದರೆ ಅವರಿಗೆ ಭಾಷೆಯು ಒಂದು ಪ್ರಶ್ನೆಯೇ ಅಲ್ಲ. ಮಾತೆತ್ತಿದರೆ ಸಹಕಾರೀ ಒಕ್ಕೂಟದ ಬಗ್ಗೆ ಸರ್ಕಾರವು ಮಾತನಾಡುತ್ತದೆ. ಆದರೆ ಅದು ಭಾಷೆಗೆ ಸಂಬಂಧಿಸಿದಂತೆ ಕೇಂದ್ರೀಕೃತ ನೀತಿಯನ್ನು ಅನುಸರಿಸುತ್ತಿರುವಂತೆ ಕಾಣುತ್ತಿದೆ. ದೇಶ ಭಾಷೆಗಳಿಗೆ ಇಂದು ಬಂದಿರುವಷ್ಟು ಅಪಾಯ ಮತ್ತಾವಾಗಲೂ ಬಂದಿರಲಿಲ್ಲವೆಂದು ಕಾಣುತ್ತದೆ.

ನಗದು ರಹಿತ ಆರ್ಥಿಕತೆಗೆ ದೇಶವನ್ನು ಪರಿವರ್ತಿಸುವ ಕ್ರಮವು ದಿಡೀರನೆ ನಡೆಯುವುದು ಸಾಧ್ಯವಿಲ್ಲ. ಅದಕ್ಕೆ ಸಾಕಷ್ಟು ಸಮಯ ಬೇಕು. ಅದಕ್ಕೆ ಸಾಕಷ್ಟು ಸಿದ್ದತೆ ಬೇಕಾಗುತ್ತದೆ. ಇದಾವುದೂ ಇಲ್ಲದೆ ದಿಢೀರನೆ ಜನರು ಡಿಜಿಟೈಸಾಗಬೇಕು ಅಂದರೆ ಅದು ಸಾಧ್ಯವಾಗುವುದಿಲ್ಲ. ಉರ್ಜಿತ್ ಪಟೇಲ್ ಅವರಿಗೆ ಅನಾಣ್ಯೀಕರಣದಿಂದ, ತಮ್ಮ ಸಂಸ್ಥೆಯ ಬಹುಮುಖಿ ವೈಫಲ್ಯದಿಂದ ಉಂಟಾದ ಸಮಸ್ಯೆಗಳ ನಂತರ ಜನರು ಡಿಸಿಟೈಸಾಗಬೇಕು ಎಂಬ ಮಂತ್ರ ಹೊಳೆದಿರಲು ಸಾಕು!

ಅನಾಣ್ಯೀಕರಣದ ಸಮಸ್ಯೆಗಳಿಗೆ ಡಿಜಿಟೈಸೇಶನ್ ಪರಿಹಾರ ಅಲ್ಲ


ಅನಾಣ್ಯೀಕರಣದಿಂದ ಉಂಟಾಗಿರುವ ಸಮಸ್ಯೆಗಳನ್ನು ಡಿಜಿಟೈಸೇಶನಿಂದ ಪರಿಹರಿಸಲು ಸಾಧ್ಯವಿಲ್ಲ. ಡಿಜಿಟೈಸೇಶನ್ ಅನ್ನುವುದು ದೀರ್ಘಾವಧಿ ಕ್ರಮ. ಅನಾಣ್ಯೀಕರಣದ ಸಮಸ್ಯೆ ತಕ್ಷಣದ್ದು. ಈ ಭಿನ್ನತೆಯನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಆರ್ಥಿಕತೆಯು ನಗದು ರಹಿತವಾಗಬೇಕು. ಜನರು ಡಿಜಿಟೈಸಾಗಬೇಕು. ಇವೆಲ್ಲ ಸರಿ. ಆದ–ರೆ ಅದಕ್ಕೆ ಸಮಯ ಬೇಕು. ಅನಾಣ್ಯೀಕರಣದಿಂದ ಉಂಟಾಗಬಹುದಾದ ಸಮಸ್ಯೆಗಳನ್ನು ಸರ್ಕಾರ, ರಿಸರ್ವ್ ಬ್ಯಾಂಕು, ಆಡಳಿತ ವ್ಯವಸ್ಥೆ ಊಹಿಸಿರಲಿಲ್ಲ ಎಂಬುದು ಅವು ಇಂದು ತೆಗೆದುಕೊಳ್ಳುತ್ತಿರುವ ಕ್ರಮಗಳಿಂದ ಮನದಟ್ಟಾಗುತ್ತದೆ. ಸರ್ಕಾರವು ಕಪ್ಪು ಹಣದ ಬಗ್ಗೆ, ನಕಲಿ ನೋಟುಗಳ ಹಾವಳಿ ಬಗ್ಗೆ ಮಾತನಾಡುವುದಕ್ಕಿಂತ ಇಂದು ಹೆಚ್ಚಾಗಿ ಡಿಜಿಟೈಸೇಶನ್ ಬಗ್ಗೆ, ನಗದು ರಹಿತ ವ್ಯವಹಾರದ ಬಗ್ಗೆ, ಎಟಿಎಮ್, ಡೆಬಿಟ್‌ಕಾರ್ಡ್‌ಗಳ, ಮೊಬೈಲ್ ಬ್ಯಾಂಕಿಂಕ್ ಬಳಕೆ ಬಗ್ಗೆ ಮಾತನಾಡುತ್ತಿದೆ. ಅನಾಣ್ಯೀಕರಣದ ವೈಫಲ್ಯಕ್ಕೆ ಇದಕ್ಕಿಂತ ಬೇರೆ ನಿದರ್ಶನ ಬೇಕೆ? ಅನಾಣ್ಯೀಕರಣ ಮತ್ತು ಅದರ ಉದ್ದೇಶ ಬೇರೆ ಹಾಗೂ ನಗದು ರಹಿತ ಆರ್ಥಿಕತೆ ಮತ್ತು ಅದರ ಉದ್ದೇಶ ಬೇರೆ. ಅವೆರಡನ್ನು ಒಂದು ಮಾಡಿ ನೋಡುವ ಸರ್ಕಾರದ ಕ್ರಮವೇ ತಪ್ಪು. ನಗದು ರಹಿತ ಆರ್ಥಿಕತೆಗೆ ಜನರು ಸಿದ್ಧವಾಗಿಲ್ಲ ಅನ್ನುವುದು ಒಂದು. ಮತ್ತೊಂದು ಅದಕ್ಕೆ ಅಗತ್ಯವಾದ ತಂತ್ರಜ್ಞಾನ ಮತ್ತು ಯಂತ್ರಗಳು ಲಭ್ಯವಿಲ್ಲ. ಅದನ್ನು ಈಗ ತಂತ್ರಜ್ಞರು ಯೋಚಿಸುತ್ತಿದ್ದಾರೆ.

ವರಮಾನ ತೆರಿಗೆ ಇಲಾಖೆ ಮತ್ತು ಎನ್‌ಪೋರ್ಸ್‌ಮೆಂಟ್ ಡೈರೆಕ್ಟೊರೇಟ್ ಮುಂತಾದವು ನಡೆಸುತ್ತಿರುವ ಧಾಳಿಯಲ್ಲಿ ದೊರೆಯುತ್ತಿರುವ ಕೋಟ್ಯಾಂತರ ರೂಪಾಯಿ ಹೊಸ ನೋಟುಗಳನ್ನು ನೋಡಿದರೆ ಕಪ್ಪು ಆರ್ಥಿಕತೆ ಅನ್ನುವುದು ಹಳೆ ನೋಟುಗಳಿಂದ ಹೊಸ ನೊಟುಗಳಿಗೆ ಬದಲಾಗಿರುವುದು ಸ್ಪಷ್ಟವಾಗುತ್ತದೆ. ಕಪ್ಪುಹಣ ಮರೆಯಾಗಿಲ್ಲ. ಅದು ಇಂದು ಪಿಂಕ್ ಬಣ್ಣ–ಕ್ಕೆ ತಿರುಗಿದೆ. ಕೋಟ್ಯಾಂತರ ರೂಪಾಯಿ ಮೌಲ್ಯದ ಹೊಸ ನೋಟುಗಳನ್ನು ಕೂಡಿಡುವುದು ಸಾಧ್ಯವಾಗಿದೆ ಅನ್ನುವುದು ಅನಾಣ್ಯೀಕರಣದ ವೈಫಲ್ಯಕ್ಕೆ ಅಥವಾ ಅದನ್ನು ಅನುಷ್ಟಾನಕ್ಕೆ ತೆಗೆದುಕೊಂಡ ಕ್ರಮಗಳ ಲೋಪಕ್ಕೆ ನಿದರ್ಶನವಾಗಿದೆ. ಅನಾಣ್ಯೀಕರಣ ಕ್ರಮವನ್ನು ದೇಶದಲ್ಲಿ ಯಾರೊಬ್ಬರೂ ವಿರೋಧಿಸಿಲ್ಲ.

ಪುಟ 10 ಕ್ಕೆ

ಅನಾಣ್ಯೀಕರಣ: ಜನಸಾಮಾನ್ಯರ ಮೇಲೆ ಹಾಕಿದ ಆರ್ಥಿಕ ಪರಮಾಣು ಬಾಂಬ್!





ಕಪ್ಪು ಹಣದ ವಿರುದ್ಧ 'ಮಿಂಚಿನ ಪ್ರಹಾರ' ಎಂದು ವರ್ಣಿಸಿದ್ದ ಮೋದಿಯವರ ನೋಟು ರದ್ದತಿಯನ್ನು ಆರ್‌ಎಸ್‌ಎಸ್ ಸಿದ್ಧಾಂತಿಯೊಬ್ಬರು ಇನ್ನೂ ಮುಂದೆ ಹೋಗಿ ಒಂದು 'ಹಣಕಾಸು ಪೋಖ್ರಾನ್' ಎಂದು ಬಣ್ಣಿಸಿದ್ದರು. ಒಂದರ್ಥದಲ್ಲಿ ಅದೀಗ ನಿಜವಾಗಿದೆ– ಅದು ಜನಸಾಮಾನ್ಯರ ಮೇಲೆ ಹಾಕಿರುವ ಪರಮಾಣು ಬಾಂಬ್ ಆಗಿದೆ. ಈ 'ಪ್ರಹಾರ' ದೊಡ್ಡ ಅಧ್ವಾನವಾಗಿ ಜನಸಾಮಾನ್ಯರ ಬದುಕಿನಲ್ಲಿ ಅನಾಹುತಗಳನ್ನು, ಅನರ್ಥಗಳನ್ನು ಉಂಟುಮಾಡಿದೆ.

ಪ್ರಕಾಶ್ ಕಾರಟ್

ಕಪ್ಪು ಹಣ ಮತ್ತು ಭ್ರಷ್ಟಾಚಾರದ ಮೇಲೆ ನರೇಂದ್ರ ಮೋದಿ ನಡೆಸಿದ 'ಮಿಂಚಿನ ಪ್ರಹಾರ' ಬರೀ ಗೊಂದಲದ ಗೂಡಾಗಿ ಮಾತ್ರವಲ್ಲ ಒಂದು ಕೈಗಾರಿಕಾ ಮಟ್ಟದ ಹಗರಣವಾಗುತ್ತಿದೆ. 500 ಮತ್ತು 1000 ರೂಪಾಯಿ ನೋಟುಗಳನ್ನು, ಅಂದರೆ ಚಲಾವಣೆಯಲ್ಲಿದ್ದ ಒಟ್ಟು ಕರೆನ್ಸಿಯಲ್ಲಿನ ಶೇಕಡಾ 86 ಕರೆನ್ಸಿಯನ್ನು ಅಮಾನ್ಯ ಮಾಡಿದ 36 ದಿನಗಳ ನಂತರವೂ ಜನಸಾಮಾನ್ಯರು ತಮ್ಮದೇ ಖಾತೆಗಳಿಂದ ಅಥವಾ ಎಟಿಎಂಗಳಿಂದ ಪುಡಿಗಾಸನ್ನು ಪಡೆಯಲು ಪಡಿಪಾಟಲು ಪಡುತ್ತಿದ್ದಾರೆ. ಬ್ಯಾಂಕ್‌ಗಳು ಮತ್ತು ಎಟಿಎಂಗಳ ಮುಂದೆ ಉದ್ದನೆಯ ಸರತಿ ಸಾಲುಗಳು ಹಾಗೂ ಅಂತ್ಯವಿಲ್ಲದ ಕಾಯುವಿಕೆ ಇನ್ನೂ ಮುಂದುವರಿದಿದೆ. ತೀರಾ ಅಗತ್ಯವಾಗಿ ಬೇಕಾಗಿರುವವರಿಗೆ ಅಂದರೆ ದಿನಗೂಲಿಗಳು, ತರಕಾರಿ ಮಾರಾಟಗಾರರು, ಮನೆಗೆಲಸದವರು ಮತ್ತು ಅನೌಪಚಾರಿಕ ಆರ್ಥಿಕತೆಯಲ್ಲಿ ಒಳಗೊಂಡಿರುವ ಇಡೀ ಕಾರ್ಮಿಕ ವರ್ಗಕ್ಕೆ ನಗದು ಹಣವೇ ಸಿಗುತ್ತಿಲ್ಲ.

ಅದೇ ಹೊತ್ತಿಗೆ ವ್ಯಾಪಾರಸ್ಥರು, ಹವಾಲಾ ನಡೆಸುವವರು, ರಾಜಕಾರಣಿಗಳು ಮತ್ತು ಭ್ರಷ್ಟ ಅಧಿಕಾರಿಗಳ ಕೈಗಳಲ್ಲಿ ದೊಡ್ಡ ಮೊತ್ತದ ಹೊಸ ನೋಟುಗಳು ಕುಣಿದಾಡುತ್ತಿವೆ. ಕಳೆದ ಎರಡು ವಾರಗಳಲ್ಲಿ ಆದಾಯ ತೆರಿಗೆ ದಾಳಿಗಳು ನಡೆದಿದ್ದು ಲೆಕ್ಕ ಕೊಡದ ಅಪಾರ ಪ್ರಮಾಣದ ಹಣ, ಅದರಲ್ಲೂ ಹೊಚ್ಚಹೊಸ 2000 ರೂಪಾಯಿ ನೋಟುಗಳು, ಹೊರಬಂದಿವೆ. ಚೆನ್ನೈನಲ್ಲಿ ಒಬ್ಬನೇ ಒಬ್ಬ ವರ್ತಕನ ಬಳಿ 2000 ನೋಟುಗಳ 34 ಕೋಟಿ ರೂಪಾಯಿ ದೊರಕಿದೆ. ವೆಲ್ಲೂರಿನಲ್ಲಿ ವಾಹನವೊಂದರಿಂದ 24 ಕೋಟಿ ರೂಪಾಯಿ ಮೊತ್ತದ ಹೊಸ 2000 ಮುಖಬೆಲೆಯ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ. ಬೆಂಗಳೂರಿನಲ್ಲಿ ಇಬ್ಬರು ಪಿಡಬ್ಲ್ಯುಡಿ ಎಂಜಿನಿಯರ್‌ಗಳಿಂದ 2000 ಮುಖಬೆಲೆಯ 4.7 ಕೊಟಿ ರೂಪಾಯಿಗಳನ್ನು ವಶಪಡಿಸಿಕೊಳ್ಳಲಾಗಿದೆ. ರಾಜಸ್ತಾನ, ದೆಹಲಿ, ಅಸ್ಸಾಂ, ಮಹಾರಾಷ್ಟ್ರ ಮತ್ತು ಪಂಜಾಬ್ ಮೊದಲಾದ ರಾಜ್ಯಗಳಲ್ಲಿ ಕೂಡ ಅಪಾರ ಪ್ರಮಾಣದ ಹೊಸ ನೋಟುಗಳನ್ನು ವಶಪಡಿಸಿಕೊಂಡ ಪ್ರಕರಣಗಳು ವರದಿಯಾಗಿವೆ.

ಒಂದು ಅಂದಾಜಿನ ಪ್ರಕಾರ, ಡಿಸೆಂಬರ್ 12ರ ವರೆಗೆ ದೇಶದಾದ್ಯಂತ 160 ಕೊಟಿ ರೂಪಾಯಿ ಮೌಲ್ಯದ ಹೊಸ ನೋಟುಗಳನ್ನು ವಶಪಡಿಸಿಕೊಳ್ಳಲಾಗಿದೆ. ಇದು ಸಮುದ್ರದಲ್ಲಿನ ಹನಿ ನೀರಷ್ಟೇ.

ನಾವೀಗ ಕಾಣುತ್ತಿರುವುದು ಒಂದು ದೊಡ್ಡ ಪ್ರಮಾಣದಲ್ಲಿ ಕಪ್ಪು ಹಣವನ್ನು ತೊಳೆಯುವ ಕಾರ್ಯಾಚರಣೆ. ಮೋದಿಯವರ ಅನಾಣ್ಯೀಕರಣವು ಕಾಳಧನವನ್ನು ಮಟ್ಟ ಹಾಕುವ ಬದಲಿಗೆ ದೊಡ್ಡ ಪ್ರಮಾಣದ ಕಪ್ಪು ಹಣ ಬಿಳಿ ಹಣವಾಗಿ ಪರಿವರ್ತಿಸಲು ನೆರವಾಗುತ್ತಿದೆ. ಅದು ಹಣಕಾಸು ವ್ಯವಸ್ಥೆಯಲ್ಲಿ ಭ್ರಷ್ಟಾಚಾರದ ಹೊಸ ಹಾದಿಗಳನ್ನು ತೆರೆದಿದೆ. ಭ್ರಷ್ಟ ಬ್ಯಾಂಕ್ ಅಧಿಕಾರಿಗಳು ಕಪ್ಪು ಹಣವನ್ನು ತೊಳೆಯುವವರೊಂದಿಗೆ ಶಾಮೀಲಾಗಿ ನೋಟುಗಳ ವಿನಿಮಯವನ್ನು ಒಂದು ದೊಡ್ಡ ಹಗರಣವಾಗಿ ಮಾಡುತ್ತಿದ್ದಾರೆ. ನಾನಾ ವಿಧಾನಗಳನ್ನು ಬಳಸಿಕೊಂಡು ಬ್ಯಾಂಕ್‌ಗಳ ಮೂಲಕ ನಡೆಯುತ್ತಿರುವ ಕಪಪು ಹಣವನ್ನು ತೊಳೆಯುವ ಈ ಕ್ರಿಯೆಯನ್ನು ಹೇಗೆ ತಡೆಗಟ್ಟುವುದೆಂದೇ ಸರಕಾರಕ್ಕೆ ದಿಕ್ಕು ತೋಚದಂತಾಗಿದೆ.

ಈ ಅಧ್ವಾನದ ಮತ್ತೊಂದು ಆಯಾಮವೆಂದರೆ ಅನಾಣ್ಯೀಕರಿಸಿದ ನೋಟುಗಳಲ್ಲಿ ಶೇಕಡಾ 20ರಷ್ಟು ನೋಟುಗಳು ಕಪ್ಪು ಹಣ ಎಂಬ ಅಂದಾಜು. ಅದರ ಮೊತ್ತ 3 ಲಕ್ಷ ಕೋಟಿ ರೂಪಾಯಿಗಳಾಗಿದ್ದು ಅದನ್ನು ಬ್ಯಾಂಕ್‌ಗಳಲ್ಲಿ ಠೇವಣಿ ಇಡಲಾಗುವುದಿಲ್ಲ. ಆದರೆ ಇದು ಸಂಪೂರ್ಣವಾಗಿ ತಪ್ಪು ಅಂದಾಜು ಎಂಬುದು ಸಾಬೀತಾಗಿದೆ. ನವೆಂಬರ್ 8ರಂದು ಒಟ್ಟು 15.44 ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳನ್ನು ವಾಪಸ್ ಪಡೆಯಲಾಗಿದೆ. ಡಿಸೆಂಬರ್ 10ರ ವರೆಗೆ, 12.4 ಲಕ್ಷ ಕೋಟಿ ರೂಪಾಯಿ ಮೌಲ್ಯದ ಹಳೆಯ ನೋಟುಗಳನ್ನು ಜಮೆ ಮಾಡಲಾಗಿದೆ. ಉಳಿದ ನೋಟುಗಳು ಲೆಕ್ಕಕ್ಕೆ ಕೊಟ್ಟು ಡಿಸೆಂಬರ್ 30ರ ಹೊತ್ತಿಗೆ ಜಮಾ ಮಾಡಲಾಗುವುದೆಂದು ನಿರೀಕ್ಷಿಸಲಾಗಿದೆ. ಎಲ್ಲಾ ಹಳೆಯ ನೋಟುಗಳನ್ನು ಜಮಾ ಆಗುತ್ತವೆ ಎಂದು ಕಂದಾಯ ಇಲಾಖೆ ಕಾರ್ಯದರ್ಶಿ ಹಸ್ಮುಖ್ ಅಧಿಯಾ ಹೇಳಿದ್ದಾರೆ.

ಆದ್ದರಿಂದ, ಕನಿಷ್ಟ ಮೂರು ಲಕ್ಷ ಕೋಟಿ ರೂಪಾಯಿ ಮೌಲ್ಯದ ಕಪ್ಪು ಹಣವನ್ನು ನಿಷ್ಕ್ರಿಯಗೊಳಿಸಲಾಗುವುದೆಂದು ಆರಂಭದಲ್ಲಿ ಸರಕಾರ ಹೇಳಿದ್ದು ಈಗ ಠುಸ್ಸಾಗಿದೆ. ಅದರೊಂದಿಗೆ ಸರಕಾರಕ್ಕೆ ವಿಶೇಷ ಡಿವಿಡೆಂಡ್ ರೂಪದಲ್ಲಿ ಸರಕಾರಕ್ಕೆ ಮೂರು ಲಕ್ಷ ಕೋಟಿ ರೂಪಾಯಿ ಬಕ್ಷೀಸು ರಿಸರ್ವ್ ಬ್ಯಾಂಕ್‌ನಿಂದ ಬರುತ್ತದೆ ಎಂಬ ನಿರೀಕ್ಷೆಯೂ ಠುಸ್ಸಾದಂತೆಯೇ ಸರಿ.

ಡಿಸೆಂಬರ್ 10ರ ವರೆಗೆ 15.4 ಲಕ್ಷ ಕೋಟಿ ರೂ. ಮೌಲ್ಯದ ಕರೆನ್ಸಿ ಹಿಂತೆಗೆದುಕೊಂಡ ನಂತರ, ನೋಟು ವ್ಯವಸ್ಥೆಗೆ ಕೇವಲ 5 ಲಕ್ಷ ರೂ. ಹೊಸ ಕರೆನ್ಸಿಯನ್ನು ಬಿಡುಗಡೆ ಮಾಡಲಾಗಿದೆ. ಇದು ವಾಪಸ್ ಪಡೆದ ಕರೆನ್ಸಿಯ ಒಟ್ಟು ಮೌಲ್ಯದ ಮೂರನೇ ಒಂದರಷ್ಟಕ್ಕಿಂತ ಕಡಿಮೆಯಾಗಿದೆ. ನೋಟುಗಳ ವಾಪಸಾತಿಯಿಂದ ಉಂಟಾದ ಮಹಾ ಸೋಲಿನ ನಂತರ ನರೇಂದ್ರ ಮೋದಿ ನಗದುರಹಿತ ಆರ್ಥಿಕವನ್ನು ಆರಂಭಿಸುವ ಬಗ್ಗೆ ಮಾತನಾಡಲು ಆರಂಭಿಸಿದ್ದಾರೆ. ನಗರ ಮತ್ತು ಗ್ರಾಮೀಣ ಬಡವರು ಹಾಗೂ ಅನೌಪಚಾರಿಕ ಆರ್ಥಿಕತೆಯಲ್ಲಿ ಒಳಗೊಂಡ ಅಪಾರ ಜನಸಮುದಾಯವನ್ನು ಅಪಹಾಸ್ಯ ಮಾಡುವಂತೆ ಮೋದಿ ಮತ್ತು ಬಿಜೆಪಿ ಡಿಜಿಟಲ್ ನಗದು ವ್ಯವಹಾರ ವ್ಯವಸ್ಥೆಯ ಬಗ್ಗೆ ಪ್ರಚಾರ ನಡೆಸುತ್ತಿದ್ದಾರೆ. ಸಾಕಷ್ಟು ಹೊಸ ಕರೆನ್ಸಿ ನೋಟುಗಳನ್ನು ಉತ್ಪಾದಿಸಲು ಸರಕಾರ ದಯನೀಯವಾಗಿ ಸೋತಿದ್ದರಿಂದ ಅದನ್ನು ಮುಚ್ಚಿಹಾಕುವ ಸಲುವಾಗಿ "ನಗದುರಹಿತ ಆರ್ಥಿಕತೆ" ಘೋಷಣೆಯನ್ನು ತೇಲಿಬಿಡಲಾಗಿದೆ. ಹೀಗಾಗಿ, 'ನಗದುರಹಿತ' ವ್ಯವಹಾರ ಪ್ರಚಾರವು ದೇಶ ಎದುರಿಸುತ್ತಿರುವ ಕರೆನ್ಸಿ ದುರಂತದಿಂದ ಗಮನವನ್ನು ಬೇರೆಡೆ ಸೆಳೆಯುವ ತಂತ್ರವಾಗಿದೆ.

ಜನರ ಮೇಲಿನ 'ನಗದು ಸಮರ'ದ ಪರಿಣಾಮ ಏನೆಂಬುದು ಎಲ್ಲರಿಗೂ ಕಾಣುತ್ತಿದೆ. ಶೇಕಡಾ 80ರಷ್ಟು ಶ್ರಮಿಕರನ್ನು ಹೊಂದಿರುವ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು (ಎಂಎಸ್‌ಎಂಇ) ಕ್ಷೇತ್ರಕ್ಕೆ ದೊಡ್ಡ ಹೊಡೆತ ಬಿದ್ದಿದೆ. ಸೂರತ್, ಇಚಲಕರಂಜಿ, ಲೂಧಿಯಾನ, ಫರೀದಾಬಾದ್ ಅಥವಾ ತಿರುಪುರ್‌ನಂಥ ಇಂಥ ಕೈಗಾರಿಕಾ ಕೇಂದ್ರಗಳಿಂದ ಹಿಮ್ಮುಖ ವಲಸೆ ಆರಂಭವಾಗಿದೆ.

ಉದ್ಯೋಗ ಖಾತರಿ ಯೋಜನೆಯಡಿ ಕೆಲಸದ ದಿನಗಳಲ್ಲಿ ತೀವ್ರ ಕುಸಿತವಾಗಿದೆ. ಅಕ್ಟೋಬರ್‌ಗೆ ಹೋಲಿಸಿದರೆ ಕೆಲಸ ಪಡೆದ ಕುಟುಂಬಗಳ ಸಂಖ್ಯೆ 23 ಶೇಕಡಾದಷ್ಟು ಕಡಿಮೆಯಾಗಿದೆ. ಕೆಲಸ ಸಿಗದವರ ಸಂಖ್ಯೆ 23.4 ಲಕ್ಷಕ್ಕೆ ಏರಿದೆ. ಇದು ಅಕ್ಟೋಬರ್ ಸಂಖ್ಯೆಯ ದುಪ್ಪಟ್ಟು ಆಗಿದೆ.

ಮುಗಿಯದ ಉದ್ದನೆಯ ಸರತಿ ಸಾಲುಗಳಲ್ಲಿ ನಿಂತಿದ್ದ ನೂರು ಜನರು ಮೃತಪಟ್ಟಿದ್ದಾರೆ. ಕಾಲೇಜ್ ಪರೀಕ್ಷೆಗಳ ಶುಲ್ಕ ಕಟ್ಟಲಾಗದೆ ಹಲವು ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡ ದುರಂತಗಳೂ ನಡೆದಿವೆ. ಸಕಾಲದಲ್ಲಿ ವೈದ್ಯಕೀಯ ಚಿಕಿತ್ಸೆ ನೀಡಲಾಗದೆ ಹಲವರು ಅಸುನೀಗಿದ ಪ್ರಕರಣಗಳೂ ದೇಶದ ವಿವಿಧ ಭಾಗಗಳಿಂದ ವರದಿಯಾಗಿವೆ.

500 ಮತ್ತು 1000 ರೂಪಾಯಿ ನೋಟುಗಳ ಅನಾಣ್ಯೀಕರಣ ಪ್ರಕ್ರಿಯೆ ಕಪ್ಪು ಹಣದ ಕುಳಗಳಿಗೆ ತಮ್ಮ ಹಣವನ್ನು ಸುರಕ್ಷಿತಗೊಳಿಸಲು ನೆರವಾಗಿದೆ. ಮಿಲಿಯಾಂತರ ಜನರ ಜೀವನೋಪಾಯ ಹಾಗೂ ಉದ್ಯೋಗಕ್ಕೆ ಕತ್ತರಿ ಹಾಕಿದೆ. ಬ್ಯಾಂಕ್‌ಗಳಿಗೆ ಜಮಾ ಆಗಿರುವ ಅಪಾರ ಮೊತ್ತದ ಹಣ, ಕೈಗಾರಿಕೋದ್ಯಮಿಗಳ ಬ್ಯಾಲೆನ್ಸ್‌ಶೀಟ್ ಸರಿಪಡಿಸಿಕೊಳ್ಳಲು ಹಾಗೂ ಕಾರ್ಪೊರೇಟ್ ಮತ್ತು ದೊಡ್ಡ ಬಂಡವಾಳಶಾಹಿಗಳ ತೀರಿಸದ ಸಾಲಗಳನ್ನು ಮನ್ನಾ ಮಾಡಲು ಅವರಿಗೆ ಅನುಕೂಲ ಮಾಡಿಕೊಟ್ಟಿದೆ. ಈ ಪ್ರಕ್ರಿಯೆ ಆರ್ಥಿಕತೆಯಲ್ಲಿ ಅನಾಹುತಗಳನ್ನೇ ಸೃಷ್ಟಿಸಿದೆ. ಕೃಷಿ ಮತ್ತು ಕೈಗಾರಿಕೆ ಈ ಎರಡೂ ಕ್ಷೇತ್ರಗಳಲ್ಲಿ ದೊಡ್ಡ ಮಟ್ಟದಲ್ಲಿ ಉತ್ಪಾದನೆಯಲ್ಲಿ ಕುಸಿತವಾಗುವ ಲಕ್ಷಣವಿದೆ. ಗ್ರಾಹಕ ವಸ್ತುಗಳ ಬೇಡಿಕೆಯಲ್ಲಿ ಇಳಿಕೆಯಾಗಲಿದೆ. ಸೇವಾ ಕ್ಷೇತ್ರದಲ್ಲಿ ಕೂಡ ಪರಿಸ್ಥಿತಿ ಮಂದವಾಗಿದೆ.

ಆರ್‌ಎಸ್‌ಎಸ್ ಸಿದ್ಧಾಂತಿಯೊಬ್ಬರು ಅನಾಣ್ಯೀಕರಣವನ್ನು ಪರಮಾಣು ಬಾಂಬ್ ಪರೀಕ್ಷೆಗೆ ಹೋಲಿಸುತ್ತಾ ಒಂದು 'ಆರ್ಥಿಕ ಪೋಖ್ರಾನ್' ಎಂದು ಬಣ್ಣಿಸಿದ್ದಾರೆ. ಹೌದು, ಅವರು ಹೇಳಿರುವುದು ಒಂದು ಅರ್ಥದಲ್ಲಿ ಸರಿಯಾಗಿಯೇ ಇದೆ: ಅನಾಣ್ಯೀಕರಣವು ಜನರ ಮೇಲೆ ಹಾಕಿರುವ ಪರಮಾಣು ಬಾಂಬ್ ಆಗಿದೆ. ಅದು ಜನಸಾಮಾನ್ಯರ ಬದುಕಿನಲ್ಲಿ ಅನಾಹುತಗಳನ್ನು, ಅನರ್ಥಗಳನ್ನು ಉಂಟುಮಾಡಿದೆ.

ಅನು: ವಿಶ್ವ


ಎಲ್ಲ ಸಿನೆಮಾ ಮಂದಿರಗಳಲ್ಲಿ ಚಿತ್ರ ಪ್ರದರ್ಶನ ಆರಂಭವಾಗುವ ಮೊದಲು ರಾಷ್ಟ್ರಗೀತೆಯನ್ನು ಹಾಕಬೇಕು ಮತ್ತು ಅಲ್ಲಿರುವವರೆಲ್ಲರೂ ಅ ವೇಳೆಯಲ್ಲಿ ಎದ್ದು ನಿಲ್ಲಬೇಕು ಎಂದು ದೇಶದ ಸರ್ವೋಚ್ಚ ನ್ಯಾಯಾಲಯ ಆದೇಶ ಹೊರಡಿಸಿದೆ. ಈ ಕ್ರಮ ದೇಶಪ್ರೇಮವನ್ನು ಮತ್ತು ರಾಷ್ಟ್ರವಾದವನ್ನು ಪ್ರೋತ್ಸಾಹಿಸಲು ನೆರವಾಗುತ್ತದೆಯೇ? ಸಿಪಿಐ(ಎಂ) ಇದನ್ನು ಹೇಗೆ ಕಾಣುತ್ತದೆ?



ಸುಪ್ರಿಂ ಕೋರ್ಟ್ ಎಲ್ಲ ಸಿನೆಮಾ ಹಾಲ್‌ಗಳಲ್ಲಿ ಒಂದು ಚಲನಚಿತ್ರ ಪ್ರದರ್ಶನದ ಆರಂಭದಲ್ಲಿ ರಾಷ್ಟ್ರಗೀತೆಯನ್ನು ನುಡಿಸಬೇಕು ಎಂದು ಆದೇಶವಿತ್ತಿದೆ. ಹಾಲ್‌ನಲ್ಲಿ ಸಿನೆಮಾ ವೀಕ್ಷಣೆಗೆ ಬಂದಿರುವ ಎಲ್ಲರೂ ಆಗ ರಾಷ್ಟ್ರಗೀತೆಗೆ ಗೌರವ ಸೂಚಿಸಲು ಎದ್ದು ನಿಲ್ಲಬೇಕು ಎಂದೂ ಆದೇಶ ಹೇಳುತ್ತದೆ. ಇಬ್ಬರು ನ್ಯಾಯಾಧೀಶರಿದ್ದ ಪೀಠ ತನ್ನ ತೀರ್ಪಿನಲ್ಲಿ "ದೇಶದ ನಾಗರಿಕರು ತಾವೊಂದು ದೇಶದಲ್ಲಿ ಬದುಕಿದ್ದೇವೆ ಮತ್ತು ಸಂವಿಧಾನಿಕ ದೇಶಪ್ರೇಮ ಹಾಗೂ ಅದರಲ್ಲಿ ಅಂತರ್ಗತವಾಗಿರುವ ರಾಷ್ಟ್ರೀಯ ಗುಣದ ಪ್ರತೀಕವಾದ ರಾಷ್ಟ್ರಗೀತೆಗೆ ಗೌರವ ಸೂಚಿಸಲು ಕರ್ತವ್ಯಬದ್ಧರಾಗಿದ್ದಾರೆ ಎಂದು ಅರಿಯುವ ಸಮಯವೀಗ ಬಂದಿದೆ" ಹೇಳಿದೆ.

ಈ ನ್ಯಾಯಾಂಗದ ಮೂಲಕ ಹೇರಿರುವ ದೇಶಪ್ರೇಮದ ಮತ್ತು ರಾಷ್ಟ್ರವಾದದ ಪರೀಕ್ಷೆ ಸಂಪೂರ್ಣವಾಗಿ ಅನಗತ್ಯವಾಗಿತ್ತು ಮತ್ತು ಅದು ಕೆಟ್ಟ ತರ್ಕದ ಮೇಲೆ ನಿಂತಿದೆ. ರಾಷ್ಟ್ರಗೀತೆಗೆ ಅಥವ ರಾಷ್ಟ್ರ ಧ್ವಜ ಮುಂತಾದ ರಾಷ್ಟ್ರೀಯ ಪ್ರತೀಕಗಳಿಗೆ ಗೌರವವನ್ನು ಇಂತಹ ಆದೇಶಗಳ ಮೂಲಕ ಉಂಟು ಮಾಡಲು ಸಾಧ್ಯವಿಲ್ಲ. ನಾಗರಿಕರಲ್ಲಿ ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಮೌಲ್ಯಗಳನ್ನು ಬೆಳೆಸುವ ಮೂಲಕ ಮಾತ್ರವೇ ಇಂತಹ ಗೌರವವನ್ನು ಉಂಟುಮಾಡಲು ಸಾಧ್ಯ.

ಅಲ್ಲದೆ, ಎಲ್ಲ ಚಿತ್ರಮಂದಿರಗಳಲ್ಲಿ ಪ್ರತೀ ಚಿತ್ರ ಪ್ರದರ್ಶನದ ಮೊದಲು ರಾಷ್ಟ್ರಗೀತೆಯನ್ನು ನುಡಿಸಬೇಕು ಎನ್ನುವ ಆದೇಶ ಈ ನ್ಯಾಯಾಂಗದ ಅಪ್ಪಣೆಯಲ್ಲಿ ವಿವೇಚನಾಶೀಲತೆಯ ಕೊರತೆಯನ್ನು ಪ್ರದರ್ಶಿಸುತ್ತದೆ. ಜನಗಳು ಚಿತ್ರಮಂದಿರಗಳಿಗೆ ವಿರಾಮಕ್ಕಾಗಿ ಮತ್ತು ಮನರಂಜನೆಗಾಗಿ ಹೋಗುತ್ತಾರೆ. ಒಂದು ಬಿ ದರ್ಜೆಯ ಬಾಲಿವುಡ್ ಅಥವ ಹಾಲಿವುಡ್ ಚಿತ್ರನೋಡಲು ದೇಶಪ್ರೇಮದ ಪರೀಕ್ಷೆಯನ್ನು ಹೇರುವುದು ಎಂದರೆ ನಾಗರಿಕರ ಖಾಸಗಿ ಆಯ್ಕೆ ಮತ್ತು 'ಸಂವಿಧಾನಿಕ ದೇಶಪ್ರೇಮ'ದ ಒಂದು ಹಾಸ್ಯಾಸ್ಪದ ಕಲಸು ಮೇಲೋಗರವಾಗಿ ಬಿಡುತ್ತದೆ.




ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ, ಸಿಫಿ.ಕಾಂ

ಈ ತೀರ್ಪು ರಾಷ್ಟ್ರಗೀತೆಯ ಹಾಡಿನ ವೇಳೆಯಲ್ಲಿ ಎದ್ದು ನಿಲ್ಲಬೇಕೆಂಬ ಆಪ್ಪಣೆಯನ್ನು ಪಾಲಿಸದವರಿಗೆ ಯಾವುದೇ ದಂಡಗಳನ್ನು ಸೂಚಿಸಿಲ್ಲ. ಆದರೆ ಇದನ್ನು ಜನಗಳನ್ನು ಬೆದರಿಸಲು ಮತ್ತು ಶಿಕ್ಷಿಸಲು ಒಂದು ಕ್ರಮವಾಗಿ ಬಳಸಬಹದು ಎಂಬುದು ನಮಗೆ ಗೊತ್ತಿದೆ.

ಕೆಲವು ವರ್ಷಗಳ ಹಿಂದೆ ತಿರುವನಂತಪುರದಲ್ಲಿ ಚಿತ್ರ ಪ್ರದರ್ಶನದ ಕೊನೆಯಲ್ಲಿ ರಾಷ್ಟ್ರಗೀತೆ ಆರಂಭವಾದಾಗ ಎದ್ದು ನಿಲ್ಲದ್ದಕ್ಕೆ ಕೆಲವು ವ್ಯಕ್ತಿಗಳ ಮೇಲೆ ರಾಷ್ಟ್ರದ್ರೋಹದ ಕೇಸು ಹಾಕಲಾಗಿತ್ತು.

ಈಗ ಮೋದಿ ಸರಕಾರ ಅಧಿಕಾರದಲ್ಲಿದ್ದು ಸುಪ್ರಿಂ ಕೋರ್ಟ್ ಕಾನೂನಾತ್ಮಕವಾಗಿ ವಿಧಿಸಿರುವ ದೇಶಪ್ರೇಮದ ಪರೀಕ್ಷೆಯನ್ನು ಹೇರುವ ಸಂಭ್ರಮದಲ್ಲಿರುವ ಮಂದಿಗೇನೂ ಕೊರತೆಯಿಲ್ಲ. ತಿರುವನಂತಪುರದ ಚಿತ್ರೋತ್ಸವದಲ್ಲಿ ಇದರ ಒಂದು ಇಣುಕು ನೋಟ ಆಗಲೇ ಕಂಡಿದೆ. ಬಹುಶಃ ಸುಪ್ರಿಂ ಕೋರ್ಟ್ ತನ್ನ ಈ ಆದೇಶವನ್ನು ವಿಮರ್ಶಿಸುವ ಸಮಯವೂ ಬೇಗನೇ ಬರಬಹುದು.

"ಎದ್ದು ನಿಲ್ಲಿ, ಹಕ್ಕುಗಳಿಗಾಗಿ ಹೋರಾಡಿ" ಮಹಿಳೆಯರನ್ನು ಒಂದುಗೂಡಿಸಿ ಪ್ರಜಾಪ್ರಭುತ್ವದ ರಕ್ಷಣೆ



ಈ ಘೋಷಣೆಯೊಂದಿಗೆ ಭೋಪಾಲದಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ)ಯ 11ನೇ ರಾಷ್ಟ್ರೀಯ ಸಮ್ಮೇಳನ ಡಿಸೆಂಬರ್ 14ರಂದು ಮುಕ್ತಾಯಗೊಂಡಿತು. ಡಿಸೆಂಬರ್ 10ರಂದು ಆರಂಭವಾದ ಈ ಐದು ದಿನಗಳ ಸಮ್ಮೇಳನದ ಮೊದಲು ದೇಶದ ವಿವಿಧ ಭಾಗಗಳಿಂದ ಹೊರಟ ಜಾಥಾಗಳು ಭೋಪಾಲಕ್ಕೆ ಬಂದು ಸೇರಿದ್ದವು.

23 ರಾಜ್ಯಗಳಿಂದ 788 ಪ್ರತಿನಿಧಿಗಳು ಭಾಗವಹಿಸಿದ್ದ ಸಮ್ಮೇಳನ ಪ್ರಸಕ್ತ ಬಿಜೆಪಿ ಸರಕಾರದ ಜನ-ವಿರೋಧಿ, ನಿರ್ದಿಷ್ಟವಾಗಿ ಮಹಿಳಾ-ವಿರೋಧಿ ಧೋರಣೆಗಳ ವಿರುದ್ಧ ಐಕ್ಯ ಹೋರಾಟವನ್ನು ತೀವ್ರಗೊಳಿಸಲು ಕರೆ ನೀಡಿದೆ. ಸಮ್ಮೇಳನದಲ್ಲಿ ನಡೆದ ಶ್ರೀಮಂತ ಮತ್ತು ಜೀವಂತ ಚರ್ಚೆಗಳಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳು ಸಮಾನತೆ ಮತ್ತು ಪ್ರಜಾಪ್ರಭುತ್ವಕ್ಕಾಗಿ ಹೋರಾಟವನ್ನು ಮುಂದುವರೆಸಲು ಪಣ ತೊಟ್ಟರು.

ಸಮ್ಮೇಳನ ಡಿಸೆಂಬರ್ 19, 2016 ರಂದು ಸುಶೀಲಾ ಗೋಪಾಲನ್ ದಿನ ಮತ್ತು ಜನವರಿ 3, 2017ರಂದು ಸಾವಿತ್ರಿಬಾಯಿ ಫುಲೆ ದಿನವನ್ನು ಆಚರಿಸಲು ಕರೆ ನೀಡಿತು.

ಬಹಿರಂಗ ಸಭೆಯಲ್ಲಿ ಕೇರಳದ ಮುಖ್ಯಮಂತ್ರಿಗಳು ಮತ್ತು ರಾಧಿಕಾ ವೆಮುಲಾ



ಡಿಸೆಂಬರ್ 10ರಂದು ಭೋಪಾಲದ ದಸರಾ ಮೈದಾನದಲ್ಲಿ ಬಹಿರಂಗ ಸಭೆಯೊಂದಿಗೆ ಸಮ್ಮೇಳನ ಆರಂಭವಾಯಿತು. ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತ ಎಐಡಿಡಬ್ಲ್ಯುಎ ಮಹಿಳೆಯರ ಹಕ್ಕುಗಳಿಗಾಗಿ ನಡೆಸಿರುವ ಹೋರಾಟಗಳನ್ನು ನೆನಪಿಸಿದರು. ಇದಕ್ಕಾಗಿ ಅದನ್ನು ಅಭಿನಂದಿಸಿದರು. ಈ ಸಮ್ಮೇಳನ ಈ ಪರಂಪರೆಯನ್ನು ಮುಂದುವರೆಸಲು ಮತ್ತು ಮಹಿಳಾ-ವಿರೋಧಿ ಸರಕಾರದ ಮಹಿಳಾ-ವಿರೋಧಿ ಧೋರಣೆಗಳ ವಿರುದ್ಧ ಹೋರಾಟದ ಕಾರ್ಯತಂತ್ರಗಳನ್ನು ರೂಪಿಸಬೇಕು ಎಂದು ಸೂಚಿಸಿದರು. ಬಿಜೆಪಿ ಸರಕಾರ ಎರಡೂವರೆ ವರ್ಷಗಳಿಂದ ಅಧಿಕಾರ ನಡೆಸುತ್ತಿದೆ, ಅದರ ಮುಖ್ಯಸ್ಥರಾದ ಪ್ರಧಾನ ಮಂತ್ರಿಗಳು ತಾನು ಅತ್ಯಂತ ಮಹಿಳೆಯರ ಪರ ಎಂದು ಹೇಳಿಕೊಂಡು ತಿರುಗಾಡುತ್ತಿದ್ದಾರೆ, ಅದರೆ ವಾಸ್ತವವಾಗಿ ಪ್ರತಿದಿನ ಮಹಿಳೆಯರ ಹಕ್ಕುಗಳ ಮೇಲೆ ಪ್ರಹಾರ ಮಾಡುವ ಬದಲಾವಣೆಗಳನ್ನು ತರಲಾಗುತ್ತಿದೆ ಎಂದು ವಿಜಯನ್ ಟೀಕಿಸಿದರು. ರಾಜಸ್ತಾನ ಮತ್ತು ಹರ್ಯಾಣದಲ್ಲಿ ಅವರ ಪಕ್ಷದ ಸರಕಾರಗಳು ಅಸಂವಿಧಾನಿಕ ಸುಗ್ರೀವಾಜ್ಞೆಗಳನ್ನು ತಂದು ಪಂಚಾಯತುಗಳ ಚುನಾವಣೆಗಳಲ್ಲಿ 80ಶೇ. ಮಹಿಳೆಯರು ಸ್ಪರ್ಧಿಸದಂತೆ ಮಾಡಿದವು. ಎಐಡಿಡಬ್ಲ್ಯುಎ ಇದರ ವಿರುದ್ಧ ನ್ಯಾಯಾಲಯಗಳಲ್ಲಿ ಹೋರಾಟ ನಡೆಸಿದೆ. ಮಹಿಳಾ ಮೀಸಲಾತಿಯ ಮಸೂದೆಯನ್ನು ಚರ್ಚಿಸಲು ಈಗಲೂ ನಿರಾಕರಿಸಲಾಗುತ್ತಿದೆ ಎಂದು ನೆನಪಿಸಿದ ಅವರು ಮೋದಿ ಸರಕಾರದ ಇತ್ತೀಚಿನ ನೋಟು ರದ್ದತಿ ಕ್ರಮ ಮೊದಲು ತಟ್ಟಿರುವುದು ಮಹಿಳೆಯರನ್ನೇ, ಇದಕ್ಕೆ ಮೊದಲ ಬಲಿ ಎಟಿಎಂ ಸಾಲಿನಲ್ಲಿ ನಿಂತಿದ್ದ ಒಬ್ಬ ಮಹಿಳೆ ಎಂದು ಅವರು ಹೇಳಿದರು.

ಈ ವರ್ಷದ ಆರಂಭದಲ್ಲಿ ಮೋದಿ ಸರಕಾರದ ದಲಿತ-ವಿರೋಧಿ ಧೋರಣೆಗಳಿಗೆ ಬಲಿಯಾದ ಹೈದರಾಬಾದ್ ವಿವಿಯ ಸಂಶೋಧನಾ ವಿದ್ಯಾರ್ಥಿ ರೋಹಿತ್ ವೆಮುಲರವರ ತಾಯಿ ರಾಧಿಕಾ ವೆಮುಲಾ ಕೂಡ ಸಮ್ಮೇಳನದ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ನ್ಯಾಯಕ್ಕಾಗಿ ತನ್ನ ಹೋರಾಟವನ್ನು ವಿವರಿಸುತ್ತ ಅವರು ದಲಿತರ ಮತ್ತು ಕಾರ್ಮಿಕ ವರ್ಗದ ಧ್ಯೇಯೋದ್ದೇಶಗಳು ಒಂದೇ, ಈ ಸಮ್ಮೇಳನ ದಲಿತರು ಮತ್ತು ಇತರ ಪ್ರಜಾಪ್ರಭುತ್ವವಾದಿ ಸಕ್ತಿಗಳ ನಡುವೆ ಮೂಡಿ ಬರುತ್ತಿರುವ ಮೈತ್ರಿಯನ್ನು ಇನ್ನಷ್ಟು ಕಟ್ಟಿ ಬೆಳೆಸುವ ಬಗ್ಗೆ ಚರ್ಚಿಸುತ್ತದೆ ಎಂದು ಆಶಿಸಿದರು.

ಎಐಡಿಡಬ್ಲ್ಯುಎ ಪ್ರಧಾನ ಕಾರ್ಯದರ್ಶಿ ಜಗ್ಮತಿ ಸಂಗ್ವಾನ್ ಕೂಡ ತಾವು ಆರಂಭಿಸಿದ ಹೋರಾಟವನ್ನು ಮುಮದುವರೆಸುವಂತೆ ಪ್ರತಿನಿಧಿಗಳಿಗೆ ಕರೆ ನೀಡಿದರು.

ನಂತರ ಮಾತನಾಡಿದ ಹಿರಿಯ ಮುಖಂಡರಾದ ಸುಭಾಷಿಣಿ ಅಲಿ ಮಧ್ಯಪ್ರದೇಶದಲ್ಲಿನ ದುರಾಡಳಿತದ ಬಗ್ಗೆ ಮಾತನಾಡುತ್ತ ಅಲ್ಲಿಯ ಮುಖ್ಯಮಂತ್ರಿ 'ಕಂಸ ಮತ್ತು ಶಕುನಿ ಮಾಮ 'ಎನ್ನುತ್ತ ಆತನ ಧೋರಣೆಗಳನ್ನು ರಾಜ್ಯದ ಮಹಿಳೆಯರು ವಿರೋಧಿಸುತ್ತಾರೆ ಎಂದು ಹೇಳಿದರು. ಎಐಡಿಡಬ್ಲ್ಯುಎ ಅಧ್ಯಕ್ಷರಾದ ಮಾಲಿನಿ ಭಟ್ಟಾಚಾರ್ಯ ಬಹಿರಂಗ ಸಭೆಯ ಅಧ್ಯಕ್ಷತೆ ವಹಿಸಿದ್ದರು.



ಉದ್ಘಾಟನಾ ಅಧಿವೇಶನದಲ್ಲಿ ಮುಕ್ತಾ ಧಭೋಲ್ಕರ್ ಸ್ಫೂರ್ತಿದಾಯಕ ಭಾಷಣ



ಡಿಸೆಂಬರ್ 11ರಂದು ಸಮ್ಮೇಳನದ ಅಧಿವೇಶನವನ್ನು ಮಹಾರಾಷ್ಟ್ರ ಅಂಧಶ್ರದ್ಧಾ ನಿರ್ಮೂಲನಾ ಸಮಿತಿಯ ಮುಖಂಡರಾದ ಮುಕ್ತಾ ಧಬೋಲ್ಕರ್ ಉದ್ಘಾಟಿಸಿದರು. ರಾಧಿಕಾ ವೆಮುಲಾ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು.

ಅತ್ಯಂತ ಸ್ಫೂರ್ತಿದಾಯಕ ಉದ್ಘಾಟನಾ ಭಾಷಣವನ್ನು ಮಾಡಿದ ಮುಕ್ತಾ ಧಬೋಲ್ಕರ್ ತಮ್ಮ ಹೋರಾಟಗಳು ಮತ್ತು ಎಐಡಿಡಬ್ಲ್ಯುಎ ಹೋರಾಟಗಳ ನಡುವೆ ಇರುವ ಸಂಬಂಧವನ್ನು ತೋರಿಸಿದರು. ಈಗ ದೇಶದಲ್ಲಿ ನಡೆದಿರುವ 'ದೇಶಭಕ್ತಿ'ಯ ಚರ್ಚೆಯ ಬಗ್ಗೆ ಮಾತನಾಡುತ್ತ **ಮಹಿಳಾ ಕಾರ್ಯಕರ್ತೆಯರು ತಮ್ಮ ಸೋದರಿಯರ ಹಕ್ಕುಗಳಿಗಾಗಿ ನಡೆಸುತ್ತಿರುವ ದೈನಂದಿನ ಹೋರಾಟಗಳೇ ನಿಜವಾದ 'ದೇಶಭಕ್ತಿ', ಏಕೆಂದರೆ ಅವು ಅವು ಈ ಸೋದರಿಯರು ಒಂದು ಘನತೆಯ ಬದುಕು ನಡೆಸಲು ನೆರವಾಗುತ್ತವೆ, ಇನ್ನೊಂದೆಡೆಯಲ್ಲಿ ಆರಸ್ಸೆಸ್‌ನಂತಹ ಸಂಘಟನೆಗಳ ಹುಸಿ ರಾಷ್ಟ್ರವಾದ ಸಮಾಜದಲ್ಲಿ ತೊಂದರೆಗಳು ಮತ್ತು ವಿಭಜನೆಯನ್ನೇ ತರುತ್ತಿವೆ** ಎಂದರು. ತಮ್ಮ ಸಂಘಟನೆಯ ಕೆಲಸವನ್ನು ಈ ಹಿನ್ನೆಲೆಯಲ್ಲಿ ನೋಡಬೇಕು ಎಂದ ಅವರು ತಮ್ಮ ಅನುಭವಗಳನ್ನು ಹಂಚಿಕೊಂಡರು, ಪನ್ಸಾರೆ ಮತ್ತು ಕಲಬುರ್ಗಿಯವರ ತ್ಯಾಗಗಳನ್ನು ಮತ್ತು ಈ ಎಲ್ಲ ಹೋರಾಟಗಳಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳ ಬೆಂಬಲ, ಅದರಲ್ಲೂ ಕೆಲವು ಎಐಡಿಡಬ್ಲ್ಯುಎ ಮುಖಂಡರ ಬೆಂಬಲವನ್ನು ಅವರು ನೆನಪಿಸಿಕೊಂಡರು. ಕೊನೆಯಲ್ಲಿ ಅವರು ಪ್ರಸಕ್ತ ಬಲಪಂಥೀಯ ಆಡಳಿತದ ವಿರುದ್ಧ ಎಲ್ಲ ಪ್ರಜಾಪ್ರಭುತ್ವವಾದಿ ಮತ್ತು ಎಡ ಶಕ್ತಿಗಳು ಒಂದಾಗಬೇಕು ಎಂದು ಕರೆ ನೀಡಿದರು.

ಎಐಡಿಡಬ್ಲ್ಯುಎ ಪೋಷಕರಾದ ಬೃಂದಾ ಕಾರಟ್ 23 ರಾಜ್ಯಗಳಿಂದ ಬಂದಿದ್ದ 788 ಪ್ರತಿನಿಧಿಗಳ ಮುಂದೆ ಸಮ್ಮೇಳನದ ಮುಂದಿರುವ ಮುಖ್ಯ ಪ್ರಶ್ನೆಗಳ ರೂಪುರೇಷೆಗಳನ್ನು ನೀಡಿದರು. ಸಂಘ ಪರಿವಾರ ದಲಿತರು, ಆದಿವಾಸಿಗಳನ್ನು ತನ್ನ ತೆಕ್ಕೆಯೊಳಗೆ ಸೆಳೆಯಲು ಪ್ರಯತ್ನಿಸುತ್ತಿದೆ. ಚಾರಿತ್ರಿಕವಾಗಿ ಶೋಷಣೆಗೆ ಒಳಗಾಗಿರುವ ಈ ವಿಭಾಗಗಳ ಮತ್ತು ಅಲ್ಪಸಂಖ್ಯಾತರ ಪ್ರಶ್ನೆಗಳನ್ನು ಎತ್ತಿಕೊಳ್ಳಲು ಒಂದು ಐಕ್ಯ ವೇದಿಕೆಯನ್ನು ಕಟ್ಟುವುದರ ಈಗಿನ ತುರ್ತು ಅಗತ್ಯ ಎಂದು ಅವರು ಹೇಳಿದರು. **ಆರೆಸ್ಸೆಸ್/ಬಿಜೆಪಿ ಕೋಮುವಾದಿ ರಾಜಕೀಯ ಜನಗಳನ್ನು ಒಡೆಯುತ್ತದೆ, ನಮ್ಮ ಕೆಲಸ ಜನಗಳಲ್ಲಿ ಐಕ್ಯತೆ ತರುವುದು** ಎಂದು ಅವರು ಹೇಳಿದರು. ಬಲಪಂಥೀಯರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಕೊಡುತ್ತಿರುವ ಕಾರ್ಪೊರೇಟ್ ಶಕ್ತಿಗಳನ್ನು ಹೇಗೆ ಎದುರಿಸುವುದು ಎಂಬ ಬಗ್ಗೆಯೂ ಸಮ್ಮೇಳನ ಕಾರ್ಯತಂತ್ರವನ್ನು ರೂಪಿಸಬೇಕು ಎಂದು ಅವರು ಹೇಳಿದರು.

ಈ ಉದ್ಘಾಟನಾ ಅಧಿವೇಶನದಲ್ಲಿ ರಾಧಿಕಾ ವೆಮುಲಾ ಅವರನ್ನು ಸನ್ಮಾನಿಸಲಾಯಿತು. ನಾಲ್ಕು ಮಹಿಳಾ ಕಾರ್ಯಕರ್ತೆಯರನ್ನು, ಬಂಗಾಲದ ದೇಬಾಶ್ರೀ ಸಪಿನಾಪತಿ, ಹರ್ಯಾಣದ ಸಂತೋಷಾ, ಆಂಧ್ರಪ್ರದೇಶದ ಸತ್ಯವತಿ ಮತ್ತು ಉತ್ತರ ಪ್ರದೇಶದ ಆಶಿಯಾನ ಸಾಮೂಹಿಕ ಬಲಾತ್ಕಾರದಲ್ಲಿ ಬದುಕುಳಿದಾಕೆಯನ್ನು ಕೂಡ ಸನ್ಮಾನಿಸಲಾಯಿತು.

ಪುಟ 10 ಕ್ಕೆ

2017ರ ಡೈರಿಯನ್ನು ಸುಭಾಷಿಣಿ ಅಲಿ ಬಿಡುಗಡೆ ಮಾಡಿದರು. ಕ್ಯಾಲೆಂಡರನ್ನೂ ಬಿಡುಗಡೆ ಮಾಡಲಾಯಿತು.



ಕರ್ನಾಟಕ ಘಟಕ ಪ್ರಕಟಿಸಿದ 'ಬೆವರ ಹನಿ'ಯ ಇಂಗ್ಲಿಷ್ ಭಾಷಾಂತರದ ಪುಸ್ತಕ " ಪರ್ಲ್ಸ್ ಆಫ್ ಸ್ವೆಟ್' ಮತ್ತು ಇನ್ನೊಂದು ಪುಸ್ತಕ 'ನೇಮ್‌ಲೆಸ್, ಫೇಸ್‌ಲೆಸ್: ವಿಕ್ಟಿಮ್ಸ್ ಇನ್ ದಿ ಕ್ರಿಮಿನಲ್ ಜಸ್ಟಿಸ್ ಸಿಸ್ಟಮ್' ಬಿಡುಗಡೆ ಮಾಡಲಾಯಿತು.



ಪ್ರಧಾನ ಕಾರ್ಯದರ್ಶಿಯಾಗಿ ಮರಿಯಮ್ ಧವಳೆ

11ನೇ ಸಮ್ಮೇಳನ 99 ಸದಸ್ಯರು ಮತ್ತು 12 ವಿಶೇಷ ಆಹ್ವಾನಿತರಿರುವ ಕೇಂದ್ರೀಯ ಕಾರ್ಯಕಾರಿ ಸಮಿತಿ(ಸಿಇಸಿ) ಯನ್ನು ಆರಿಸಿತು. ಹೊಸ ಸಿಇಸಿ 32 ಪದಾಧಿಕಾರಿಗಳನ್ನು ಆರಿಸಿತು.

ಅಧ್ಯಕ್ಷರಾಗಿ ಮಾಲಿನಿ ಭಟ್ಟಾಚಾರ್ಯ ಪುನರಾಯ್ಕೆಗೊಂಡರು.

ಮರಿಯಂ ಧವಳೆ ಪ್ರಧಾನ ಕಾರ್ಯದರ್ಶಿಯಾಗಿ ಚುನಾಯಿತರಾದರು.

ಪಿ.ಎ.ಶ್ರೀಮತಿ ಖಜಾಂಚಿಯಾಗಿ ಆಯ್ಕೆಗೊಂಡರು.

15 ಉಪಾಧ್ಯಕ್ಷರು, ಏಳು ರಾಷ್ಟ್ರೀಯ ಕಾರ್ಯದರ್ಶಿಗಳು ಮತ್ತು ಎಂಟು ಸಹಾಯಕ ಕಾರ್ಯದರ್ಶಿಗಳನ್ನು ಕೂಡ ಆರಿಸಲಾಯಿತು. ಇವರು ಹೊಸ ಕಾರ್ಯದರ್ಶಿ ಮಂಡಳಿಯ ಸದಸ್ಯರಾಗಿರುತ್ತಾರೆ.

ಕರ್ನಾಟಕದಿಂದ ಗೌರಮ್ಮ ಸಹಾಯಕ ಕಾರ್ಯದರ್ಶಿಯಾಗಿ ಆಯ್ಕೆಯಾಗಿದ್ದಾರೆ. ಪದಾಧಿಕಾರಿಯಾಗಿ ಮೊದಲ ಬಾರಿಗೆ ಕರ್ನಾಟಕದಿಂದ ಆಯ್ಕೆಯಾಗಿದ್ದಾರೆ.ಕೆ.ಎಸ್. ಲಕ್ಷ್ಮೀ, ವಿ. ಗೀತಾ ಕೇಂದ್ರ ಸಮಿತಿ ಸದಸ್ಯರಾಗಿ ಪುನರಾಯ್ಕೆಯಾಗಿದ್ದಾರೆ. ಕೆ.ಎಸ್. ವಿಮಲ ಮತ್ತು ನೀಲಾ ಕೆ. ವಿಶೇಷ ಆಹ್ವಾನಿತರಾಗಿದ್ದಾರೆ.



ಮಾಲಿನಿ ಭಟ್ಟಾಚಾರ್ಯ ಅಧ್ಯಕ್ಷರು



ಮರಿಯಂ ಧವಳೆ ಪ್ರಧಾನ ಕಾರ್ಯದರ್ಶಿ



ಗೌರಮ್ಮ ಸಹಾಯಕ ಕಾರ್ಯದರ್ಶಿ



ಗ್ರಾಮೀಣ ಕೆಲಸಗಾರರು

ನಿತ್ಯಾನಂದಸ್ವಾಮಿ

ಕುಂದಾಪುರದಲ್ಲಿ ನಡೆಯಲಿರುವ ಕೃಷಿ ಕೂಲಿಕಾರರ 6ನೇ ರಾಜ್ಯ ಸಮ್ಮೇಳನದ ಸಂದರ್ಭದಲ್ಲಿ ಒಂದು ವಿಶೇಷ ಲೇಖನ ಕೃಷಿಯಲ್ಲಿ ನೆಲೆಯನ್ನು ಕಳೆದುಕೊಂಡ ಕೃಷಿ ಕೂಲಿಕಾರರ ಸ್ವರೂಪವೇ ಇಂದು ಬದಲಾಗುತ್ತಿದೆ. ಜೀವನ ನಿರ್ವಹಣೆಗಾಗಿ ಅವರು ಇಂದು ಇಟ್ಟಿಗೆ ತಯಾರಿಸುವುದು, ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ಹಮಾಲಿ ಕೆಲಸ, ಮೀನುಗಾರಿಕೆ, ಸರಕು ಸಾಗಾಟ, ಸಣ್ಣ ಪ್ರಮಾಣದ ವ್ಯಾಪಾರ ಮುಂತಾದ ಕೃಷಿಯೇತರ ಕೆಲಸಗಳಿಗೆ ಸೇರಿಕೊಳ್ಳುವುದು ಅನಿವಾರ್ಯವಾಗುತ್ತಿದೆ. ಇವರು ಕೃಷಿಕೂಲಿಕಾರರೆಂಬ ಆಸ್ಮಿತೆಯನ್ನೇ ಕಳೆದುಕೊಂಡವರಾಗುತ್ತಾರೆ. ಇವರನ್ನು ಗ್ರಾಮೀಣ ದೈಹಿಕ ಕೆಲಸಗಾರರೆಂದು ಗುರುತಿಸಬಹುದಾಗಿದೆ. ಅವರನ್ನು ಪ್ರತ್ಯೇಕವಾಗಿ ಸಂಘಟಿಸಬೇಕಾಗಬಹುದು. ಕೃಷಿ ಕೂಲಿಕಾರರ ಸಂಘವು ಅವರ ಬೇಡಿಕೆಗಳನ್ನು ಎತ್ತಿಕೊಳ್ಳಬಹುದು.

ವಿಶ್ವ ಮಾರುಕಟ್ಟೆಯ ಮೇಲೆ ತಮ್ಮ ಅಧಿಪತ್ಯವನ್ನು ಸ್ಥಾಪಿಸುವ ಉದ್ದೇಶದಿಂದ ಇಂಡಿಯಾ ಎಂಬ ಏಶ್ಯಾದ ಅತಿ ದೊಡ್ಡ ಮಾರುಕಟ್ಟೆಯನ್ನು ತಮ್ಮ ವಶಕ್ಕೆ ಪಡೆಯಲು ಹೊಂಚು ಹಾಕುತ್ತಿದ್ದ ಸಾಮ್ರಾಜ್ಯಶಾಹಿ ಶಕ್ತಿಗಳು, ತಮ್ಮ ದಾರಿಯನ್ನು ಸರಳ ಹಾಗೂ ಸುಗಮಗೊಳಿಸಿಕೊಂಡು 25 ವರ್ಷಗಳಾಗಿವೆ. ಅಂದರೆ ಸಾಮ್ರಾಜ್ಯಶಾಹಿ ಪ್ರೇರಿತ ಜಾಗತೀಕರಣದ ಧೋರಣೆಗಳನ್ನು ಇಂಡಿಯಾದಲ್ಲಿ ಅನುಷ್ಠಾನಗೊಳಿಸಲು ಆರಂಭಿಸಿ 25 ವರ್ಷಗಳು ಕಳೆದಿವೆ. ಅಂದು ಕಾಂಗ್ರೆಸ್ಸಿನ ಪ್ರಧಾನಿ 'ಮೌನೀ' ಸಿಂಗ್ ವಿಶ್ವ ಹಣಕಾಸು ಬಂಡವಾಳದ ಅಣತಿಯನ್ನು ಅಚ್ಚುಕಟ್ಟಾಗಿ ಅನುಷ್ಠಾನಗೊಳಿಸಲು ಮುಂದಾಗಿದ್ದರೆ, ಇಂದೂ ಬಿಜೆಪಿಯ 'ಮಾತಿನ ಮಲ್ಲ' ತನ್ನ ಆರ್ಭಟಕ್ಕೆ ತಕ್ಕುದಾಗಿ ಈ ನವ ಉದಾರವಾದಿ ಸುಧಾರಣೆಗಳ ಅನುಷ್ಠಾನದ ವೇಗವನ್ನು ತೀವ್ರಗೊಳಿಸಿದ್ದಾರೆ.



ಜಾಗತೀಕರಣದ ಅನುಷ್ಠಾನದಿಂದ ದೇಶದ ತೀವ್ರ ಅಭಿವೃದ್ಧಿಗೆ ಚಾಲನೆ ದೊರೆಯುತ್ತದೆ; ದೇಶಕ್ಕೆ ವಿದೇಶಿ ಬಂಡವಾಳ ಹರಿದು ಬರುತ್ತದೆ; ಉತ್ಪಾದನೆ ಹೆಚ್ಚಾಗುತ್ತದೆ; ಉದ್ಯೋಗಗಳ ಸೃಷ್ಠಿಯಾಗುತ್ತದೆ; ರೈತರ ಉತ್ಪನ್ನಗಳಿಗೆ ಜಾಗತಿಕ ಮಾರುಕಟ್ಟೆಯ ಬೆಲೆಗಳು ಸಿಗುತ್ತವೆ. . . ಇತ್ಯಾದಿ ಬಣ್ಣ ಬಣ್ಣದ ಮಾತುಗಳಿಂದ ಹಾಡಿ ಹೊಗಳಲಾಗುತ್ತಿತ್ತು. ಆದರೆ ಕಳೆದ 25 ವರ್ಷಗಳ ಅನುಭವ ಇದಕ್ಕೆ ವ್ಯತಿರಿಕ್ತವಾಗಿದೆ.

ಕೃಷಿ ಮಾಡಿದಷ್ಟು ನಷ್ಟ ಹೆಚ್ಚಾಗುತ್ತದೆ

ಕೃಷಿ ವಲಯದ ಪರಿಸ್ಥಿತಿಯನ್ನು ಪ್ರಮುಖವಾಗಿ ಅವಲೋಕಿಸುವುದಾದರೆ, ಈ ಪರಂಪರಾಗತ ವಲಯವು ಅಭಿವೃದ್ಧಿಯತ್ತ ಹೆಜ್ಜೆ ಹಾಕುವ ಬದಲು ಕುಗ್ಗುತ್ತಿರುವುದನ್ನು ಕಾಣುತ್ತಿದ್ದೇವೆ. ಕೃಷಿ ವಲಯ ಇಂದು ಒಂದು ಬಿಕ್ಕಟ್ಟುಗ್ರಸ್ತ ವಲಯವಾಗಿದೆ. 90ರ ದಶಕದಲ್ಲಿ ಕಾಂಗ್ರೆಸ್ ಆಳ್ವಿಕೆಯೊಂದಿಗೆ ಆರಂಭವಾದ ಈ ಬಿಕ್ಕಟ್ಟು ಈಗ ಬಿಜೆಪಿ ಆಳ್ವಿಕೆಯಲ್ಲಿ ಆತಂಕ ಹುಟ್ಟಿಸುವಷ್ಟು ಆಳವಾಗುತ್ತಿದೆ.

ಸ್ವಾತಂತ್ರ್ಯ ಬಂದ ಸಮಯದಲ್ಲಿ ಕೃಷಿ ಮತ್ತು ತತ್ಸಂಬಂಧಿ ಕ್ಷೇತ್ರದ ಜಿ.ಡಿ.ಪಿ ಪಾಲು ಶೇ.51.81 ರಷ್ಟು ಇತ್ತು. ಈಗ ಅದು ಶೇ.13.94 ಕ್ಕೆ ಕುಸಿದಿದೆ. ಜಾಗತೀಕರಣದ ಆರಂಭದ ದಿನಗಳಲ್ಲಿ, ಅಂದ–ರೆ 1990–91 ರಲ್ಲಿ ಜಿಡಿಪಿಯ ಶೇ.29.53 ರಷ್ಟಿದ್ದ ಕೃಷಿಯ ಪಾಲು 2013–14ರಲ್ಲಿ ಶೇ. 13.94 ಕ್ಕೆ ಇಳಿದಿದೆ.

ನಂತರದ ವರ್ಷಗಳಲ್ಲಿಯೂ ಜಿಡಿಪಿಯಲ್ಲಿ ಕೃಷಿ ವಲಯದ ಪಾಲು ಇಳಿಯುತ್ತಲೇ ಇದೆ. ಜಾಗತಿಕ ಮಾರುಕಟ್ಟೆಯಲ್ಲಿ ದೇಶದ ಕೃಷಿ ಉತ್ಪನ್ನಗಳಿಗೆ ಒಳ್ಳೆಯ ಬೆಲೆ ಸಿಗಬಹುದೆಂಬ ಕನಸು ನುಚ್ಚುನೂರಾಗಿದೆ. ಚಹ, ರಬ್ಬರ್, ಕಾಳುಮೆಣಸು, ತೆಂಗು, ಅಡಿಕೆ, ಹತ್ತಿ, ತೊಗರಿ, ಈರುಳ್ಳಿ ಮೊದಲಾದವುಗಳ ಬೆಲೆಗಳು ಒಂದೇ ಸ್ಥಗಿತಗೊಂಡಿವೆ ಅಥವ ಕುಸಿದು ಬಿದ್ದಿವೆ.

ಜಾಗತೀಕರಣದ ಕಳೆದ 25 ವರ್ಷಗಳಲ್ಲಿ ದೇಶದ ವಿವಿಧ ಬಾಗಗಳಲ್ಲಿ 3 ಲಕ್ಷಕ್ಕೂ ಹೆಚ್ಚು ಕೃಷಿಕರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರಲ್ಲಿ ಶೇ.30ರಷ್ಟು ಮಂದಿ ಕೃಷಿ ಕೂಲಿಕಾರರು. ಬೀಜ, ಗೊಬ್ಬರ, ಕ್ರಿಮಿನಾಶಕ, ನೀರಾವರಿ ಮೊದಲಾದ ಕೃಷಿ ಲಾಗುವಾಡುಗಳ ಸಬ್ಸಿಡಿ ರದ್ದಾಗಿ ಬೆಲೆಗಳು ಗಗನಕ್ಕೇರಿದ್ದು, ಅದಕ್ಕೆ ಸಮನಾಗಿ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕದಿರುವುದು, ವಾಣಿಜ್ಯ ಬ್ಯಾಂಕುಗಳಿಂದ ಮತ್ತು ಖಾಸಗಿ ಲೇವಾದೇವಿಗಾರರಿಂದ ಪಡೆದ ದುಬಾರಿ ಬಡ್ಡಿಯ ಸಾಲವನ್ನು ಮರುಪಾವತಿ ಮಾಡಲು ಸಾಧ್ಯವಾಗದಿರುವುದು ರೈತರ ನಿಲ್ಲದ ಆತ್ಮಹತ್ಯೆಗಳಿಗೆ ಕಾರಣವಾಗಿದೆ. ಶೇ.65ರಷ್ಟು ರೈತರು ಇಂದು ಸಾಲ ಹಾಗೂ ಅದರ ಮೇಲಿನ ಬಡ್ಡಿಯ ಮರು ಪಾವತಿಯ ಉರುಳಿಗೆ ಕೊರಳೊಡ್ಡಿಕೊಂಡ ಸ್ಥಿತಿಯಲ್ಲಿದ್ದಾರೆ. ಕೃಷಿ ಒಂದು ಲಾಭದಾಯಕ ವೃತ್ತಿಯಾಗಿ ಉಳಿದಿಲ್ಲ. ಕೃಷಿ ಮಾಡಿದಷ್ಟು ನಷ್ಟ ಹೆಚ್ಚಾಗುತ್ತದೆ ಎಂಬ ಅನುಭವ ರೈತರದು. ಖಚಿತ ಆದಾಯ ದೊರೆಯುವ ಬೇರೆ ಉದ್ಯೋಗ ಸಿಗುವುದಾದರೆ ಶೇ.40ರಷ್ಟು ರೈತರು ಸದ್ಯ ಕೃಷಿಯನ್ನು ತೊರೆಯಲು ಸಿದ್ಧರಿದ್ದಾರೆ !



ಕೃಷಿ ಕೂಲಿಕಾರರು ರೈತರಿಗಿಂತ ಹೆಚ್ಚು

ಕರ್ನಾಟಕದಲ್ಲಿ, ಕಳೆದ ಎರಡು ದಶಕಗಳಿಂದ ಪ್ರತಿವರ್ಷ ಸರಿಸುಮಾರು 60 ಸಾವಿರ ಹೆಕ್ಟೇರ್ ಕೃಷಿ, ಭೂಮಿ ಕೃಷಿಯೇತರ ಉದ್ದೇಶಗಳಿಗೆ ಬಳಕೆಯಾಗುತ್ತಿದೆ. ಅಖಿಲ ಭಾರತ ಮಟ್ಟದಲ್ಲಿ ಕಂಡು ಬಂದಂತೆ ಕರ್ನಾಟಕದಲ್ಲಿಯೂ ಈ ಅವಧಿಯಲ್ಲಿ ಸ್ವಾತಂತ್ರ್ಯಾ ನಂತರ ಮೊದಲ ಬಾರಿಗೆ ಭೂರಹಿತ ಕೃಷಿ ಕೂಲಿಕಾರರು ಸಂಖ್ಯೆ ರೈತರ ಸಂಖ್ಯೆಗಿಂತ ಹೆಚ್ಚಾಗಿದೆ.

2001 ಮತ್ತು 2011 ರ ಜನಗಣತಿ ಅಂಕಿ ಅಂಶಗಳು

	ರೈತರು	ಕೃಷಿಕೂಲಿಕಾರರು
2001	68.84 ಲಕ್ಷ	62.09 ಲಕ್ಷ
2011	65.79 ಲಕ್ಷ	71.55 ಲಕ್ಷ

ಹೀಗೆ ಸುಧಾರಣೆಗಳು ಎಂದು ಕರೆಯಲಾದ ವಿಶ್ವ ಹಣಕಾಸು ಬಂಡವಾಳ ನಿಯಂತ್ರಿತ ಜಾಗತೀಕರಣ ದೇಶದ ಕೃಷಿಗಾಗಲಿ, ಕೃಷಿಕರಿಗಾಗಲಿ ಒಳ್ಳೆಯ ದಿನಗಳನ್ನು ತರಲಿಲ್ಲ. ಕೃಷಿಯಲ್ಲಿ ಸರ್ಕಾರದ ಹೂಡಿಕೆ ಕಡಿತ, ಸಬ್ಸಿಡಿಗಳ ಕಡಿತ, ಸಾಂಸ್ಥಿಕ ಸಾಲದ ಕಡಿತ, ಆಮದುಗಳ ಮೇಲಿನ ಪ್ರತಿಭಂಧದ ಕಡಿತ ಇತ್ಯಾದಿ ಕ್ರಮಗಳಿಂದಾಗಿ ಕೃಷಿ ಎಂಬುದು ಒಂದು ಬಿಕ್ಕಟ್ಟುಗ್ರಸ್ತ ಉದ್ಯೋಗವಾಗಿ ಬಿಟ್ಟಿದೆ. ಸಣ್ಣ ಮತ್ತು ಅಂಚಿನ ರೈತರು ಈ ಬಿಕ್ಕಟ್ಟಿನ ಬಲಿಪಶುಗಳಾಗಿ ತಮ್ಮ ಭೂಮಿಯನ್ನು ಕಳೆದುಕೊಂಡು ಅಥವಾ ಮಾರಿಕೊಂಡು ನಿರ್ಗತಿಕರಾಗುತ್ತಿದ್ದಾ–ರೆ. ಹೊಟ್ಟೆಪಾಡಿಗಾಗಿ ಅನಿವಾರ್ಯವಾಗಿ ಕೃಷಿ ಕೂಲಿಕಾರರ ಸಮೂಹವನ್ನು ಸೇರಿಕೊಳ್ಳುತ್ತಾರೆ.

ಕರ್ನಾಟಕದಲ್ಲಿ 2001 ಮತ್ತು 2011ರ ಎರಡು ಜನಗಣತಿಗಳ ನಡುವಿನ 10 ವರ್ಷಗಳಲ್ಲಿ ಕೃಷಿ ಕೂಲಿಕಾರರ ಸಂಖ್ಯೆ ಶೇ.15ರಷ್ಟು ಹೆಚ್ಚಾಗಿದೆ.

ಕೃಷಿ ಕೂಲಿಕಾರರ ಸಂಖ್ಯೆ ಬೆಳೆಯುತ್ತಾ ಹೋದಂತೆ ಅವರಿಗೆ ಕೃಷಿ ವಲಯದಲ್ಲಿ ದೊ–ರೆಯುತ್ತಿದ್ದ ಕೆಲಸವೂ ಸಹ ಕಡಿಮೆಯಾಗುತ್ತಾ ಹೋಗುತ್ತದೆ. ರೈತರು ಗಣನೀಯ ಸಂಖ್ಯೆಯಲ್ಲಿ ಕೃಷಿ ವಲಯವನ್ನು ತೊರೆಯುತ್ತಿರುವುದರಿಂದಲೂ ಕೃಷಿ ಕೂಲಿಕಾರರಿಗೆ ಕೃಷಿ ವಲಯದಲ್ಲಿ ಸಿಗುವ

ಪುಟ 10 ಕ್ಕೆ

ಜಿಲ್ಲಾವಾರು ಕೃಷಿ ಕೂಲಿಕಾರರ ಸಂಖ್ಯೆ

ಕ್ರಸಂ	ಜಿಲ್ಲೆಗಳು	ಮಹಿಳೆಯರು		ಪುರುಷರು		ಒಟ್ಟು	
		2001	2011	2001	2011	2001	2011
01	ಬೆಳಗಾವಿ	3,42,219	3,63,536	2,43,107	2,85,921	5,85,326	6,49,517
02	ಬಾಗಲಕೋಟೆ	1,67,496	1,74,910	1,04,653	1,28,333	2,73,149	3,03,243
03	ವಿಜಯಪುರ	1,65,647	1,98,016	1,22,131	1,53,584	2,87,778	3,51,600
04	ಬೀದರ್	1,14,089	1,39,573	95,212	1,40,518	2,09,301	2,80,091
05	ರಾಯಚೂರು	2,03,001	2,26,674	1,24,017	1,56,852	3,27,018	3,83,526
06	ಕೊಪ್ಪಳ	1,47,350	1,62,855	86,286	1,10,161	2,33,636	2,73,016
07	ಗದಗ	1,11,241	1,12,396	67,836	87,914	1,79,077	2,00,310
08	ಧಾರವಾಡ	1,10,589	1,12,044	74,920	95,598	1,85,509	2,07,642
10	ಹಾವೇರಿ	1,57,784	1,51,128	1,32,925	1,60,135	2,90,709	3,11,263
11	ಬಳ್ಳಾರಿ	2,17,562	2,30,100	1,42,867	1,75,992	3,60,429	4,06,092
12	ಚಿತ್ರದುರ್ಗ	1,46,661	1,69,306	94,281	1,25,031	2,40,942	2,94,337
13	ದಾವಣಗೆರೆ	1,49,202	1,48,330	1,21,807	1,47,543	2,71,009	2,95,873
14	ಶಿವಮೊಗ್ಗ	1,18,760	1,19,746	1,05,148	1,26,718	2,28,908	2,46,464
15	ಉಡುಪಿ	50,273	32,358	37,132	31,032	87,405	63,390
16	ಚಿಕ್ಕಮಗಳೂರು	58,793	67,367	49,660	59,233	1,08,454	1,26,600
17	ತುಮಕೂರು	1,97,361	2,10,213	1,15,856	1,42,073	3,13,217	3,52,286
18	ಬೆಂಗಳೂರು	30,568	35,365	32,630	62,549	63,198	97,914
19	ಮಂಡ್ಯ	1,63,596	1,14,937	91,754	101,222	2,55,350	2,16,159
20	ಹಾಸನ	83,773	1,02,917	44,183	62,993	1,27,955	1,65,910
21	ದಕ್ಷಿಣ ಕನ್ನಡ	14,030	7,890	27,963	21,384	41,993	29,274
22	ಕೊಡಗು	5,281	7,517	5,819	7,636	11,100	15,910
23	ಮೈಸೂರು	1,23,739	1,44,624	1,25,853	1,66,378	2,49,592	3,11,002
24	ಚಾಮರಾಜನಗರ	58,793	91,568	1,04,715	1,22,735	1,63,508	2,14,303
25	ಕಲಬುರಗಿ	3,48,981	2,31,251	1,90,381	1,84,016	5,39,362	4,15,267
26	ಯಾದಗಿರಿ	–	1,47,607	–	87,048	–	2,34,655
27	ಕೋಲಾರ	1,95,876	1,04,908	1,39,777	96,325	3,35,653	2,01,233
28	ಚಿಕ್ಕಬಳ್ಳಾಪುರ	–	1,11,351	–	95,588	–	2,06,939
29	ಬೆಂಗಳೂರು ಗ್ರಾ	1,04,391	44,090	78,042	40,018	1,82,433	84,108
30	ರಾಮನಗರ	–	55,073	–	47,387	–	1,02,460
		36,13,282	38,72,684	25,95,871	32,83,279	62,09,153	71,55,963

ಮಹಿಳೆಯರನ್ನು ಒಂದುಗೂಡಿಸಿ............ ಪುಟ 8 ರಿಂದ

ಚರ್ಚೆಯಲ್ಲಿ ಮೂಡಿ ಬಂದ ಐದು ಮುಖ್ಯ ಅಂಶಗಳು

ಎಐಡಿಡಬ್ಲ್ಯುಎ ಅಧ್ಯಕ್ಷರು ಮತ್ತು ಪ್ರಧಾನ ಕಾರ್ಯದರ್ಶಿ ಮಂಡಿಸಿದ ವರದಿಗಳ ಮೇಲೆ ನಡೆದ ಶ್ರೀಮಂತ ಮತ್ತು ಜೀವಂತ ಚರ್ಚೆಯಲ್ಲಿ 23 ರಾಜ್ಯಗಳ 50ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದರು. ಪ್ರತಿನಿಧಿಗಳ ಚರ್ಚೆಗಳಲ್ಲಿ ಮೂಡಿಬಂದ ಐದು ಮುಖ್ಯ ಅಂಶಗಳು ಹೀಗಿದ್ದವು.

ಮೊದಲನೆಯದ್ದು, ಮಹಿಳೆಯರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರ–ಇದು ಭಾರತದಲ್ಲಿ ಮಾತ್ರವಲ್ಲ ಜಗತ್ತಿನಲ್ಲೆಲ್ಲೂ, ಅದರಲ್ಲೂ ಮುಖ್ಯವಾಗಿ ನಮ್ಮ ನೆರೆ ದೇಶಗಳಲ್ಲೂ ಹೆಚ್ಚುತ್ತಿದೆ ಎಂದು ಗಮನಿಸಲಾಯಿತು. ಈ ನೆರೆ ದೇಶಗಳೊಂದಿಗೆ ಮಹಿಳೆಯರ ಪ್ರಶ್ನೆಗಳನ್ನು ಜಂಟಿಯಾಗಿ ಎತ್ತಿಕೊಳ್ಳುವ ಒಂದು ಐಕ್ಯ ವೇದಿಕೆಯನ್ನು ಕಟ್ಟಲು ಮುತುವರ್ಜಿ ವಹಿಸಬೇಕು ಎಂಬ ಸೂಚನೆ ಕೂಡ ಬಂದಿತು.

ಎರಡನೆಯದ್ದು, ಕೋಮುವಾದಿ ಹಿಂಸಾಚಾರದ ವಿರುದ್ಧ ದಿನನಿತ್ಯ ಮಾಡಬೇಕಾದ ಹೋರಾಟಗಳು. ಪ್ರತಿನಿಧಿಗಳು ತಮ್ಮ ಅನುಭವಗಳನ್ನು ಹಂಚಿಕೊಂಡರು. ಕಂದಾಚಾರಗಳು, ನವ–ಉದಾರವಾದ ಮತ್ತು ಬಲಪಂಥೀಯ ರಾಷ್ಟ್ರವಾದದ ನಡುವೆ ಮೈತ್ರಿ ಏರ್ಪಟ್ಟಿದ್ದು ಅದರ ವಿರುದ್ಧ ಒಂದು ಸಮಗ್ರ ಸ್ವರೂಪದ ಪ್ರಚಾರ ನಡೆಯಬೇಕಾಗಿದೆ ಎಂದು ಪ್ರತಿನಿಧಿಗಳು ಸೂಚಿಸಿದರು.

ಮೂರನೆಯದ್ದು, ನವ–ಉದಾರವಾದದ ಪರಿಣಾಮದಿಂದಾಗಿ ಸಾಮಾನ್ಯ ಮಹಿಳೆಯರು ಪ್ರತಿದಿನ ಎದುರಿಸಬೇಕಾಗಿರುವ ಸವಾಲುಗಳು. ಈ ಚರ್ಚೆಯಲ್ಲಿ ದಲಿತ, ಆದಿವಾಸಿ, ಅಲ್ಪಸಂಖ್ಯಾತ, ಮತ್ತು ಇತರ ದುಡಿಯುವ ವರ್ಗಗಳ ಮಹಿಳೆಯರ, ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ಹಾಗೂ ನಗರದ ಬಡ ವಿಭಾಗಗಳ ಮಹಿಳೆಯರ ಸಮಸ್ಯೆಗಳು ಚರ್ಚೆಯಲ್ಲಿ ಬಂದವು.

ನಾಲ್ಕನೆಯದಾಗಿ, ಭೂಮಿ ಹಕ್ಕುಗಳು ಮತ್ತು ನೈಸರ್ಗಿಕ ಸಂಪನ್ಮೂಲಗಳ ಮೇಲಿನ ಹತೋಟಿಯ ಪ್ರಶ್ನೆ, ಕಾರ್ಪೊರೇಟ್‌ಗಳು ನಡೆಸಿರುವ ಭೂಮಿ ಸ್ವಾಧೀನಗಳ ವಿರುದ್ಧ ಹೋರಾಟ, ಮಹಿಳೆಯರ ಭೂಮಿ ಹಕ್ಕುಗಳ ಬಗ್ಗೆ ಚರ್ಚೆ ನಡೆಯಿತು.

ಐದನೆಯದಾಗಿ, ಪೋಲಿಸ್ ದಮನದ ಪ್ರಶ್ನೆ ಸುಮಾರಾಗಿ ಎಲ್ಲ ರಾಜ್ಯಗಳ ಪ್ರತಿನಿಧಿಗಳ ಗಮನ ಸೆಳೆಯಿತು. ಪಶ್ಚಿಮ ಬಂಗಾಲದಂತಹ ಕಡೆಗಳಲ್ಲಿ ಆಳುವ ಪಕ್ಷಗಳು ಮತ್ತು ಪೋಲೀಸ್ ಶಾಮೀಲಿನಿಂದ ಮತ್ತು ಇನ್ನು ಕೆಲವೆಡೆಗಳಲ್ಲಿ ಕೇಂದ್ರದಲ್ಲಿನ ಅಧಿಕಾರದಿಂದ ಚಿಗುರಿಕೊಂಡ ಆರೆಸ್ಸೆಸ್ ಕಾರ್ಯಕರ್ತರ ದಾಳಿಗಳ ಪ್ರಸ್ತಾಪವಾಯಿತು. ಕಾರ್ಯಕರ್ತರು ಇದರಿಂದಾಗಿ ತಮ್ಮ ಕೆಲಸ ಮಾಡುವಲ್ಲಿ ಎದುರಿಸಬೇಕಾದ ಕಷ್ಟಗಳನ್ನು ಚರ್ಚಿಸಿದರು.

ಸಮ್ಮೇಳನದಲ್ಲಿ ಮಂಡಿಸಿದ್ದ ನಾಲ್ಕೂ ವರದಿಗಳನ್ನು ಈ ವ್ಯಾಪಕ ಚರ್ಚೆಗಳ ನಂತರ ಅಂಗೀಕರಿಸಲಾಯಿತು.

ಏಳು ಅಯೋಗಗಳಲ್ಲಿ ಚರ್ಚೆ

ಸಮ್ಮೇಳನದ ನಾಲ್ಕನೇ ದಿನ ಈಗ ಬಹಳಷ್ಟು ಪ್ರಸ್ತುತವಾಗಿರುವ ಏಳು ವಿಷಯಗಳ ಮೇಲೆ ಪ್ರಬಂಧಗಳನ್ನು ಏಳು ಆಯೋಗಗಳಲ್ಲಿ ಚರ್ಚಿಸಲಾಯಿತು.

1. ಮಹಿಳೆಯರು ಮತ್ತು ಸ್ಥಳೀಯ ಸ್ವಯಮಾಡಳಿತವನ್ನು ಬುಡಮೇಲು ಮಾಡುವ ಪ್ರಯತ್ನ – ಮರಿಯಮ್ ಧವಳೆ ಮಂಜೀತ್ ರಥೀ ಮತ್ತು ಜಗ್ಮತಿ ಸಂಗ್ವಾನ್ ಪ್ರಬಂಧ ಪ್ರಸ್ತುತ ಪಡಿಸಿದರು,
2. ರಾಷ್ಟ್ರೀಯವಾದ–ಸುಭಾಷಿಣಿ ಅಲಿ ಪ್ರಸ್ತುತ ಪಡಿಸಿದರು.
3. ಅಸಂಘಟಿತ ವಲಯದಲ್ಲಿ ಮಹಿಳಾ ಕಾರ್ಮಿಕರು–ಅರ್ಚನಾ ಪ್ರಸಾದ್ ಮತ್ತು ಮಧು ಗರ್ಗ್ ಮಂಡಿಸಿದರು.
4. ಮಹಿಳೆಯರ ಸಾಗಾಣಿಕೆ ಮತ್ತು ಸೂಳೆಗಾರಿಕೆ–ಇಶಿತಾ ಮುಖರ್ಜಿ ಮತ್ತು ಮಾಲಿನಿ ಭಟ್ಟಾಚಾರ್ಯ ಮಂಡಿಸಿದರು.
5. ಮದ್ಯಪಾನ ವ್ಯಸನ– ಟಿ.ಎನ್ ಸೀಮಾ ಪ್ರಸ್ತುತ ಪಡಿಸಿದರು.
6. ಪರಿಸರ ಪ್ರಶ್ನೆಗಳು ಮತ್ತು ಮಹಿಳೆ–ಸುಧಾ ಸುಂದರರಾಮನ್ ಮತ್ತು ನಂದಿನಿ ಮುಖರ್ಜಿ ಮಂಡಿಸಿದರು.
7. ಮಹಿಳೆಯರ ಆಸ್ತಿ ಮತ್ತು ಭೂಮಿ ಹಕ್ಕುಗಳು–ಕೀರ್ತಿ ಸಿಂಗ್ ಮಂಡಿಸಿದರು.

ಮರುದಿನ, ಸಮ್ಮೇಳನದ ಕೊನೆಯ ಅಧಿವೇಶನದಲ್ಲಿ ಈ ಆಯೋಗ ಚರ್ಚೆಗಳ ವರದಿಗಳನ್ನು ಪ್ರಸ್ತುತ ಪಡಿಸಲಾಯಿತು.

11ನೇ ಎಐಡಿಡಬ್ಲ್ಯುಎ ಸಮ್ಮೇಳನದ ಠರಾವುಗಳು

11 ನೇ ಎಐಡಿಡಬ್ಲ್ಯುಎ ಸಮ್ಮೇಳನ ಅಂಗೀಕರಿಸಿದ ಠರಾವುಗಳು ಹೀಗಿವೆ:

ಅನಾಣ್ಯೀಕರಣ

ಮೋದಿ ಸರಕಾರ ಈ ಕ್ರಮದಿಂದಾಗಿ ಸಂಕಷ್ಟಗಳಿಗೀಡಾಗಿರುವ ಸಾಮಾನ್ಯ ಜನರ ಪಾಡಿನ ಬಗ್ಗೆ ಕುರುಡಾಗಿರುವುದನ್ನು ಸಮ್ಮೇಳನ ಖಂಡಿಸಿತು. ಈ ಬಗ್ಗೆ ಮಾತನಾಡುವವರನ್ನು ರಾಷ್ಟ್ರ–ವಿರೋಧಿಗಳೆಂದು ಹಣೆಪಟ್ಟಿ ಹಚ್ಚುವುದನ್ನೂ ಅದು ಖಂಡಿಸಿತು. ಇದರ ದುಷ್ಪರಿಣಾಮದಿಂದಾಗಿ ಪ್ರಾಣ ಕಳಕೊಂಡವರ ಕುಟುಂಬಗಳಿಗೆ ಪರಿಹಾರ ನೀಡಬೇಕು, ನಗದು ವ್ಯವಹಾರಗಳನ್ನು ನಡೆಸುವವರನ್ನು ಡಿಜಿಟಲ್ ವ್ಯವಹಾರಗಳನ್ನು ನಡೆಸುವವರಿಗಿಂತ ಕೀಳಾಗಿ ಕಾಣಬಾರದು, ಬ್ಯಾಂಕ್ ಖಾತೆಗಳನ್ನು ತೆರೆಯಲು ಇರುವ ಶರತ್ತುಗಳನ್ನು ಹಿಂತೆಗೆದುಕೊಳ್ಳಬೇಕು ಎಂದು ಆಗ್ರಹಿಸಿದ ಸಮ್ಮೇಳನ ಈ ಕ್ರಮದ ಹಿಂದಿರುವ ಬಿಜೆಪಿಯ ನಿಜ ಉದ್ದೇಶಗಳನ್ನು ಬಯಲಿಗೆಳೆಯಲು ಹೋರಾಟಗಳನ್ನು ನಡೆಸಬೇಕು ಎಂದು ಕರೆ ನೀಡಿತು.

ಲಿಂಗನ್ಯಾಯದ ಕಾನೂನುಗಳು ಮತ್ತು ತ್ರಿವಳಿ ತಲಾಖ್

ಎಐಡಿಡಬ್ಲ್ಯುಎ ಎಲ್ಲ ಜಾತಿಗಳ ಮತ್ತು ಸಮುದಾಯಗಳ ಮಹಿಳೆಯರ ಸಮಾನ ಹಕ್ಕುಗಳಿಗಾಗಿ, ಹೋರಾಟವನ್ನು ಬೆಂಬಲಿಸುತ್ತದೆ, ಜಾತ್ಯಾತೀತ ಕಾನೂನುಗಳನ್ನು ಬಲಪಡಿಸಲು ಬದ್ಧವಾಗಿದೆ ಮತ್ತು ಧರ್ಮದ, ಅಥವ ಸಂಪ್ರದಾಯದ ಹೆಸರಲ್ಲಿ ಮಹಿಳೆಯರ ವಿರುದ್ಧ ಪಕ್ಷಪಾತವನ್ನು ಬಲವಾಗಿ ವಿರೋಧಿಸುತ್ತದೆ ಎಂದು ಪುನರುಚ್ಚರಿಸಿದ ಸಮ್ಮೇಳನ ಎಲ್ಲ ಮಹಿಳೆಯರ ಸಮಾನ ಕಾನೂನುಗಳು ಮತ್ತು ಸಮಾನ ಹಕ್ಕುಗಳ ಹೋರಾಟಗಳನ್ನು ಬಲಪಡಿಸಲು ಮತ್ತು ತಕ್ಷಣ ವಿಚ್ಛೇದನದ ದಮನಕಾರಿ ತ್ರಿವಳಿ ತಲಾಖ್‌ನ ಆಚರಣೆಯ ವಿರುದ್ಧ ಹೋರಾಟವನ್ನು ಬಲಗೊಳಿಸಲು ತನ್ನ ರಾಜ್ಯ ಘಟಕಗಳಿಗೆ ಕರೆ ನೀಡಿದೆ.

ಮರ್ಯಾದಾ ಹತ್ಯೆಗಳ ವಿರುದ್ಧ ಸಮಗ್ರ ಕಾನೂನು

ಈ ದಿಕ್ಕಿನಲ್ಲಿ ಸಂಘಟನೆಯ ಪ್ರಯತ್ನಗಳನ್ನು ನೆನಪಿಸಿದ ಠರಾವು ಮೇಲ್ಜಾತಿ ಹಿಂದುತ್ವ ಸಂಘಟನೆಗಳು ಮತ್ತು ಜಾತಿ ಪಂಚಾಯತುಗಳ ನಡುವಿನ ನಂಟನ್ನು ಬಯಲು ಮಾಡುತ್ತ ಇಂತಹ ಕುಕೃತ್ಯಗಳಿಗೆ ಬಲಿಯಾದವರ ಹೋರಾಟಗಳನ್ನು ಬೆಂಬಲಿಸುವ ಮತ್ತು ಈ ಬಗ್ಗೆ ಒಂದು ಸಮಗ್ರ ಕಾನೂನಿಗಾಗಿ ಹೋರಾಟ ನಡೆಸುವ ನಿರ್ಧಾರವನ್ನು ಪುನರುಚ್ಚರಿಸಿತು.

ಅಲ್ಲದೆ ಸಾರ್ವತ್ರಿಕ ಹೆರಿಗೆ ಸೌಲಭ್ಯಗಳ ಅಗತ್ಯದ ಬಗ್ಗೆ, ಛತ್ತೀಸ್‌ಗಢದಲ್ಲಿ ಆದಿವಾಸಿ ಮಹಿಳೆಯರು ಮತ್ತು ಕಾರ್ಯಕರ್ತರ ವಿರುದ್ಧ ದಮನದ ಬಗ್ಗೆ ನ್ಯಾಯಾಂಗ ತನಿಖೆಯನ್ನು ಆಗ್ರಹಿಸಿ, ನಗರ ಪ್ರದೇಶಗಳಲ್ಲಿ ಮಹಿಳೆಯರಿಗೆ ಸಾರ್ವಜನಿಕ ಸೌಕರ್ಯಗಳನ್ನು ಆಗ್ರಹಿಸಿದ ಹಾಗೂ ಸ್ಮಾರ್ಟ್‌ಸಿಟಿ ಮಿಶನ್‌ನ್ನು ತಿರಸ್ಕರಿಸಿದ ನಿರ್ಣಯಗಳೂ ಸೇರಿದಂತೆ ಒಟ್ಟು ಹತ್ತು ನಿರ್ಣಯಗಳನ್ನು ಸಮ್ಮೇಳನ ಅಂಗೀಕರಿಸಿತು. ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವವನ್ನು ಆಚರಿಸಲು ಕರೆ ನೀಡುವ ನಿರ್ಣಯವನ್ನೂ ಅಂಗೀಕರಿಸಲಾಯಿತು.

ಗ್ರಾಮೀಣ ಕೆಲಸಗಾರರು........... ಪುಟ 8 ರಿಂದ

ಕೆಲಸ ಕಡಿಮೆಯಾಗುತ್ತಿದೆ. ಶ್ರೀಮಂತ ರೈತರು ಉಳುವುದು, ಬಿತ್ತುವುದು, ನಾಟಿ ಮಾಡುವುದು, ಕಟಾವು ಮಾಡುವುದು, ರಾಶಿ ಮಾಡುವುದು ಮುಂತಾದ ಕೃಷಿ ಕೆಲಸಗಳಿಗೆ ಯಂತ್ರಗಳನ್ನು ಬಳಸುತ್ತಿರುವುದರಿಂದಲೂ ಕೃಷಿ ಕೂಲಿಕಾರರಿಗೆ ಕೆಲಸ ಸಿಗದಂತಾಗುತ್ತದೆ. ರಾಜ್ಯದಲ್ಲಿ ನಿರಂತರ ಬರಗಾಲ ತಲೆದೋರುತ್ತಿರುವುದರಿಂದಲೂ ಕೃಷಿ ಕೂಲಿಕಾರರಿಗೆ ಋತು ಆಧಾರಿತ ಕೃಷಿ ಕೆಲಸಗಳು ಸಹ ಸಿಗದಂತಾಗುತ್ತಿದೆ. ಮಳೆಯ ಅಭಾವದಿಂದ ಅಣೆಕಟ್ಟುಗಳಲ್ಲಿ ಪೂರ್ಣ ಪ್ರಮಾಣದ ನೀರು ಸಂಗ್ರಹವಾಗದೆ, ನೀರಾವರಿ ಕುಂಠಿತಗೊಂಡು ನೀರಾವರಿ ಪ್ರದೇಶದಲ್ಲಿಯೂ ಕೃಷಿ ಕೂಲಿಕಾರರಿಗೆ ಕೆಲಸ ಸಿಗುತ್ತಿಲ್ಲ. ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಸಮರ್ಪಕವಾಗಿ ಜಾರಿ ಮಾಡುವಲ್ಲಿ ಸರ್ಕಾರಗಳು ವಿಫಲವಾಗಿರುವುದರಿಂದ ಅಲ್ಲಿಯೂ ಅವರಿಗೆ ಕೆಲಸ ಸಿಗುವುದಿಲ್ಲ. ಹೀಗೆ ಕೃಷಿ ವಲಯದಿಂದಲೇ ಹೊರದಬ್ಬಲಾದ ಕೃಷಿ ಕೂಲಿಕಾರರು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಹೆಚ್ಚಾಗುತ್ತಿದೆ.

ಗ್ರಾಮೀಣ ಕೆಲಸಗಾರರು

ಕೃಷಿಯಲ್ಲಿ ನೆಲೆಯನ್ನು ಕಳೆದುಕೊಂಡ ಕೃಷಿ ಕೂಲಿಕಾರರ ಸ್ವರೂಪವೇ ಇಂದು ಬದಲಾಗುತ್ತಿದೆ. ಜೀವನ ನಿರ್ವಹಣೆಗಾಗಿ ಅವರು ಇಂದು ಇಟ್ಟಿಗೆ ತಯಾರಿಸುವುದು, ಕಟ್ಟಡ ನಿರ್ಮಾಣ, ರಸ್ತೆ ನಿರ್ಮಾಣ, ಹಮಾಲಿ ಕೆಲಸ, ಮೀನುಗಾರಿಕೆ, ಸರಕು ಸಾಗಾಟ, ಸಣ್ಣ ಪ್ರಮಾಣದ ವ್ಯಾಪಾರ ಮುಂತಾದ ಕೃಷಿಯೇತರ ಕೆಲಸಗಳಿಗೆ ಸೇರಿಕೊಳ್ಳುವುದು ಅನಿವಾರ್ಯವಾಗುತ್ತಿದೆ. ಈಗ ಅವರು ಕೃಷಿ ವಲಯವನ್ನೇ ನಂಬಿಕೊಂಡಿರಲು ಸಾಧ್ಯವಿಲ್ಲ. ಯಾವ ಕೆಲಸ ಸಿಗುತ್ತದೋ ಆ ಕೆಲಸಕ್ಕೆ ಹೋಗಬೇಕಾಗುತ್ತದೆ. ಕೆಲಸ ನಿಶ್ಚಿತವಲ್ಲ. ಆದಾಯವೂ ನಿಶ್ಚಿತವಲ್ಲ. ಇಂದು ಸಿಕ್ಕ ಕೆಲಸ ನಾಳೆ ಸಿಗಲಿಕ್ಕಿಲ್ಲ. ಇಂದು ಸಿಕ್ಕ ವೇತನ ನಾಳೆ ಸಿಗಲಿಕ್ಕಿಲ್ಲ. ಜೀವನವೇ ಅನಿಶ್ಚಿತ, ಅಭದ್ರ. ಅನಿಶ್ಚಿತ ಕೆಲಸ, ಅನಿಶ್ಚಿತ ಆದಾಯದಿಂದಾಗಿ ಅವರಿಗೆ ತಮ್ಮ ಕುಟುಂಬದ ನಿರ್ವಹಣೆ, ಮಕ್ಕಳ ಶಿಕ್ಷಣ, ವೃದ್ಧರ ಆರೈಕೆ ಯಾವುದನ್ನೂ ಯೋಜಿಸಲಾಗದೆ ಪರದಾಡುವ ಸ್ಥಿತಿ. ಇವರು ಕೃಷಿಕೂಲಿಕಾರರೆಂಬ ಅಸ್ಮಿತೆಯನ್ನೇ ಕಳೆದುಕೊಂಡವರಾಗುತ್ತಾರೆ. ಇವರನ್ನು ಗ್ರಾಮೀಣ ದೈಹಿಕ ಕೆಲಸಗಾರರೆಂದು ಗುರುತಿಸಬಹುದಾಗಿದೆ.

ಗ್ರಾಮೀಣ ಕೆಲಸಗಾರರು, ಗ್ರಾಮೀಣ ಶ್ರಮಜೀವಿ ವರ್ಗದ ಭಾಗವಾಗಿರುತ್ತಾರೆ. ಅವರ ಬೇಡಿಕೆಗಳು ಭಿನ್ನ ಭಿನ್ನವಾಗಿರಬಹುದು. ಅವರ ಪರಿಸ್ಥಿತಿ ರಾಜ್ಯದಿಂದ ರಾಜ್ಯಕ್ಕೆ ಬೇರೆಯಾಗಿರಬಹುದು. ಅವರನ್ನು ಪ್ರತ್ಯೇಕವಾಗಿ ಸಂಘಟಿಸಬೇಕಾಗಬಹುದು. ಕೃಷಿ ಕೂಲಿಕಾರರ ಸಂಘವು ಅವರ ಬೇಡಿಕೆಗಳನ್ನು ಎತ್ತಿಕೊಳ್ಳಬಹುದು. ಅವರಿಗೆ ಸಂಬಂಧಪಟ್ಟ ಕಾರ್ಮಿಕ ಸಂಘಗಳಲ್ಲಿಯೂ ಅವರನ್ನು ಸಂಘಟಿಸಬಹುದು. ಕೇರಳ, ಆಂಧ್ರ ಪ್ರದೇಶದ ಅನುಭವದ ಆಧಾರದಲ್ಲಿ ಪರಂಪರಾಗತಕಸುಬುದಾರರನ್ನುಸಂಘಟಿಸಬಹುದು. ಗ್ರಾಮೀಣ ಕೆಲಸಗಾರರನ್ನು ಸಂಘಟಿಸುವ ಬಗ್ಗೆ ಸಂಬಂಧಪಟ್ಟ ವೇದಿಕೆಗಳಲ್ಲಿ ಚರ್ಚೆಯಾಗಬೇಕು. ಕೂಲಿಕಾರರ ಸಂಘ, ಗ್ರಾಮೀಣ ಕೆಲಸಗಾರರ ಸಂಘ ಹಾಗೂ ರೈತ ಸಂಘಗಳ ಸಮನ್ವಯತೆಯಿಂದ ಕೆಲಸ ಮಾಡುವ ಮೂಲಕ ಗ್ರಾಮೀಣ ಸುಲಿಗೆಕೋರರ ದುಷ್ಟಕೂಟದ ವಿರುದ್ಧ ಪ್ರಬಲ ಹೋರಾಟ ರೂಪಿಸುವುದು ಗುರಿಯಾಗಿರಬೇಕು. ■

ನಗದು ರಹಿತ ಆರ್ಥಿಕತೆ..... ಪುಟ 6 ರಿಂದ

ಆದರೆ ಅದರ ಅನುಷ್ಠಾನದ ಬಗೆಗಿನ ಸರ್ಕಾರದ, ಆಡಳಿತ ಯಂತ್ರದ ಸಿದ್ಧತೆಯಲ್ಲಿನ ಲೋಪವನ್ನು ಟೀಕಿಸಲಾಗುತ್ತಿದೆ. ವಿರೋಧಿಸುವುದು ಬೇರೆ: ಟೀಕೆ ಮಾಡುವುದು ಬೇರೆ ಅನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಟೀಕೆಯನ್ನು ವಿರೋಧ ಎಂದು ತಿಳಿಯುವುದು ರಾಜಕೀಯ ಪ್ರೌಢಿಮೆಯಲ್ಲಿನ ಕೊರತೆಯನ್ನು ತೋರಿಸುತ್ತದೆ.

ಪಾಪ್ಯುಲೇಶನ್ ಡಿವಿಡೆಂಡ್ ನಿಂದ ಡಿಸಾಸ್ಟರ್ ಕಡೆಗೆ

ನಗದು ರಹಿತ ಆರ್ಥಿಕತೆಯು ಉಂಟು ಮಾಡಬಹುದಾದ ನಿರುದ್ಯೋಗದ ಬಗ್ಗೆಯೂ ನಾವು ಯೋಚಿಸಬೇಕು. ನಮ್ಮ ದೇಶದಲ್ಲಿ ಲಕ್ಷಾಂತರ ಜನರ ಬದುಕನ್ನು ಅದು ಕಿತ್ತುಕೊಳ್ಳುವ ಸಾಧ್ಯತೆಯಿದೆ. ಪಾಪ್ಯುಲೇಶನ್ ಡಿವಿಡೆಂಡ್ ಬಗ್ಗೆ ಇಂದು ನಾವು ಮಾತನಾಡುತ್ತಿದ್ದೇವೆ. ನಮ್ಮ ಜನಸಂಖ್ಯೆಯಲ್ಲಿ 15 ರಿಂದ 59 ವರ್ಷ ವಯೋಮಾನದ ದುಡಿಯುವ ವರ್ಗದ ಪ್ರಮಾಣ ಶೇ65. ಈ ವರ್ಗಕ್ಕೆ ಉದ್ಯೋಗಗಳನ್ನು ನೀಡದಿದ್ದರೆ ಪಾಪ್ಯುಲೇಶನ್ ಡಿವಿಡೆಂಡ್ ಡಿಸಾಸ್ಟರ್ ಆಗಬಹುದು. ನಗದು ರಹಿತ ಆರ್ಥಿಕತೆ ಅನ್ನುವುದು ಡಿವಿಡೆಂಡನ್ನು ಡಿಸಾಸ್ಟರ್ ಮಾಡುವ ಬಗ್ಗೆ ತಜ್ಞರು ಮಾತನಾಡುತ್ತಿದ್ದಾರೆ. ನಗದು ರಹಿತ ಆರ್ಥಿಕತೆಯು ದೀರ್ಘಾವಧಿಯಲ್ಲಿ ಉಂಟು ಮಾಡಬಹುದಾದ ಅನಾಹುತಗಳ ಬಗ್ಗೆ ಅನಾಣ್ಯೀಕರಣವನ್ನು ಹೊಗಳುವ ಜನರು ಊಹಿಸಿದಂತೆ ಕಾಣುತ್ತಿಲ್ಲ.

ಒಟ್ಟಾರೆ ಇಲ್ಲದ ಸಮಸ್ಯೆಯನ್ನು ನಾವಾಗೆ ಎದುರಾಕಿಕೊಂಡಿರುವುದು ಸ್ಪಷ್ಟ. ಅನಾಣ್ಯೀಕರಣದಿಂದ ಉಂಟಾದ ಸಮಸ್ಯೆಗಳಿಂದ ಮಹತ್ವಾಕಾಂಕ್ಷೆಯ ಜಿಎಸ್‌ಟಿ(ಗೂಡ್ಸ್ ಅಂಡ್ ಸರ್ವಿಸ್ ಟ್ಯಾಕ್ಸ್) ವ್ಯವಸ್ಥೆಯು ಜಾರಿಗೆ ಬರುವುದು ಕಷ್ಟವಾಗುತ್ತದೆ. ಇಂದು ರಾಜ್ಯಗಳು ಎರಡು ಬಗೆಯ ಕಷ್ಟಗಳನ್ನು ಎದುರಿಸಬೇಕಾಗಿದೆ. ಮೊದಲನೆಯದಾಗಿ ಅನಾಣ್ಯೀಕರಣದಿಂದ ಅವುಗಳ ಎಸ್‌ಡಿಪಿಯು(ರಾಜ್ಯ ವರಮಾನ) ಕುಸಿಯಬಹುದು. ಅದರ ನಷ್ಟವನ್ನು ಕಟ್ಟಿಕೊಡುವವರು ಯಾರು? ಜಿಎಸ್‌ಟಿ ಮತ್ತು ಅನಾಣ್ಯೀಕರಣಗಳಿಂದ ರಾಜ್ಯಗಳಲ್ಲಿ ಉಂಟಾಗಬಹುದಾದ ವರಮಾನದ ಕುಸಿತ ಮತ್ತು ಅನಾಣ್ಯೀಕರಣದಿಂದ ಉಂಟಾಗಬಹುದಾದ ತೆ–ರಿಗೆ ಸಂಗ್ರಹದಲ್ಲಿನ ಕುಸಿತ – ಎರಡನ್ನು ನಿರ್ವಹಿಸುವುದರ ಬಗ್ಗೆ ನಾವು ಚಿಂತಿಸುವ ಅಗತ್ಯವಿದೆ. ಅನಾಣ್ಯೀಕರಣದಿನದ ಸ್ವರ್ಗವೇ ಇಳ್ಳಿಗೆ ಬಂದು ಬೀಳುತ್ತದೆ ಎಂಬ ಭ್ರಮೆಯನ್ನು ಉಂಟು ಮಾಡಲಾಗಿದೆ. ವಾಸ್ತವವಾಗಿ ಅದರಿಂದ ಇಲ್ಲಿ ನರಕ ಸೃಷ್ಟಿಯಾಗಿದೆ.

ಅನಾಣ್ಯೀಕರಣ ಜಾರಿಗೆ ಬಂದು ಇಂದಿಗೆ (13.12.2016) 34 ದಿನಗಳಾಗಿವೆ. ಅದಕ್ಕೆ 50 ದಿನಗಳಾವುದು ದೂರವಿಲ್ಲ(29.12.2016). ಆದ–ರೆ ಸಮಸ್ಯೆಯ ತೀವ್ರತೆಯು ಕಡಿಮೆಯಾಗುವ ಸೂಚನೆಗಳು ಕಾಣುತ್ತಿಲ್ಲ. ನಾಟಕೀಯತೆ, ರೆಟರಿಕ್, ಉನ್ಮಾದ, ಉದ್ವೇಗ ಇವೆಲ್ಲ ಬದುಕಿನಲ್ಲಿ ಚಂದ. ಆದರೆ ರಾಜಕಾರಣದಲ್ಲಿ ಅವು ಅಪಾಯಕರವಾಗುವ ಸಾಧ್ಯತೆಯ ಬಗ್ಗೆ ನಾವು ಜಾಗೃತರಾಗಿರಬೇಕು. ■

5ನೇ ರಾಜ್ಯ ಸಮ್ಮೇಳನದ ನಂತರದ ಅವಧಿಯಲ್ಲಿ ನಡೆದ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ

ಪ್ರಮುಖ ಹೋರಾಟಗಳು ಮತ್ತು ಕಾರ್ಯಕ್ರಮಗಳು 2013

1.ಮನೆ ನಿವೇಶನಗಳಿಗಾಗಿ 48 ಗಂಟೆಗಳ ಧರಣಿ :

ಸೆಪ್ಟಂಬರ್ 30 ರಿಂದ ಅಕ್ಟೋಬರ್ 1 ರವರೆಗೆ ಅಹೋರಾತ್ರಿ ನಡೆದ ಈ ಧರಣಿ ಸತ್ಯಾಗ್ರಹದಲ್ಲಿ ರಾಜ್ಯಾದ್ಯಂತ ಸುಮಾರು 5,000 ಕೂಲಿಕಾರರು ಭಾಗವಹಿಸಿದ್ದರು. ಸುಮಾರು 10 ತಾಲೂಕು ಕೇಂದ್ರಗಳಲ್ಲಿ ಹಾಗೂ ಮಂಡ್ಯ, ಕಲಬುರಗಿ, ಯಾದಗಿರಿ ಮತ್ತು ರಾಯಚೂರು ಜಿಲ್ಲಾ ಕೇಂದ್ರಗಳಲ್ಲಿ ಈ ಸಾಮೂಹಿಕ ಧರಣಿ.

ಉಡುಪಿ ಜಿಲ್ಲೆಯ ಕುಂದಾಪುರದಲ್ಲಿ 2 ದಿನಗಳ ಅಹೋರಾತ್ರಿ ಧರಣಿಯಲ್ಲಿ ಸುಮಾರು 2,000 ಮಂದಿ ಕೃಷಿ ಕೂಲಿಕಾರರು ಭಾಗವಹಿಸಿದ್ದರು. ಅವರಲ್ಲಿ 95% ರಷ್ಟು ಮಂದಿ ಮಹಿಳೆಯರಿದ್ದು, ಮಳೆ ಬಂದರೂ ಅವರು ಚದುರಲಿಲ್ಲ.

2. ಸ್ಥಳೀಯ ಪ್ರಶ್ನೆಗಳಿಗಾಗಿ :

ಸುಮಾರು 25 ವರ್ಷಗಳಿಂದ ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಕುಲುಮೆದೊಡ್ಡಿ ಎಂಬ ಗ್ರಾಮದಲ್ಲಿ ಸರ್ಕಾರಿ ಭೂಮಿಯಲ್ಲಿ ನೆಲೆಸಿದ್ದ 13 ಕುಟುಂಬಗಳನ್ನು ಒಕ್ಕಲೆಬ್ಬಿಸಿದ ಪ್ರಕರಣವನ್ನು ಎತ್ತಿಕೊಂಡ ತಾಲೂಕ ಘಟಕವು ಸುಧೀರ್ಘ ಹೋರಾಟ.

ಕಲಬುರಗಿ ಜಿಲ್ಲಾ ಘಟಕವು ಅರಣ್ಯ ಇಲಾಖೆಯವರ ಕಿರುಕುಳವನ್ನು ಖಂಡಿಸಿದರಲ್ಲದೆ ತಮ್ಮನ್ನು ಒಕ್ಕಲೆಬ್ಬಿಸುವ ಪ್ರಯತ್ನವನ್ನು ಕೈಬಿಡಬೇಕೆಂದು ಜಿಲ್ಲಾ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ ಎದುರು ಬೃಹತ್ ಪ್ರತಿಭಟನೆ. 1000 ಕ್ಕೂ ಹೆಚ್ಚು ಮಂದಿ ಭಾಗಿ.

ರಾಯಚೂರು ತಾಲೂಕು ಘಟಕವೂ ಜಿಲ್ಲಾ ಅರಣ್ಯಾಧಿಕಾರಿಗಳ ಕಛೇರಿ ಎದುರು ಅನೇಕ ವರ್ಷಗಳಿಂದ ಅರಣ್ಯ ಭೂಮಿಯನ್ನು ಸಾಗುವಳಿ ಮಾಡುತ್ತಾ ಬಂದಿರುವ ಬಡ ಕೂಲಿಕಾರರನ್ನು ಒಕ್ಕಲೆಬ್ಬಿಸಬಾರದೆಂದು ಆಗ್ರಹಿಸಲಾಯಿತು.

ರಾಜೀವ ಗಾಂಧಿ ಗ್ರಾಮೀಣ ವಸತಿ ಯೋಜನೆಯ ಫಲಾನುಭವಿಗಳಿಗೆ ಬಾಕಿ ಇದ್ದ ಅನುದಾನದ ಕಂತುಗಳನ್ನು ಪಾವತಿಗಾಗಿ ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ್ ತಾಲೂಕಿನ ಚೌಡಳ್ಳಿ ಗ್ರಾಮ ಪಂಚಾಯತಿ ಕಾರ್ಯಾಲಯದ ಎದುರು ದಿನವಿಡೀ ಧರಣಿ. 1000ಕ್ಕೂ ಹೆಚ್ಚು ಮಂದಿ ಭಾಗಿ. ಸ್ಥಳಕ್ಕೆ ಆಗಮಿಸಿದ ಶಾಸಕರು ಒಂದು ತಿಂಗಳ ಒಳಗಾಗಿ ಪಾವತಿ ಮಾಡಿಸುವ ಭರವಸೆ ನೀಡಿದರು. ಆ ಪ್ರಕಾರ ಫಲಾನುಭವಿಗಳಿಗೆ ಅವರ ಹಣ ಸಿಗುವಂತಾಯಿತು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕ ಘಟಕವು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸಗಾರರಿಗೆ ಬರಬೇಕಾಗಿದ್ದ ಬಾಕಿ ಕೂಲಿ ಹಣ ನೀಡಬೇಕೆಂದು ಪಂಚಾಯತಿ ಎದುರು 15 ದಿನಗಳ ಅಹೋರಾತ್ರಿ ಧರಣಿ ಬಾಕಿ ಹಣ ಪಡೆಯುವಲ್ಲಿ ಯಶಸ್ವಿ ಹೋರಾಟ.

3.ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ – ಸಮಾವೇಶ :

2013 ಡಿಸೆಂಬರ್ 16 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ಸಮಾವೇಶವನ್ನು ಏರ್ಪಡಿಸಲಾಗಿತ್ತು. ಸುಮಾರು 500 ಮಂದಿ ಸಮಾವೇಶದಲ್ಲಿ ಭಾಗವಹಿಸಿದ್ದರು. ಪಂಚಾಯತ್ ಮಟ್ಟದಲ್ಲಿ ಪ್ರತಿಭಟನೆ ನಡೆಸಲು ಸಮಾವೇಶದ ಕರೆ. ಸುಮಾರು 100 ಪಂಚಾಯತಿಗಳಲ್ಲಿ ಕಡೆದ ಪ್ರತಿಭಟನೆಯಲ್ಲಿ 7000 ಕ್ಕೂ ಹೆಚ್ಚು ಕೂಲಿಕಾರರ ಭಾಗಿ.

4. ಮಹಿಳಾ ಕೃಷಿ ಕೂಲಿಕಾರರ ಸಮಾವೇಶಗಳು :

2013 ಡಿಸೆಂಬರ್ ತಿಂಗಳಲ್ಲಿ ಮಂಡ್ಯ ಜಿಲ್ಲಾ ಮಹಿಳಾ ಕೃಷಿ ಕೂಲಿಕಾರರ 2ನೇ ಸಮ್ಮೇಳನ, ಕಲಬುರಗಿ ತಾಲೂಕ ಮಟ್ಟದ ಪ್ರಥಮ ಮಹಿಳಾ ಸಮಾವೇಶ 2013 ನವೆಂಬರ್ ತಿಂಗಳಲ್ಲಿ ಜರುಗಿ–ತು.



2014

1. ಗ್ರಾಮ ಪಂಚಾಯತ್ ಮತ್ತು ತಾಲೂಕ ಪಂಚಾಯತ್ ಮಟ್ಟದ ಹೋರಾಟ :

ಮನೆ ನಿವೇಶನಗಳಿಗಾಗಿ ಸಲ್ಲಿಸಲಾದ ಅರ್ಜಿಗಳನ್ನು ಪರಿಶೀಲಿಸಲು ಹಾಗೂ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಪಟ್ಟ ಬೇಡಿಕೆಗಳಿಗಾಗಿ 2014 ಜನವರಿ 2 ರಿಂದ ಗ್ರಾಮ ಪಂಚಾಯತಿಗಳ ಕಾರ್ಯಾಲಯಗಳ ಎದುರು ಪ್ರತಿಭಟನೆ ಸುಮಾರು 6000 ಜನ ಭಾಗವಹಿಸಿದ್ದರು. ಮತ್ತೊಮ್ಮೆ ಫೆಬ್ರವರಿ 3 ರಿಂದ ಅಹೋರಾತ್ರಿ ಧರಣಿ ನಡೆಸಲಾಗಿದೆ.

2. ಸ್ಥಳೀಯ ಹೋರಾಟಗಳು :

ಶಹಾಪುರ ತಾಲೂಕಿನ ಕನ್ಯಾಕೋಳೂರು ಗ್ರಾಮದಲ್ಲಿ ದಲಿತ ಕೂಲಿಕಾರನೊಬ್ಬನ ಕೊಲೆಯಾದಾಗ, ಕೊಲೆಗಾರನನ್ನು ಬಂಧಿಸಲು ಒತ್ತಾಯಿಸಿ ವಿವಿಧ ಪ್ರಗತಿಪರ ಸಂಘಟನೆಗಳೊಂದಿಗೆ ಸೇರಿಕೊಂಡು ಕೃಷಿ ಕೂಲಿಕಾರರ ಸಂಘ ಪ್ರತಿಭಟಿಸಿದೆ.

ಕಲಬುರಗಿಯ ಲಾಡ್ ಮುಗಳಿ ಗ್ರಾಮದಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ ಕೆಲಸ ಕೊಡಲು ಒತ್ತಾಯಿಸಿದಾಗ ಗ್ರಾಮ ಪಂಚಾಯತಿಯ ಸದಸ್ಯರೊಬ್ಬರು ಅಡ್ಡಿ ಉಂಟು ಮಾಡಿದನ್ನು ಕೂಲಿಕಾರರು ಧೈರ್ಯದಿಂದ ನಿಭಾಯಿಸಿದ್ದಾರೆ.

3. ಭೂಮಿ ಮತ್ತು ಮನೆ ನಿವೇಶನಗಳಿಗಾಗಿ ಜಂಟಿ ಹೋರಾಟ :

ಹೈಕೋರ್ಟ್ ನಿರ್ದೇಶನದಂತೆ ಸರ್ಕಾರಿ ಭೂಮಿ ತೆರವುಗೊಳಿಸಲು ಮುಂದಾದ ಸರ್ಕಾರದ ಕ್ರಮದ ವಿರುದ್ಧ ಕರ್ನಾಟಕ ಪ್ರಾಂತ ರೈತ ಸಂಘದ ಜತೆಯಲ್ಲಿ ಜಂಟಿಯಾಗಿ ಬೆಂಗಳೂರಿನಲ್ಲಿ ಅಕ್ಟೋಬರ್ 13–14 ರಂದು ಮಹಾಧರಣಿ. ರ್ಯಾಲಿಯಲ್ಲಿ 20 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಹೋರಾಟದ ಪೂರ್ವದಲ್ಲಿ ರಾಯಚೂರು ತಾಲೂಕು ಉಂಡ್ರಾಲದೊಡ್ಡಿ ಗ್ರಾಮದಲ್ಲಿ ತಾಲೂಕು ಮಟ್ಟದ ಸಮಾವೇಶ. 300 ಮಂದಿ. ಗಂಗಾವತಿಯಲ್ಲಿ 200 ಜನ ಭಾಗಿ. ಮಂಡ್ಯದ ಮದ್ದೂರು ತಾಲೂಕಿನ ಆಲಭುಜನಹಳ್ಳಿ ಗ್ರಾಮದಲ್ಲಿ ಶ್ರೀಮಂತರು ಒತ್ತುವರಿ ಮಾಡಿಕೊಂಡಿದ್ದ ಒಂದು ಕೆರೆ ಮತ್ತು ಅದರ ಸುತ್ತಲಿನ 37 ಎಕರೆ ಭೂಮಿಯನ್ನು ಕೂಲಿಕಾರರು ಹೋರಾಟ ಮಾಡಿ ತೆರವುಗೊಳಿಸಿದ್ದಾರೆ.

ಅಕ್ಟೋಬರ್ 27 ರಿಂದ 29 ರ ವರೆಗೆ ಕುಂದಾಪುರ ಮತ್ತು ಉಡುಪಿ ತಹಶೀಲ್ದಾರರ ಕಛೇರಿ ಎದುರು ಅನಿರ್ದಿಷ್ಟ ಧರಣಿ, ಅರ್ಹ ನಿವೇಶನರಹಿತರ ಪಟ್ಟಿಯನ್ನು ಸಿದ್ಧಪಡಿಸಿ ಹೋರಾಟ ತೀವ್ರಗೊಳಿಸಲಾಯಿತು.

2015

1. ರೇಗಾ ಯೋಜನೆ ಸಮರ್ಪಕ ಜಾರಿಗಾಗಿ ರಾಜ್ಯ ಮಟ್ಟದ ಜಾಥಾ :

ಕೇಂದ್ರದ ನರೇಂದ್ರ ಮೋದಿ ಸರ್ಕಾರವು ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯನ್ನು ಮೊಟಕುಗೊಳಿಸಲು ಹೊರಟಿರುವುದನ್ನು ವಿರೋಧಿಸಿ ಜನ ಜಾಗೃತಿ ಉಂಟು ಮಾಡಲು ರಾಜ್ಯ ಮಟ್ಟದ ಒಂದು ವಾಹನ ಜಾಥಾ. ಜನವರಿ 25ರಂದು ಬೀದರ್ ಜಿಲ್ಲೆ ಬಸವ ಕಲ್ಯಾಣದಿಂದ ಆರಂಭಿಸಲಾಯಿತು. 18 ಜಿಲ್ಲೆಗಳಲ್ಲಿ 3500 ಕಿ.ಮೀ. ದಾರಿಯನ್ನು ಕ್ರಮಿಸಿತು. 100ಕ್ಕೂ ಹೆಚ್ಚು ಸಭೆ ಮತ್ತು 16 ದಿನಗಳ ನಂತರ ಫೆಬ್ರವರಿ 10 ರಂದು ಬೆಂಗಳೂರು ತಲುಪಿತು. ವಿವಿಧ ಸಂಘಟನೆಗಳ ಕಾರ್ಯಕರ್ತರು ಆತ್ಮೀಯ ಸ್ವಾಗತ ನೀಡಿದರು.

2. ಬಜೆಟ್ ಪೂರ್ವ ರ್‍ಯಾಲಿ :

ರಾಜ್ಯ ಮಟ್ಟದ ವಾಹನ ಜಾಥಾ ನಂತರದಲ್ಲಿ ಫೆಬ್ರವರಿ 10 ರಂದು ರಾಜಧಾನಿಯಲ್ಲಿ ಬೃಹತ್ ರ್‍ಯಾಲಿಯನ್ನು ಏರ್ಪಡಿಸಲಾಗಿತ್ತು. ಅದೊಂದು ಬಜೆಟ್ ಪೂರ್ವ ರ್‍ಯಾಲಿ ಆಗಿತ್ತು. ಮೆರವಣಿಗೆಯಲ್ಲಿ ಸುಮಾರು 3000 ಕೃಷಿ ಕೂಲಿಕಾರರು ಭಾಗವಹಿಸಿದ್ದರು. ದಿನವಿಡೀ ಧರಣಿ ನಡೆಸಿ ಸರ್ಕಾರಕ್ಕೆ ಮನವಿ. ಇಲಾಖೆಯ ಮಂತ್ರಿ ಶ್ರೀ ಎಚ್.ಕೆ. ಪಾಟೀಲ್ ಸ್ಥಳಕ್ಕೆ ಆಗಮಿಸಿ ಮನವಿ ಸ್ವೀಕರಿಸಿದರು.

3. ಭೂಸ್ವಾಧೀನ ಸುಗ್ರೀವಾಜ್ಞೆ ವಿರುದ್ಧ ಪ್ರತಿಭಟನೆ :

ರೈತ ವಿರೋಧಿಯಾದ ಭೂಸ್ವಾಧೀನ ಮಸೂದೆಯನ್ನು ಸುಗ್ರೀವಾಜ್ಞೆ ಮೂಲಕ ದೇಶದ ಮೇಲೆ ಹೇರಲು ಹೊರಟಿರುವುದನ್ನು ಪ್ರತಿಭಟಿಸಲು 12 ಜನಪರ ಸಂಘಟನೆಗಳು 2015 ಎಪ್ರಿಲ್ 25 ರಂದು ಬೃಹತ್ ಪ್ರತಿಭಟನೆ. ಸಂಘದಿಂದ ಸುಮಾರು 5,000 ಕೂಲಿಕಾರರು ಪಾಲ್ಗೊಂಡಿದ್ದರು.

4. ಕಾರ್ಯಾಗಾರ: ಗ್ರಾಮೀಣ ಕರ್ನಾಟಕದಲ್ಲಿ ಬದಲಾವಣೆಗಳು :

'ಕಾರ್ಷಿಕ ಅಧ್ಯಯನ ಪ್ರತಿಷ್ಠಾನ'ದ ಸಂಶೋಧಕರು ಕರ್ನಾಟಕದ (1) ಆಲಭುಜನಹಳ್ಳಿ (ಮಂಡ್ಯ) (2) ಸಿರೇಸಂದ್ರ (ಕೋಲಾರ) ಮತ್ತು (3) ಝಾಪೂರ್ (ಕಲಬುರಗಿ) ಎಂಬ 3 ಗ್ರಾಮಗಳ ಸಾಮಾಜಿಕ – ಆರ್ಥಿಕ ಪರಿಸ್ಥಿತಿಗಳಲ್ಲಿ ಆಗಿರುವ ಬದಲಾವಣೆಗಳನ್ನು ಕುರಿತು ನಡೆಸಿದ ಅಧ್ಯಯನದ ವಿವರಗಳನ್ನು ಕೂಲಿಕಾರರ ಸಂಘದ ಕಾರ್ಯಕರ್ತರಿಗೆ ವಿವರಿಸಲು 2015 ಜುಲೈ 7 ರಂದು ಬೆಂಗಳೂರಿನಲ್ಲಿ ಒಂದು ದಿನದ ಕಾರ್ಯಾಗಾರ.

5. ಸಮರ್ಪಕ ರೇಷನ್ ವಿತರಣೆಗಾಗಿ :

ಕಾಂಗ್ರೆಸ್ ಸರ್ಕಾರ ಜಾರಿಗೆ ತಂದ 1 ರೂ. ದರದಲ್ಲಿ ತಿಂಗಳಿಗೆ ಒಂದು ಕುಟುಂಬಕ್ಕೆ 30 ಕೆ.ಜಿ. ಅಕ್ಕಿ ವಿತರಿಸುವ ಕಾರ್ಯಕ್ರಮವನ್ನು ಬದಲಾಯಿಸಿ ಯೂನಿಟ್ ಪದ್ಧತಿ ಜಾರಿ ಮಾಡಿದ್ದನ್ನು ವಿರೋಧಿಸಿ 2015 ಜುಲೈ 28 ರಂದು ತಾಲೂಕು ಕೇಂದ್ರಗಳಲ್ಲಿ ಪ್ರತಿಭಟನೆ. ರಾಜ್ಯದ 19 ಕೇಂದ್ರಗಳಲ್ಲಿ ಸುಮಾರು 3000 ಕೂಲಿಕಾರರು ಪಾಲ್ಗೊಂಡಿದ್ದಾರೆ.

6. ಉದ್ಯೋಗ ಖಾತ್ರಿ ಯೋಜನೆ ಸಮರ್ಪಕ ಜಾರಿಗಾಗಿ:

ಕೆಲಸಗಾರರು ಎದುರಿಸುತ್ತಿರುವ ಸಮಸ್ಯೆಗಳನ್ನು ಚರ್ಚಿಸಿ ಪರಿಹಾರ ಕಂಡುಕೊಳ್ಳಲು ಕಲುಬುರಗಿಯಲ್ಲಿ 2015 ಅಕ್ಟೋಬರ್ 28 ರಂದು ರಾಜ್ಯ ಮಟ್ಟದ ಸಮಾವೇಶ ಸಂಘಟಿಸಲಾಯಿತು. ಸುಮಾರು 500 ಮಂದಿ ಭಾಗಿ.

ಯೋಜನೆ ಜಾರಿಗಾಗಿ ನವೆಂಬರ್ 23 ರಂದು ರಾಜ್ಯಾದ್ಯಂತ ಪ್ರತಿಭಟನೆಗಳನ್ನು ಹುಮ್ನಾಬಾದ್, ಸವದತ್ತಿ, ಮಂಡ್ಯ, ಬಾಗೆಪಲ್ಲಿ, ಚಿತ್ತಾಪುರ, ಚಿಂಚೋಳಿ, ಗಂಗಾವತಿ, ರಾಯಚೂರು, ದೇವದುರ್ಗ, ಗಜೇಂದ್ರಗಡ ನಡೆಸಲಾಗಿದೆ.

2016

1.ಬರ: ನಮ್ಮ ಮಧ್ಯ ಪ್ರವೇಶ :

ರಾಜ್ಯದ 30 ಜಿಲ್ಲೆಗಳ ಪೈಕಿ 27 ಜಿಲ್ಲೆಗಳಲ್ಲಿ ಭೀಕರ ಬರ ಆವರಿಸಿಕೊಂಡ ಹಿನ್ನೆಲೆಯಲ್ಲಿ ಬರ ನಿರ್ವಹಣಾ ಕ್ರಮಗಳನ್ನು ಯುದ್ಧೋಪಾದಿಯಲ್ಲಿ ಕೈಗೊಳ್ಳುವಂತೆ ಒತ್ತಾಯಿಸಿ ತೀವ್ರವಾದ ಪ್ರತಿಭಟನೆ ಹಮ್ಮಿಕೊಂಡು ಎಪ್ರಿಲ್–ಮೇ ತಿಂಗಳುಗಳಲ್ಲಿ ಬೀದರ್, ಕಲಬುರಗಿ, ರಾಯಚೂರು, ಕೊಪ್ಪಳ, ದಾವಣಗೆರೆ, ಗದಗ, ಉಡುಪಿ, ಮಂಡ್ಯ ಮೊದಲಾದ ಜಿಲ್ಲೆಗಳ ಒಟ್ಟು 15 ಕೇಂದ್ರಗಳಲ್ಲಿ ನಡೆದಿದೆ. ಸುಮಾರು 3000 ಕೂಲಿಕಾರರು ಭಾಗವಹಿಸಿದ್ದರು.

2. ವಲಸೆ ಕಾರ್ಮಿಕರ ಸಮಾವೇಶ :

ಕರ್ನಾಟಕ ನಿರಂತರವಾಗಿ ಬರಗಾಲಕ್ಕೆ ಒಳಗಾಗುತ್ತಿರುವುದರಿಂದ ಗ್ರಾಮೀಣ ಕೂಲಿಕಾರರು ನಗರ ಪ್ರದೇಶಗಳಿಗೆ ವಲಸೆ ಹೋಗುವುದು ಬಾರೀ ಹೆಚ್ಚಾಗಿದೆ. ವಲಸೆ ಕೂಲಿಕಾರರ ಸಮಸ್ಯೆಗಳನ್ನು ತಿಳಿಯಲು ಅವರೊಂದಿಗೆ ಸಂಪರ್ಕವನ್ನು ಹೊಂದಲು ವಲಸೆ ಕಾರ್ಮಿಕರ ರಾಜ್ಯ ಮಟ್ಟದ ಸಮಾವೇಶವನ್ನು 2016 ಮಾರ್ಚ್ 16 ರಂದು ಬೆಂಗಳೂರಿನಲ್ಲಿ ಏರ್ಪಡಿಸಲಾಗಿತ್ತು.

3. ಬಜೆಟ್ ಪೂರ್ವ ರ್‍ಯಾಲಿ :

ಕೇರಳ ಮಾದರಿಯಲ್ಲಿ ಕೃಷಿ ಕೂಲಿಕಾರರ ಕಲ್ಯಾಣ ಮಸೂದೆಯನ್ನು ವಿಧಾನಸಭೆಯಲ್ಲಿ ಮಂಡಿಸಿ, ಕಲ್ಯಾಣ ನಿಧಿಗಾಗಿ ಅಗತ್ಯ ಹಣವನ್ನು ಮೀಸಲಿಡಬೇಕೆಂದು ಒತ್ತಾಯಿಸಿ ಮಾರ್ಚ್ 15 ರಂದು ಬೆಂಗಳೂರಿನಲ್ಲಿ ರ್‍ಯಾಲಿಯೊಂದನ್ನು ಸಂಘಟಿಸಲಾಗಿತ್ತು. 2,500 ರಷ್ಟು ಕೂಲಿಕಾರರು ಭಾಗವಹಿಸಿ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

4.ಅಗತ್ಯ ಬೆಲೆ ಏರಿಕೆ ವಿರುದ್ಧ ಪ್ರತಿಭಟನೆ :

ಮಂಡ್ಯ–500, ಸಿಂಧನೂರು–635, ಚಿಂಚೋಳಿ–130 ಮಂದಿ ಭಾಗಿ, ಬೆಳ್ತಂಗಡಿ, ಯಾದಗಿರಿ, ಚಿತ್ತಾಪುರ, ಮುಂಡಗೋಡ, ಗಂಗಾವತಿ, ಹರಪನಹಳ್ಳಿ, ಸವದತ್ತಿಯಲ್ಲೂ ಧರಣಿ ನಡೆದಿದೆ.

5. ಮನೆ ನಿವೇಶನ/ಭೂಮಿಯ ಹಕ್ಕಿಗಾಗಿ 'ಜೈಲ್ ಬರೋ' ಚಳುವಳಿ :

ಕೂಲಿಕಾರರ ಭೂಮಿ ಮತ್ತು ನಿವೇಶನದ ಹಕ್ಕಿಗಾಗಿ ರೈತ ಸಂಘದೊಂದಿಗೆ ಜಂಟಿಯಾಗಿ ಸರ್ಕಾರದ ಮೇಲೆ ಒತ್ತಡವನ್ನು ತೀವ್ರಗೊಳಿಸಲು ನವೆಂಬರ್ 18 ರಂದು ಸರ್ಕಾರಿ ಕಛೇರಿಗಳಿಗೆ ಮುತ್ತಿಗೆ ಹಾಕಿ ಬಂಧನಕ್ಕೊಳದರು. 10 ಸಾವಿರ ಜನ ಬಂಧನಕ್ಕೆ ಒಳಗಾಗಿದ್ದಾರೆ.



ಕಾ. ಎಸ್.ಎಚ್. ಕಪ್ಪಣ್ಣವರ ಲಾಲ್ ಸಲಾಂ!

ಸ್ವಾತಂತ್ರ್ಯ ಚಳುವಳಿ, ಹೈದರಾಬಾದ್ ವಿಮೋಚನಾ ಚಳುವಳಿ, ಕರ್ನಾಟಕ ಏಕೀಕರಣ ಚಳುವಳಿ, ನರಗುಂದ ರೈತ ಬಂಡಾಯದಲ್ಲಿ ಭಾಗವಹಿಸಿದ್ದ ಕಾ. ಕಪ್ಪಣ್ಣವರ ತಮ್ಮ 91 ವರ್ಷದ ತುಂಬು ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಅವಿಭಜಿತ ಕಮ್ಯುನಿಸ್ಟ್ ಪಕ್ಷ ಸೇರಿ, ಆ ಮೇಲೆ ತಮ್ಮ ಕೊನೆಯುಸಿರವರೆಗೂ ಸಿಪಿಐ(ಎಂ) ಸದಸ್ಯರಾಗಿದ್ದ ಅವರಿಗೆ ನಮ್ಮ ಲಾಲ್ ಸಲಾಂ!

ಕಾಮ್ರೇಡ್ ಎಸ್.ಎಚ್.ಕಪ್ಪಣ್ಣವರ ಇವರು ತಾಯಿಯ ತವರೂರಾದ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಆಲೂರು ಗ್ರಾಮದಲ್ಲಿ 10-07-1925 ರಲ್ಲಿ ಜನಿಸಿದರು. ಇವರ ತಂದೆ ಹೊನಗೌಡ ಪಾಟೀಲ ಬೋರಗಲ್ಲದವರಿದ್ದು, ಅವರು ಪೋಲೀಸ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಪೋಲೀಸ ನೌಕರಿ ತ್ಯಜಿಸಿ ಸವದತ್ತಿ ಯಲ್ಲಮ್ಮಾ ಪುರಸಭೆಯಲ್ಲಿ ನಾಕಾ ಇನ್ಸಪೆಕ್ಟರ ರಾಗಿ ಸೇವೆ ಸಲ್ಲಿಸುತ್ತಿದ್ದರು. ಆಗ ಎಸ್.ಎಚ್.ಕಪ್ಪಣ್ಣವರ ಅವರು ಒಂದು ವರ್ಷದ ಕೂಸು ಇರುವಾಗ ಸವದತ್ತಿಯ ಕಪ್ಪಣ್ಣವರ ಮನೆತನದ ಇಬ್ಬರು ಸಹೋದರಿಯರಾದ ಶಿವಮ್ಮ ಮತ್ತು ಸಾವಮ್ಮ ಎಂಬುವರು ಇವರನ್ನು ಸಾಕಿ ಸಲುಹಿ ವಿದ್ಯಾಭ್ಯಾಸ ಮಾಡಿಸಿ ಪ್ರಥಮ ವರ್ಷದ ಇಂಟ-ರ ಮಿಡಿಯೆಟ್ ಓದುವಾಗಲೇ ಮದುವೆಮಾಡಿಸಿ ತಮ್ಮ ಆಸ್ತಿಯನ್ನು ಎಸ್.ಎಚ್.ಕಪ್ಪಣ್ಣವರ ಇವರಿಗೆ ಬಕ್ಷೀಸಮಾಡಿದ್ದರು.

ಇವರ ಪ್ರಾಥಮಿಕ ಶಿಕ್ಷಣ ಸರಕಾರಿ ಕನ್ನಡ ಗಂಡುಮಕ್ಕಳ ಶಾಲೆ ಮತ್ತು ಎ.ವ್ಹಿ.ಸ್ಕೂಲ ಸವದತ್ತಿಯಲ್ಲಿ ಮುಗಿಯುತ್ತದೆ. ನಂತರ ಧಾರವಾಡದ ಆರ್.ಎಲ್.ಎಸ್. ಹೈಸ್ಕೂಲಿನಲ್ಲಿ ಮ್ಯಾಟ್ರಿಕ್ ಮುಗಿಸಿದ ನಂತರ ಬೆಳಗಾವಿ ಲಿಂಗರಾಜ ಕಾಲೇಜಿನಲ್ಲಿ ಪ್ರಥಮ ವರ್ಷದ ಇಂಟರ ಮಿಡಿಯೇಟ್ ಸಾಯನ್ಸ ವರೆಗೆ ವಿದ್ಯಾಭ್ಯಾಸ. ಕಾಲೇಜು ದಿನಗಳಲ್ಲಿ ಸಹಪಾಠಿ ಹಾಗೂ ಕಮ್ಯೂನಿಸ್ಟ್ ಸೋಶಿಯಾಲಿಸ್ಟ್ ಪಕ್ಷದ ಪ್ರಮುಖ ಕಾರ್ಯಕರ್ತ ಧುರೀಣರಾದ ನಾಥ ಪೈ, ಕೃಷ್ಣಾ ಮೆಣಸೆ, ಎನ್.ಕೆ. ಉಪಾಧ್ಯಾಯರೊಂದಿಗೆ ಒಡನಾಟ. ಅವರು ನೀಡುವ ಪಕ್ಷದ ಪುಸ್ತಕಗಳ ಓದಿನಿಂದ ಕಮ್ಯೂನಿಷ್ಟ ಸಿದ್ಧಾಂತಕ್ಕೆ ತಲೆಬಾಗಿ ಭಾರತ ಕಮ್ಯೂನಿಸ್ಟ್ ಪಕ್ಷದ ಸಕ್ರೀಯ ಕಾರ್ಯಕರ್ತರಾದರು. ಪ್ರಾಥಮಿಕ ಶಿಕ್ಷಣ 7ನೇ ತರಗತಿ ಓದುವಾಗಲೇ ಸ್ವಾತಂತ್ರ್ಯ ಚಳುವಳಿಯ ಪ್ರಭಾವಕ್ಕೆ ಒಳಗಾಗಿ ಶಾಲೆಗೆ ಖಾದಿಟೋಪಿ ಹಾಕಿಕೊಂಡಿದ್ದಕ್ಕೆ ತರಗತಿಯಲ್ಲಿ ಶಿಕ್ಷಕ ರಿಂದ ದಂಡಿಸಲ್ಪಟ್ಟಿದ್ದರು. ವಿದ್ಯಾರ್ಥಿದೆಸೆಯಲ್ಲಿಯೇ ಖಾದಿ ನೇಯ್ಗೆ ಹಾಗೂ ಹೆಗಲಮೇಲೆ ಖಾದಿ ವಸ್ತು ಮಾರಾಟಮಾಡುತ್ತಿದ್ದರಂತೆ (ಚಳುವಳಿಯ ಭಾಗವಾಗಿ). 1942 ರಲ್ಲಿ ಸವದತ್ತಿಯ ಕೋಟೆ-ಯ ಒಳಗಡೆ ಇರುವ ಶಿರಸಂಗಿ ಲಿಂಗರಾಜರ ಅರಮನೆಯನ್ನು ಚಳುವಳಿಗಾರರು ಬೆಂಕಿಗೆ ಆಹುತಿ ಮಾಡಿದ್ದರಂತೆ.

ಹೈದರಾಬಾದನಲ್ಲಿ ರಜಾಕಾರರ ಹಾವಳಿ ಎದ್ದಾಗ ತಮ್ಮ ಹಲವಾರು ಸ್ನೇಹಿತರೊಂದಿಗೆ ಹೈದರಾಬಾದಗೆ ಟಿಕೇಟರಹಿತರಾಗಿ ರೈಲ್ವೆಯಲ್ಲಿ ಪ್ರಯಾಣ ಮಾಡಿ, ಸರದಾರ ವಲ್ಲಭ ಭಾಯಿ ಪಟೇಲರ ಸ್ವತಂತ್ರ ಸಂಸ್ಥಾನಗಳ ವಿಲೀನಕರ ಆಂದೋಲನದಲ್ಲಿ ಭಾಗವಹಿಸಿ ತಮಗೆ ಜವಾಬ್ದಾರಿ ವಹಿಸಿದ್ದ 8-10 ಹಳ್ಳಿಗಳನ್ನು ನಿಜಾಮರ ಆಡಳಿತದಿಂದ ಬಿಡುಗಡೆ-ಯ ಕಾರ್ಯದಲ್ಲಿ ಪಾತ್ರ ವಹಿಸಿದರು. ನೇತಾಜಿ ಸುಭಾಷ ಚಂದ್ರ ಭೋಸರ ಇಮಡಿಯನ್ ನ್ಯಾಶನಲ್ ತಯಾರಿಸುವ ತರಬೇತಿಯನ್ನು ಅಲ್ಲಿ ಪಡೆದರು.

ಸೇಂದಿಗಿಡವನ್ನು ಕಡೆಯುವುದು, ಸೇಂದಿಗೆ ಬದಲಾಗಿ ನೀರಾದ ಮಾರಾಟ ಮಾಡುತ್ತಿದ್ದರು. ಇವರು ಇಂಟರ ಮೀಡಿಯೆಟ್ ಓದುವಾಗ ಹೈದರಾಬಾದ ವಿಮೋಚನಾ ಚಳುವಳಿಯ ಹೋರಾಟದಲ್ಲಿ ಭಾಗವಹಿಸಿ ಕೊಪ್ಪಳ ಹತ್ತಿರದ ಕೆಲವೊಂದು ಹಳ್ಳಿಗಳನ್ನು ಅಳವಂಡಿ ಶಿವಮೂರ್ತಿಸ್ವಾಮಿಗಳ ನೇತೃತ್ವದಲ್ಲಿ ರಜಾಕಾರರಿಂದ ವಿಮೋಚನೆಗೊಳಿಸಿದ ಪ್ರಕ್ರಿಯೆಯಲ್ಲಿ ಭಾಗ ವಹಿಸಿದ್ದರು.

ಚಿಕ್ಕಮಠದಲ್ಲಿ ಖಾದಿ ಕೇಂದ್ರದ ಸ್ಥಾಪನೆ ಮಾಡಿ ಸ್ವಾತಂತ್ರ್ಯ ಚಳುವಳಿಯ ಒಂದು ಭಾಗವಾದ ಖಾದಿ ಗ್ರಾಮೋದ್ಯೋಗ ಸಂಘದ ಉಪಾಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಅಂದಿನಿಂದ ಸದಾ ಖಾದಿ ದೋತರ ನೆಹರೂ ಜುಬ್ಬಾ ಹಾಗೂ ಗಾಂಧಿ ಟೋಪಿಗಳೇ ಇವರ ದಿನ ನಿತ್ಯದ ತೊಡುಗೆಗಳಾದವು. ಖಾದಿ ಹುಟ್ಟುವಳಿ ಮತ್ತು ಮಾರಾಟ, ಸೇಂದಿ ನಿಷೇಧ ಮಾಡಿ ನೀರಾ ಉತ್ಪತ್ತಿ ಮತ್ತು ಮಾರಾಟ ಮಾಡುವುದು, ಮೇದಾರ ಸೊಸಾಯಿಟಿ ಸ್ಥಾಪಿಸಿ, ಬಿದಿರು ಮತ್ತು ಬಿದರಿನ ವಸ್ತುಗಳನ್ನು ತಯಾರಿಸಿ ಅಗ್ಗದ ದರದಲ್ಲಿ ಮಾರಾಟ ಮಾಡಿಸುತ್ತಿದ್ದರು.

ಸ್ವಾತಂತ್ರ್ಯ ಹೋರಾಟಗಾರರಿಗೆ ನೀಡುವ ಪಿಂಚಣಿಗೆ ಇವರು ಎಂದೂ ಆಸೆ ಪಟ್ಟವರಲ್ಲ. ಸ್ನೇಹಿತರಾದ ಶಂಕರರಾವ ಪದಕಿ ಪಿಂಚಣಿ ದೊರಕಿಸಿಕೊಡುತ್ತೇನೆ ಎಂದಾಗ ಅದನ್ನು ನಯವಾಗಿ ನಿರಾಕರಿಸಿದ ಕೆಲವೇ ಮಹನೀಯರಲ್ಲಿ ಇವರೂ ಒಬ್ಬರು.

ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಹಂಪಿಯ ಕರ್ನಾಟಕ ಏಕೀಕರಣ ಪರಿಷತ್ತಿನಲ್ಲಿ ಭಾಗವಹಿಸಿದ್ದರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಸಂಪಗಾವಿ ಮತ್ತು ಸವದತ್ತಿ ತಾಲೂಕಿನ ಸತ್ತಿಗೇರಿಯಲ್ಲಿ ಹಾವೇರಿಯ ಸಿದ್ದಪ್ಪನವರ ನೇತೃತ್ವದಲ್ಲಿ ಸಭೆಯನ್ನು ನಡೆಸಿದ್ದರು. ಈ ಸಭೆಯಲ್ಲಿ ಕಾಮ್ರೇಡ್ ಕಕ್ಕಿಲಾಯ ಹಾಗೂ ಎನ್.ಕೆ.ಉಪಾಧ್ಯಾಯರು ಭಾಗವಹಿಸಿದ್ದರೆಂದು ಸ್ಮರಿಸಿ ಕೊಳ್ಳುತ್ತಿದ್ದರು.

ಸವದತ್ತಿ ಯಲ್ಲಮ್ಮಾ ಪುರಸಭೆಯಲ್ಲಿ ಅವಿರೋಧವಾಗಿ ಅಧ್ಯಕ್ಷರಾಗಿ ಆಯ್ಕೆಯಾಗಿ ಪೂರ್ಣ ಅವಧಿಯನ್ನು ಪೂರೈಸಿದ್ದರು. ಅಲ್ಲದೆ ಆ ಸಂದರ್ಭದಲ್ಲಿ ಜನಪರ ಕೆಲಸಗಳನ್ನು ಮಾಡಿದ್ದರು. ಸವದತ್ತಿ ನಗರಕ್ಕೆ ಮೊದಲಬಾರಿಗೆ 12 ಲಕ್ಷ ವೆಚ್ಚದಲ್ಲಿ ಕುಡಿಯುವ ಶುದ್ಧ ನೀರಿನ ಘಟಕದ ಸ್ಥಾಪಿಸಿದ್ದರು. ಪೌರ ಕಾರ್ಮಿಕರ ವಾಸಕ್ಕೆ ಮನೆಗಳನ್ನು ನಿರ್ಮಾಣಮಾಡಿ ವಿತರಿಸಿದ್ದರು. ಪುರಸಭೆಯ ಶತಮಾನೋತ್ಸವ ಆಚರಣೆ ಮಾಡಿ ನಾಗರಿಕರ ಪ್ರಶಂಸೆಗೆ ಪಾತ್ರರಾಗಿದ್ದರು. ಯಲ್ಲಮ್ಮಾ ಟ್ರಸ್ಟಿನ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಸವದತ್ತಿಯ ಪಿ.ಎಲ್.ಡಿ.(ಪ್ರಾಯಮರಿ ಲ್ಯಾಂಡ್ ಡೆವಲೆಪ್‌ಮೆಂಟ) ಬ್ಯಾಂಕಿನ ಸಂಸ್ಥಾಪಕರಲ್ಲದೆ 25 ವರ್ಷಗಳ ವರೆಗೆ ಉಪಾಧ್ಯಕ್ಷರಾಗಿ ಸೇವೆಸಲ್ಲಿಸಿದರು. ನೀರಾವರಿ ಬಾವಿಗಳ ಯೋಜನೆ ಪ್ರಾರಂಭಿಸಿ ರೈತರಿಗೆ ಅನುಕೂಲಮಾಡಿಕೊಟ್ಟಿದ್ದರು.

1980 ರಲ್ಲಿ ಮಲಪ್ರಭಾ ಅಚ್ಚುಕಟ್ಟು ಪ್ರದೇಶದ "ಮಲಪ್ರಭಾ ರೈತ ಹೋರಾಟ ಸಮನ್ವಯ ಸಮಿತಿ"ಯ ಸಂಚಾಲಕರಾಗಿ ನೀರಾವರಿಯ ಅಭಿವೃದ್ಧಿ ಕರ (ಬೆಟರಮೆಂಟ ಲೇವ್ಹಿ) ನೀರಿನ ಕರ (ವಾಟರ ಟ್ಯಾಕ್ಸ) ವಿರೋಧಿಸಿ ನರಗುಂದ ರೈತ ಬಂಡಾಯವೆಂದೇ ಖ್ಯಾತವಾದ ಪ್ರಮುಖ ಚಳುವಳಿ ಯಲ್ಲಿ ಪಾಲ್ಗೊಂಡಿದ್ದರು. ಕರ್ನಾಟಕ ಪ್ರಾಂತ ರೈತ ಸಂಘದ ಬೆಳಗಾವಿ ಜಿಲ್ಲಾ ಅಧ್ಯಕ್ಷರಾಗಿ, ರಾಜ್ಯ ಸಮಿತಿಯ ಸದಸ್ಯರಾಗಿ, ರೈತಪರ ಚಳುವಳಿಯಲ್ಲಿ ಭಾಗವಹಿಸಿದ್ದರು. ಸವದತ್ತಿ ಪಟ್ಟಣ ಹಾಗೂ ತಾಲೂಕಿನ ನಿವೇಶನ ರಹಿತ ಜನರಪರವಾಗಿ ಅವರ ಬೇಡಿಕೆಗಳಿಗಾಗಿ ಹೋರಾಟ ಮಾಡಿದರು. ಜಿಲ್ಲೆಯ ಹಾಗೂ ತಾಲೂಕಿನ ಕಾರ್ಮಿಕರ, ಕೃಷಿ ಕಾರ್ಮಿಕರ ಬೇಡಿಕೆಗಳಿಗಾಗಿ ಹೋರಾಟ ಮಾಡಿದ್ದಾರೆ.

ಅವಿಭಜಿತ ಕಮ್ಯುನಿಸ್ಟ ಪಕ್ಷದ ಕಾರ್ಡಾಹೋಲ್ಡರ್ ಸದಸ್ಯರಾಗಿದ್ದರು. ನಂತರದಲ್ಲಿ ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷದ ಸದಸ್ಯತ್ವ ಪಡೆದು ಪಕ್ಷದ ಧಾರವಾಡ ಜಿಲ್ಲಾ ಸಮಿತಿ (ಧಾರವಾಡ, ಬೆಳಗಾವಿ, ವಿಜಯಪುರ, ಚಿತ್ರದುರ್ಗ) ಸದಸ್ಯರಾಗಿ ಆ ಮೇಲೆ ಬೆಳಗಾವಿ ಜಿಲ್ಲಾ ಸಂಘಟನಾ ಸಮಿತಿ ಸದಸ್ಯರಾಗಿದ್ದರು. ಕೊನೆ ಉಸಿರು ಇರುವವರೆಗೂ ಮಾರ್ಕ್ಸವಾದಿ ಕಮ್ಯುನಿಸ್ಟ ಪಕ್ಷದ ಸದಸ್ಯರಾಗಿ ಸ್ಥಳೀಯ ಶಾಖೆಗೆ ಮಾರ್ಗದರ್ಶಕರಾಗಿದ್ದರು. ತಮ್ಮ 93ನೇ ವಯಸ್ಸಿನಲ್ಲಿ ವಯೋ ಸಹಜ ಸ್ಥಿತಿಯಿಂದ ನಿಧನರಾಗಿ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಮೃತರ ಅಂತ್ಯಯಾತ್ರೆಯಲ್ಲಿ ಸುಮಾರು 2500 ರಷ್ಟು ಜನ ಭಾಗವಹಿಸಿದ್ದರು. ಪಕ್ಷದ ರಾಜ್ಯ ಸಮಿತಿಯಿಂದ ಕಾಮ್ರೇಡ್ ನಿತ್ಯಾನಂದಸ್ವಾಮಿಗಳು ಭಾಗವಹಿಸಿದ್ದರು. ಪಕ್ಷದ ಜಿಲ್ಲಾ ಸಮಿತಿ ವತಿಯಿಂದ ಕಾ. ವ್ಹಿ.ಪಿ.ಕುಲಕರ್ಣಿ, ಜೈಬು ಜೈನೇಖಾನ, ಎಲ್.ಎಸ್.ನಾಯಕ, ನಾಗಪ್ಪ ಸಂಗೊಳ್ಳಿ, ದಾದಾ ಬೆಣ್ಣಿ, ಎಫ್.ಎಮ್.ನದಾಫ, ಜಿ.ವ್ಹಿ.ಕುಲಕರ್ಣಿಯವರು, ಪಕ್ಷದ ಸ್ಥಳೀಯ ಶಾಖೆಯ ಕಾರ್ಯದರ್ಶಿ ಶ್ರೀಕಾಂತ ಹಟ್ಟಿಹೊಳಿ, ಈರಣ್ಣ ಟೋಪಕರವರು, ಧಾರವಾಡದ ಜಿಲ್ಲಾ ಸಮಿತಿ ಬಿ.ಎಸ್.ಸೊಪ್ಪಿನ, ಮಹೇಶ ಪತ್ತಾರ, ಲಿಂಗರಾಜ ಅಂಗಡಿ, ಪಕ್ಷದ ಕಾರ್ಯಕರ್ತರು, ಅಕ್ಷರ ದಾಸೋಹ ಕಾರ್ಯಕರ್ತರು ಹಾಗೂ ಕಾರ್ಮಿಕ ಸಂಗಾತಿಗಳು ಪಕ್ಷದ ಧ್ವಜವನ್ನು ಅರ್ಧಕ್ಕೆ ಇಳಿಸಿ, ಪಕ್ಷದ ಧ್ವಜವನ್ನು ಮೃತರ ಮೇಲೆ ಹೊದಿಸಿ, ಕಾ. ಕಪ್ಪಣ್ಣವರ ಅಮರರಾಗಿ ಎಂಬ ಘೋಷಣ ಯೊಂದಿಗೆ ಅಂತ್ಯಯಾತ್ರೆಯು ನಗರದ ಪ್ರಮುಖ ಬೀದಿಗಳಲ್ಲಿ ಹಾಯ್ದು ಅಂತ್ಯಕ್ರಿಯೆ ಬೆಡಸೂರ ಮಠದ ಸ್ಮಶಾನದಲ್ಲಿ ಅಂತ್ಯಕ್ರಿಯೆ ಜರುಗಿತು.

ಎಲ್.ಎಸ್.ನಾಯಕ
ಸವದತ್ತಿ.

ಸಿಗರನಹಳ್ಳಿಯಲ್ಲಿ ಡಿ.ಹೆಚ್.ಎಸ್. ಘಟಕ ಉದ್ಘಾಟನೆ

ಸಿಗರನಹಳ್ಳಿಯಲ್ಲಿ ದೇವಸ್ಥಾನ ಪ್ರವೇಶ ಮತ್ತು ಸಮುದಾಯ ಭವನ ಪ್ರವೇಶವನ್ನು ನಿರಾಕರಿಸುವ ಮೂಲಕ ಪಟ್ಟಭದ್ರ ಹಿತಾಸಕ್ತಿಗಳು ನೇರವಾಗಿ ಸಂವಿಧಾನಾತ್ಮಕ ಹಕ್ಕುಗಳನ್ನು ನಿರಾಕರಿಸಿದ್ದ ಕಾರಣ-ಕ್ಕೆ ಹೋರಾಟ-ಚಳುವಳಿ ಹುಟ್ಟಿಕೊಂಡದ್ದು ಎಂದು ಹಿರಿಯ ದಲಿತ ಮುಖಂಡರು ಮತ್ತು ಪ್ರಗತಿಪರ ಚಿಂತಕರಾದ ಡಾ.ವಿ.ಲಕ್ಷ್ಮಿನಾರಾಯಣರವರು ಹೇಳಿದರು.

ಅವರು ಡಿಸೆಂಬರ್ 11ರಂದು ಹಾಸನ ಜಿಲ್ಲೆಯ ಹೊಳೇನರಸೀಪುರ ತಾಲ್ಲೂಕಿನ ಸಿಗರನಹಳ್ಳಿಯಲ್ಲಿ ಡಾ.ಬಿ.ಆರ್.ಅಂಬೇಡ್ಕರ್‌ರವರ 125ನೇ ಜನ್ಮ ವರ್ಷಾಚರಣೆ ಮತ್ತು ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್)ನ ಘಟಕ ಉಧ್ಘಾಟಿಸಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದ ಅವರು ಭಾರತದಲ್ಲಿ ಆರ್ಥಿಕ ಅಸಮಾನತೆ ಮತ್ತು ಜಾತಿಯ ಅಸಮಾನತೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು ಬಡವ ಮತ್ತು ಶ್ರೀಮಂತರ ನಡುವಿನ ಅಂತರ ಹೆಚ್ಚಾಗುತ್ತಿದೆ. ಭೂಮಾಲಕ ಶಕ್ತಿಗಳಿಂದ ದಲಿತರ ಮೇಲಿನ ದೌರ್ಜನ್ಯವನ್ನು ಹೆಚ್ಚಿಸುತ್ತಿವೆ. ಇದು ಸಂವಿಧಾನದ ಆಶಯಗಳಿಗೆ ಅಪಾಯವನ್ನು ತಂದೊಡ್ಡುತ್ತಿದೆ. ಜಾತಿ ವಿನಾಶ ಕೇವಲ ದಲಿತರಿಂದ ಮಾತ್ರ ಸಾಧ್ಯವಿಲ್ಲ, ಮೇಲ್ಜಾತಿ ಪ್ರಗತಿಪರರು ಮನುಷ್ಯ ಪ್ರೇಮಿಗಳು ಕೈಜೋಡಿಸಬೇಕು. ಈ ಹೋರಾಟ ಅಂತಿಮವಾಗಿ ವರ್ಗ ಹೋರಾಟವಾಗಿ ಮಾರ್ಪಟ್ಟಾಗ ಮಾತ್ರ ಜಾತಿ ವ್ಯವಸ್ಥೆ ನಾಶವಾಗಲು ಸಾಧ್ಯ. ದೇಶದಲ್ಲಿ ಕಮ್ಯೂನಿಸ್ಟರು ಅಂಬೇಡ್ಕರವರ ಗೌರವವನ್ನು ಹೆಚ್ಚಿಸುವಂತಹ ಮತ್ತು ಅವರ ಆಶಯಗಳನ್ನು ಈಡೇರಿಸುವಂತೆ ದಲಿತರ ಮಧ್ಯೆ ಕೆಲಸ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಮಾಜಿ ಶಾಸಕರು ಮತ್ತು ಸಿಪಿಐಎಂನ ರಾಜ್ಯ ಕಾರ್ಯದರ್ಶಿಗಳಾದ ಜಿ.ವಿ.ಶ್ರೀರಾಮರೆಡ್ಡಿಯವರು ಮಾತನಾಡುತ್ತಾ "ಸಂವಿಧಾನವನ್ನು ದೇಶಕ್ಕೆ ಅರ್ಪಣೆ ಮಾಡಿದ ಅಂಬೇಡ್ಕರವರು ಅಂದೇ ದೇಶವನ್ನುದ್ದೇಶಿಸಿ ಒಂದು ಮಾತನಾಡಿದ್ದರು, ನಮಗೆ ರಾಜಕೀಯ ಸಮಾನತೆ ಸಿಕ್ಕಿದೆ ಆದರೆ ಆರ್ಥಿಕ ಮತ್ತು ಸಾಮಾಜಿಕ ಅಸಮಾನತೆ ಇನ್ನೂ ಜೀವಂತವಾಗಿದೆ ಎಂದಿದ್ದರು. ಆ ಮಾತು ಇಂದಿಗೂ ಜೀವಂತವಾಗಿದೆ.


ಗ್ರಾಮೀಣ ಭಾರತದಲ್ಲಿನ ಕೃಷಿ ಭೂಮಿ ಕೆಲವೇ ಕೆಲವರ ಕೈಯಲ್ಲಿ ಶೇಖರಣೆಯಾಗಿದ್ದು ದಲಿತರನ್ನು ಭೂಮಿಯಿಂದ ವಂಚಿತರನ್ನಾಗಿ ಮಾಡಲಾಗಿದೆ. ರಾಜ್ಯದಲ್ಲಿ ಲಕ್ಷಾಂತರ ಬಡ ದಲಿತರು ಬಗರ್‌ಹುಕುಂ ಸಾಗುವಳಿ ಸಕ್ರಮಕ್ಕೆ ಸರ್ಕಾರದ ಮುಂದೆ ಅರ್ಜಿಗಳನ್ನು ಸಲ್ಲಿಸಿ ಹೋರಾಟಗಳನ್ನು ನಡೆಸುತ್ತಿದ್ದರೂ ಅವರಿಗೆ ಭೂಮಿಯನ್ನು ಮಂಜೂರು ಮಾಡಿಕೊಡುವ ಬದಲಿಗೆ ಅವರಿಂದ ಭೂಮಿಯನ್ನು ಕಿತ್ತುಕೊಳ್ಳುವ ನೀತಿಗಳನ್ನೇ ಜಾರಿಗೆ ತರುತ್ತಿದೆ. ದಲಿತರ ಬದುಕು ಹಸನಾಗದೆ ಸ್ವಾಭಿಮಾನದಿಂದ ಬದುಕಲು ಸಾಧ್ಯವಾಗುವುದಿಲ್ಲ. ಇಂದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿ ಶಿಕ್ಷಣ, ಆರೋಗ್ಯ, ಉದ್ಯೋಗ ಮುಂತಾದ ಮೂಲಭೂತ ವಿಷಯಗಳು ಉಳ್ಳವರ ಸ್ವತ್ತಾಗಿ ಪರಿಣಮಿಸಿವೆ ಇವೆಲ್ಲವುಗಳ ವಿರುದ್ಧ ಪ್ರಬಲ ಜನ ಚಳುವಳಿಯನ್ನು ಕಟ್ಟಿದರೆ ಮಾತ್ರ ಬದಲಾವಣೆಯನ್ನು ತರಲು ಸಾದ-್ಯ ಆ ನಿಟ್ಟಿನಲ್ಲಿ ಸಿಗರನಹಳ್ಳಿ ದಲಿತರ ಹೋರಾಟ ಅಭಿನಂದನಾರ್ಹ ಎಂದರು.



ಮತ್ತೋರ್ವ ಅತಿಥಿಗಳಾಗಿ ಭಾಗವಹಿಸಿದ್ದ ದಲಿತ ಹಕ್ಕುಗಳ ಸಮಿತಿಯ ರಾಜ್ಯ ಸಂಚಾಲಕರಾದ ಗೋಪಾಲಕೃಷ್ಣ ಅರಳಹಳ್ಳಿಯವರು ಮಾತನಾಡಿ ಜಾತಿ ಅಸ್ಪೃಷ್ಯತೆ ವಿರುದ್ಧ ದಲಿತ ಹಕ್ಕುಗಳ ಸಮಿತಿ ನಿರಂತರವಾಗಿ ಚಳುವಳಿಯನ್ನು ನಡೆಸಿಕೊಂಡು ಬಂದಿದ್ದು ಇಂದಿನ ಸವಾಲುಗಳನ್ನು ದಿಟ್ಟವಾಗಿ ಎದುರಿಸಬೇಕಾದರೆ ಎಲ್ಲಾ ದಲಿತ ಮತ್ತು ಜನಪರ ಸಂಘಟನೆಗಳು ಒಟ್ಟಿಗೆ ಸೇರಿ ದಲಿತರನ್ನು ಸಂಘಟಿಸಿ ಚಳುವಳಿಯನ್ನು ನಡೆಸಿ ಒಂದೆಡೆ ದಲಿತರ ಹಕ್ಕುಗಳ ರಕ್ಷಣೆ ಮತ್ತು ಒಟ್ಟಾರೆ ಜಾತಿ ವಿನಾಶದ ಹೋರಾಟಗಳನ್ನು ನಡೆಸಬೇಕಾದ ಅನಿವಾರ್ಯತೆ ಇದೆ ಎಂದರು.

ಸಮಾರಂಭದಲ್ಲಿ ಹಿರಿಯ ದಲಿತ ಮುಖಂಡರಾದ ನಾರಾಯಣದಾಸ್, ಎಚ್.ಕೆ.ಸಂದೇಶ್, ರಾಜಶೇಖರ್, ಅಂಬುಗಮಲ್ಲೇಶ್, ರತಿರಾವ್, ಎಚ್.ಆರ್.ನವೀನ್‌ಕುಮಾರ್ ಭಾಗವಹಿಸಿ ಮಾತನಾಡಿದರು. ಕಾರ್ಯಕ್ರಮದ ಮೊದಲಿಗೆ ಪ್ರಾಸ್ತಾವಿಕವಾಗಿ ಸಿಪಿಐ(ಎಂ)ನ ಜಿಲ್ಲಾ ಕಾರ್ಯದರ್ಶಿ ಧರ್ಮೇಶ್ ಮಾತನಾಡಿದರು. ವಿಜಯ್‌ಕುಮಾರ್ ಸಿಗರನಹಳ್ಳಿ ಸ್ವಾಗತಿಸಿದರು. ಲೋಕೇಶ್ ವಂದಿಸಿದರು. ಇಡೀ ಕಾರ್ಯಕ್ರಮವನ್ನು ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕರಾದ ಎಂ.ಜಿ.ಪೃಥ್ವಿ ನಿರೂಪಿಸಿದರು. ಕಾರ್ಯಕ್ರಮದ ಮೊದಲಿಗೆ ದಲಿತ ಹಕ್ಕುಗಳ ಸಮಿತಿ ಕರ್ನಾಟಕ ಸಿಗರನಹಳ್ಳಿ ಗ್ರಾಮಘಟಕದ ನಾಮಫಲಕವನ್ನು ಅನಾವರಣ ಮಾಡಲಾಯಿತು.

ಅನಾಣ್ಯೀಕರಣ : ಸತ್ಯಾಂಶಗಳನ್ನು ತಿಳಿಸುವ ಬದಲು ಸುಳ್ಳುಗಳ ಪ್ರಚಾರ



ಕೆ.ಎಂ.ನಾಗರಾಜ್

ನೋಟುಗಳ ರದ್ದತಿಯಿಂದ ಕಪ್ಪು ಹಣ ಮಾಯವಾಗುತ್ತದೆ, ಭ್ರಷ್ಟಾಚಾರ ಇಳಿಯುತ್ತದೆ, ಖೋಟಾ ನೋಟುಗಳಿರುವುದಿಲ್ಲ, ಭಯೋತ್ಪಾದಕರಿಗೆ ಹಣ ಸಿಗುವುದಿಲ್ಲ ಇತ್ಯಾದಿ ತರ್ಕಗಳು ವಿಫಲವಾದ ನಂತರ ಈಗ ಪ್ರತಿದಿನ ಹೊಸ–ಹೊಸ ತರ್ಕಗಳನ್ನು ಪಸರಿಸಲಾಗುತ್ತಿದೆ. ಇದರಿಂದ ಸರಕಾರಕ್ಕೆ ಜನಗಳಿಗಾಗಿ ಖರ್ಚು ಮಾಡಲು ಹೆಚ್ಚು ಹಣ ಸಿಗುತ್ತದೆ, ಬಡ್ಡಿದರಗಳು ಇಳಿದು ಅರ್ಥವ್ಯವಸ್ಥೆಗೆ ಉತ್ತೇಜನೆ ಸಿಗುತ್ತದ ಎಂಬುದು ಇತ್ತೀಚಿನ ಎರಡು ಹೊಸ ತರ್ಕಗಳು. ಇವೆರಡೂ ವಂಚಕ ಸುಳ್ಳುಗಳು ಎನ್ನುತ್ತಾರೆ ಆರ್ಥಿಕ ತಜ್ಞ **ಪ್ರೊ. ಪ್ರಭಾತ್ ಪಟ್ನಾಯಕ್**.

ಜನರಿಗೆ ಸತ್ಯಾಂಶಗಳನ್ನು ತಿಳಿಸುವುದು ಆಳುವ ಪಕ್ಷದ ಹೊಣೆಗಾರಿಕೆ. ಅದರ ಬದಲು, ಉದ್ದೇಶಪೂರ್ವಕವಾಗಿಯೇ ಸುಳ್ಳು ಪ್ರಚಾರದಲ್ಲಿ ತೊಡಗಿರುವುದು ಒಂದು ಅಪ್ರಜಾಸತ್ತಾತ್ಮಕ ಕ್ರಮ. ಬಿಜೆಪಿಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ ಎಂದು ಪ್ರಶ್ನಿಸುತ್ತಾರೆ ಅವರು.

ಅವರ Demonetisation as the Basis for a Fiscal Stimulus ಮತ್ತು Demonetisation and Banks' lending Rates ಲೇಖನಗಳ ಸಾರಾಂಶ ನಮ್ಮ ಓದುಗರಿಗಾಗಿ ಇಲ್ಲಿದೆ.

ನೋಟುಗಳ ರದ್ದತಿಯಿಂದಾಗಿ ಭಾರಿ ಪ್ರಮಾಣದ ಕಪ್ಪು ಹಣವನ್ನು ಸರ್ಕಾರ ವಶಪಡಿಸಿಕೊಳ್ಳುತ್ತದೆ. ಆ ಹಣವನ್ನು ಬಳಸಿಕೊಂಡು ಮೂಲ ಸೌಕರ್ಯಗಳನ್ನು ನಿರ್ಮಿಸಬಹುದು. ಅಥವಾ ಆ ಹಣವನ್ನು ನೇರವಾಗಿ ಅರ್ಹ ವ್ಯಕ್ತಿಗಳ ಬ್ಯಾಂಕ್ ಖಾತೆಗೆ ನಿರ್ಭಯವಾಗಿ ವರ್ಗಾಯಿಸಬಹುದು ಎಂಬ ವಿಚಿತ್ರ ವಾದವನ್ನು ಬಿಜೆಪಿಯ ವಕ್ತಾರರು ಮಂಡಿಸುತ್ತಿದ್ದಾರೆ. ಪ್ರತಿ ಕುಟುಂಬಕ್ಕೂ ಇಂತಿಷ್ಟು ಹಣ ಸಿಗಬಹುದು ಎಂಬ ಊಹೆಯನ್ನೂ ತೇಲಿ ಬಿಟ್ಟಿದ್ದಾರೆ. ಈ ಮಾತುಗಳು, ಲೋಕ ಸಭಾ ಚುನಾವಣೆಯ ಸಂದರ್ಭದಲ್ಲಿ, ಸ್ವಿಸ್ ಬ್ಯಾಂಕ್‌ಗಳಲ್ಲಿ ಅಡಗಿಟ್ಟಿರುವ ಕಪ್ಪು ಹಣವನ್ನು ಅಧಿಕಾರಕ್ಕೆ ಬಂದ ನೂರು ದಿನಗಳೊಳಗೆ ವಾಪಸ್ ಪಡೆದು ಪ್ರತಿಯೊಬ್ಬರ ಖಾತೆಗೂ ಹದಿನೈದು ಲಕ್ಷ ರೂಪಾಯಿಗಳನ್ನು ಜಮಾ ಮಾಡುವುದಾಗಿ ಮೋದಿಯವರು ಕೊಟ್ಟಿದ್ದ ಭರವಸೆಯನ್ನು ಜ್ಞಾಪಿಸುತ್ತವೆ. ಬಿಜೆಪಿ ಮಂದಿಯ ಈ ಮಾತುಗಳು, ನೋಟುಗಳ ರದ್ದತಿಯಿಂದಾಗಿ ದಾರುಣ ಪರಿಸ್ಥಿತಿಗೊಳಗಾಗಿರುವ ಜನರನ್ನು ದಿಕ್ಕು ತಪ್ಪಿಸುವ ಮತು ಆ ಮೂಲಕ ಅವರ ಆಕ್ರೋಶವನ್ನು ಶಮನಗೊಳಿಸುವ ತಂತ್ರಗಾರಿಕೆಯಾಗಿದೆ.

ನೋಟುಗಳ ರದ್ದತಿಯಿಂದಾಗಿ 500 ಮತ್ತು 1000 ರೂ ಮುಖ ಬೆಲೆಯ ಎಲ್ಲ ನೋಟುಗಳೂ ವಾಪಸ್ ಆಗುವುದಿಲ್ಲ. ಒಂದಿಷ್ಟು ಪ್ರಮಾಣದ ಕಪ್ಪು ಹಣ ಸಿಕ್ಕಿ ಬೀಳುತ್ತದೆ. ಆದು, ರಿಸರ್ವ್ ಬ್ಯಾಂಕಿನ ಲಾಭವಾಗುತ್ತದೆ. ರಿಸರ್ವ್ ಬ್ಯಾಂಕ್ ಈ ಲಾಭವನ್ನು ಸರ್ಕಾರಕ್ಕೆ ವರ್ಗಾಯಿಸಬೇಕಾಗುತ್ತದೆ. ಸರ್ಕಾರವು ಈ ಹಣವನ್ನು ಧಾರಾಳವಾಗಿ ಖರ್ಚುಮಾಡಬಹುದು ಎಂಬುದು ಬಿಜೆಪಿಯ ವಾದ.

ಈ ವಾದವು ತಪ್ಪು ಕಲ್ಪನೆಗಳಿಂದ ಕೂಡಿದೆ. ಒಂದು ಸಣ್ಣ ಉದಾಹರಣೆಯ ಮೂಲಕ ಈ ಅಂಶವನ್ನು ಅರ್ಥಮಾಡಿಕೊಳ್ಳಬಹುದು. ಅದೇನೆಂದರೆ, ಸರ್ಕಾರದ ಒಡೆತನದ ಬ್ಯಾಂಕುಗಳು ಕೊಟ್ಟಿರುವ ಸಾಲದಲ್ಲಿ ಒಂದು ಬಹು ದೊಡ್ಡ ಭಾಗ ವಸೂಲಾಗಿಲ್ಲ(ಎನ್‌ಪಿಎ). ಅದರಿಂದಾಗಿ, ಬ್ಯಾಂಕುಗಳು ಬಹಳ ದೊಡ್ಡ ನಷ್ಟಕ್ಕೊಳಗಾಗುತ್ತವೆ. ಆದ್ದರಿಂದ, ಅದು ಸರ್ಕಾರದ ನಷ್ಟವೂ ಆಗುತ್ತದೆ. ಅಂತಹ ಸಂದರ್ಭದಲ್ಲಿ, ಸರ್ಕಾರ ಅನುಭವಿಸಿದ ನಷ್ಟಕ್ಕೆ ಸಮನಾದ ಮೊತ್ತದಷ್ಟು ಕಡಿಮೆ ಖರ್ಚು ಮಾಡಬೇಕಾಗುತ್ತದೆ ಎಂದು ವಾದಿಸಿದಂತಾಗುತ್ತದೆ. ಆದರೆ, ವಾಸ್ತವದಲ್ಲಿ ಹಾಗಾಗುವುದಿಲ್ಲ. ಹಾಗಾಗಿ, ಸರ್ಕಾರದ ವೆಚ್ಚಗಳಿಗೂ ಮತ್ತು ಅದರ ಅಧೀನ ಸಂಸ್ಥೆಗಳ ಲಾಭ ನಷ್ಟಗಳಿಗೂ ಸಂಬಂಧವಿರುವುದಿಲ್ಲ.

ಪ್ರಸಕ್ತ ಸನ್ನಿವೇಶದಲ್ಲಿ ಇರುವ ವ್ಯತ್ಯಾಸವೇನೆಂದರೆ, ಎಷ್ಟು ಮೊತ್ತದ ಕಪ್ಪು ಹಣ ಸಿಕ್ಕಿ ಬೀಳುತ್ತದೆಯೋ ಅಷ್ಟು ಮೊತ್ತದ ಹಣವನ್ನು ಸರ್ಕಾರವು ಶೂನ್ಯ ಬಡ್ಡಿ ದರದಲ್ಲಿ ಸಾಲವಾಗಿ ಪಡೆಯಬಹುದು, ಅಷ್ಟೇ. ಸರ್ಕಾರದ ಅಧೀನ ಸಂಸ್ಥೆಗಳಾದ ರಿಸರ್ವ್ ಬ್ಯಾಂಕ್ ಮತ್ತು ಇತರ ಹಣಕಾಸು ಸಂಸ್ಥೆಗಳು ಒಳಪಟ್ಟಿರುವ ಹಾಲಿ ಕಾನೂನು ಕಟ್ಟಳೆ ಮತ್ತು ಲೆಕ್ಕ ಹಾಕುವ ವಿಧಿ ವಿಧಾನಗಳಡಿಯಲ್ಲಿ ಇದಕ್ಕಿಂತ ಹೆಚ್ಚಿನ ಸೌಲಭ್ಯ ಸರ್ಕಾರಕ್ಕೆ ಲಭ್ಯವಿಲ್ಲ ಎಂಬ ಅಭಿಪ್ರಾಯವನ್ನು ರಿಸರ್ವ್ ಬ್ಯಾಂಕಿನ ಮಾಜಿ ಗವರ್ನರ್‌ಗಳಾದ ಡಾ. ಸಿ. ರಂಗರಾಜನ್ ಮತ್ತು ಡಿ ಸುಬ್ಬಾ ರಾವ್ ವ್ಯಕ್ತಪಡಿಸಿದ್ದಾರೆ.

ಆರ್ಥಿಕ ವಿಷಯಗಳಲ್ಲಿ, ಪಿಂಗಾಣಿ–ಗಾಜಿನ ಅಂಗಡಿಗೆ ನುಗ್ಗಿದ ಗೂಳಿಯ ರೀತಿಯಲ್ಲಿ ವ್ಯವಹರಿಸುವ ಮೋದಿ ಸರ್ಕಾರವು, ಜನರನ್ನು ಓಲೈಸುವ ಸಲುವಾಗಿ, ಒಂದು ವೇಳೆ ಕಾನೂನು ಕಟ್ಟಳೆ ಮತ್ತು ಲೆಕ್ಕ ಹಾಕುವ ವಿಧಿ ವಿಧಾನಗಳನ್ನು ಬದಲಿಸುವ ಇರಾದೆ ಹೊಂದಿದ್ದರೂ, ಅದಕ್ಕೆ ಅಂತಾರಾಷ್ಟ್ರೀಯ ಹಣಕಾಸು ಬಂಡವಾಳವನ್ನು ಎದುರು ಹಾಕಿಕೊಳ್ಳುವ ಧೈರ್ಯವಿಲ್ಲ. ಅಕಸ್ಮಾತ್, ಆ ಧೈರ್ಯವಿದ್ದಿದ್ದರೆ, ನೋಟುಗಳ ರದ್ದತಿಯಿಂದಾಗಿ ಸಂಕಷ್ಟಕ್ಕೊಳಗಾದ ಜನರಿಗೆ ಅಗತ್ಯ ಪರಿಹಾರ ಒದಗಿಸಲು ಬೇಕಾಗುವ ಹಣ ಖರ್ಚುಮಾಡಲು ಮುಂದಾಗುತ್ತಿತ್ತು.

ಜನರಿಗೆ ನೇರವಾಗಿ ಹಣ ವರ್ಗಾಯಿಸುವ ಮೋದಿ ಸರ್ಕಾರದ ಬಯಕೆಯನ್ನು ಅಂತಾರಾಷ್ಟ್ರೀಯ ಹಣ ಕಾಸು ಬಂಡವಾಳವು ಒಪ್ಪುವುದಿಲ್ಲ. ತೆರಿಗೆ ಮತ್ತಿತರ ರಿಯಾಯ್ತಿಗಳು ತನಗೇ ಸಿಗಬೇಕೆಂದು ಅದು ಬಯಸುತ್ತದೆ. ಅಷ್ಟೇ ಅಲ್ಲ, ಕಾನೂನು ಕಟ್ಟಳೆ ಮತ್ತು ಲೆಕ್ಕ ಹಾಕುವ ವಿಧಿ ವಿಧಾನಗಳನ್ನು ಬದಲಿಸುವ ಕ್ರಮವನ್ನೂ ಅದು ಒಪ್ಪುವುದಿಲ್ಲ.

ನಮ್ಮದು ವಿಶ್ವದಲ್ಲೇ ಅತ್ಯಂತ ಉದಾರ ಮನೋಭಾವದ ಆರ್ಥವ್ಯವಸ್ಥೆ ಎಂಬ ಭರವಸೆಯನ್ನು ಮೋದಿ ಸರ್ಕಾರವು ಅಂತಾರಾಷ್ಟ್ರೀಯ ಹಣ ಕಾಸು ಬಂಡವಾಳಗಾರರಿಗೆ ಕೊಟ್ಟಿದೆ. ಅಂ–ದರೆ, ಅವರು ತಮಗೆ ಬೇಕಾದಂತೆ ತಮ್ಮ ಆರ್ಥಿಕ ಚಟುವಟಿಕೆಗಳನ್ನು ನಡೆಸಬಹುದು ಎಂಬುದು ಮತ್ತು ವಿಶ್ವದ ಎಲ್ಲೆಡೆಯಿಂದಲೂ ಹಣ ಈ ದೇಶಕ್ಕೆ ಹರಿಯಬೇಕೆಂದು ಸರ್ಕಾರ ಬಯಸುತ್ತದೆ ಎಂಬುದು ಸ್ಪಷ್ಟವಾಗುತ್ತದೆ. ಅದೇ ಮೋದಿ ಸರ್ಕಾರ ನೋಟುಗಳ ರದ್ದತಿಯ ಮೂಲಕ ಜನ ಸಾಮಾನ್ಯರ ಮೇಲೆ ಹರಿ ಹಾಯ್ದಿದೆ.

ಜನರಿಗೆ ನೇರವಾಗಿ ಹಣ ವರ್ಗಾಯಿಸುವುದು ಸರಕಾರ ದಪ್ರಾಮಾಣಿಕ ಉದ್ದೇಶವಾಗಿದ್ದರೆ, ಅದಕ್ಕಾಗಿ ಅದು ಡಿಸೆಂಬರ್ 30ರ ವರೆಗೆ ಕಾಯುವ ಅಗತ್ಯವೇ ಇಲ್ಲ. ಈಗಲೇ ಮಾಡಬಹುದು.

ಅನಾಣ್ಯೀಕರಣದಿಂದಾಗಿ ಬಡ್ಡಿ ದರ ಇಳಿಯುತ್ತದೆಯೇ?

ನೋಟು ರದ್ದತಿಯಿಂದಾಗಿ ಬ್ಯಾಂಕ್ ಸಾಲದ ಬಡ್ಡಿ ದರಗಳು ಇಳಿಯುತ್ತವೆ ಎಂಬುದಾಗಿ ಆಳುವ ಪಕ್ಷದ ವಕ್ತಾರರು ಮತ್ತೊಂದು ಸುಳ್ಳನ್ನು ಹಬ್ಬಿಸುತ್ತಿದ್ದಾರೆ. ಅನಾಣ್ಯೀಕರಣದಿಂದಾಗಿ ಬ್ಯಾಂಕ್‌ಗಳ ಬಳಿ ಹೇರಳವಾದ ಹಣ ಸಂಗ್ರಹವಾಗಿದೆ. ಆ ಹಣವನ್ನು ಬಳಸಿಕೊಂಡು ಬ್ಯಾಂಕ್‌ಗಳು ಸಾಲ ಕೊಡಲು ಮುಂದಾಗುತ್ತವೆ. ಆಗ, ಬಡ್ಡಿ ದರಗಳು ಇಳಿಯುತ್ತವೆ. ಅದರಿಂದಾಗಿ, ಅರ್ಥವ್ಯವಸ್ಥೆಗೆ ಉತ್ತೇಜನ ದೊರಕುತ್ತದೆ ಎಂಬುದು ಬಿಜೆಪಿ ಯವರ ಮತ್ತೊಂದು ಪ್ರಚಾರ.

ಅನಾಣ್ಯೀಕರಣದಿಂದಾಗಿ ಬ್ಯಾಂಕ್‌ಗಳ ಬಳಿ ಅಪಾರ ಹಣ ಸಂಗ್ರಹವಾಗಿದೆ. ನಿಜ. ಆದರೆ, ಈ ಕಾರಣದಿಂದಾಗಿ ಬಡ್ಡಿ ದರಗಳು ಇಳಿಯುವುದು ಸಾಧ್ಯವಿಲ್ಲ. ಅನೇಕ ಅಂಶಗಳನ್ನು ಪರಿಗಣಿಸಿ, ಪರಿಸ್ಥಿತಿಗನುಗುಣವಾಗಿ, ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿಗಳ ಪರಾಮರ್ಶೆಯ ಮೂಲಕ ಬಡ್ಡಿ ದರಗಳ ಏರಿಕೆ ಅಥವಾ ಇಳಿಕೆ ಮಾಡುತ್ತದೆ. ಇದು ಕಾಲ ಕಾಲಕ್ಕೆ ನಡೆಯುವ ಪ್ರಕ್ರಿಯೆ. ಅನಾಣ್ಯೀಕರಣ ಮತ್ತು ಬಡ್ಡಿ ದರಗಳ ಇಳಿಕೆ, ಇವೆರಡೂ ಬೇರೆ ಬೇರೆ ಅಂಶಗಳು. ಅವೆರಡಕ್ಕೂ ಸಂಬಂಧ ಕಲ್ಪಿಸುವುದು ಅತಾರ್ಕಿಕ ಮಾತ್ರವಲ್ಲ, ಅದೊಂದು ಸುಳ್ಳು ಪ್ರಚಾರವೂ ಹೌದು.

ಅನಾಣ್ಯೀಕರಣದಿಂದಾಗಿ ಬ್ಯಾಂಕ್‌ಗಳ ಬಳಿ ಅಪಾರ ಹಣ ಇರುವುದು ನಿಜ. ಏಕೆಂದರೆ, ಸರ್ಕಾರದ ನಿರಂಕುಶ ಧೋರಣೆಯ ಪರಿಣಾಮವಾಗಿ ಜನ ತಮ್ಮ ಹಣವನ್ನು ತಮ್ಮ ಬಳಿ ಇಟ್ಟುಕೊಳ್ಳಲಾಗದಂತಹ ಪರಿಸ್ಥಿತಿ ಇರುವುದರಿಂದ, ಎಲ್ಲರೂ ತಮ್ಮ ಹಣವನ್ನು ಬ್ಯಾಂಕ್‌ಗಳಲ್ಲಿ ಜಮಾ ಮಾಡಿರುವುದರಿಂದ, ಬ್ಯಾಂಕ್‌ಗಳ ಬಳಿ ಅಪಾರ ಹಣ ಸಂಗ್ರಹವಾಗಿದೆ. ಚಲಾವಣೆಯಲ್ಲಿದ್ದ ಎಲ್ಲ ಹಣವೂ ಈಗ ಬ್ಯಾಂಕ್‌ಗಳ ಬಳಿ ಸೇರಿದೆ. ಆದರೆ, ರದ್ದಾಗಿರುವ ನೋಟುಗಳಿಗೆ ಬದಲಾಗಿ ಅಷ್ಟೇ ಪ್ರಮಾಣದ ಹೊಸ ನೋಟುಗಳು ಚಲಾವಣೆಗೆ ಬಂದಾಗ (ಅದು ಯಾವಾಗ ಎಂದು ಹೇಳಲಾಗದು) ಈ ಪರಿಸ್ಥಿತಿ ಬದಲಾಗುತ್ತದೆ. ಅಂದರೆ, ತಮ್ಮ ಖಾತೆಯಲ್ಲಿರುವ ಹಣದಲ್ಲಿ, ತಮಗೆಷ್ಟು ಬೇಕೋ ಅಷ್ಟು ಹಣವನ್ನು ಹಿಂಪಡೆಯಲು ಸಾಧ್ಯವಾದಾಗ, ಬ್ಯಾಂಕ್‌ಗಳ ಬಳಿ ಇರುವ ಹಣದ ಪ್ರಮಾಣ ಕಡಿಮೆಯಾಗುತ್ತದೆ. ಒಂದು ವೇಳೆ, ಬಿಜೆಪಿ ಮಂದಿ ಹೇಳುವಂತೆ, ಬ್ಯಾಂಕ್‌ಗಳ ಬಳಿ ಭಾರಿ ಪ್ರಮಾಣದ ಹಣ ಇರುತ್ತದೆಂದು ಭಾವಿಸಿಕೊಂಡರೂ ಸಹ, ಬ್ಯಾಂಕ್‌ಗಳ ಬಳಿ ಇರುವ ಅಪಾರ ಹಣಕ್ಕೂ ಮತ್ತು ಬಡ್ಡಿ ದರಗಳಿಗೂ ಸಂಬಂಧವಿಲ್ಲ.

ಕೆಲವು ದಿನಗಳ ಹಿಂದೆ, ರಿಸರ್ವ್ ಬ್ಯಾಂಕ್ ತನ್ನ ಹಣಕಾಸು ನೀತಿಗಳ ಪರಾಮರ್ಶೆಯನ್ನು ಪ್ರಕಟಿಸಿದೆ. ಅದರ ಪ್ರಕಾರ, ಬ್ಯಾಂಕ್‌ಗಳು ತಮ್ಮ ಬಳಿ ಶೇಖರಣೆಯಾಗಿರುವ ಡಿಪಾಸಿಟ್‌ಗಳ ಮೊತ್ತದ ಶೇ.10 ರಷ್ಟು ನಗದು ಮೀಸಲು ಹಣವನ್ನು ರಿಸರ್ವ್ ಬ್ಯಾಂಕ್ ಬಳಿ ಡಿಪಾಸಿಟ್ ಮಾಡಬೇಕಾಗುತ್ತದೆ. ಬ್ಯಾಂಕ್‌ಗಳು ಡಿಪಾಸಿಟ್ ಮಾಡಿದ ಈ ಮೀಸಲು ಹಣಕ್ಕೆ ರಿಸರ್ವ್ ಬ್ಯಾಂಕ್ ಬಡ್ಡಿ ಕೊಡುವುದಿಲ್ಲ. ಏಕೆ–ಂದರೆ, ಈ ಹಣವನ್ನು ಬ್ಯಾಂಕ್‌ಗಳು ತಮ್ಮ ವಾಣಿಜ್ಯ ಉದ್ದೇಶಗಳಿಗೆ ಬಳಸದಂತೆ ತಡೆಯುವುದೇ ಈ ಕ್ರಮದ ಉದ್ದೇಶ. ಇದು ಬಿಜೆಪಿ ಮಂದಿ ಹೇಳುವ ಕತೆಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿದೆ.

ಬಡ್ಡಿ ದರಗಳ ಏರಿಕೆ ಅಥವಾ ಇಳಿಕೆಗಳು ರಿಸರ್ವ್ ಬ್ಯಾಂಕ್‌ನ ಹಣ ಕಾಸು ನೀತಿಗಳಿಗೆ ಒಳಪಟ್ಟಿವೆ. ಸುಲಭ ದರದಲ್ಲಿ ಸಾಲ ದೊರಕಿಸುವ ಉದ್ದೇಶದಿಂದಲೇ ರಿಸರ್ವ್ ಬ್ಯಾಂಕ್ ನಾಳೆಯೇ ತನ್ನ ಹಣಕಾಸು ನೀತಿಗಳನ್ನು ಬದಲಾಯಿಸಬಹುದು. ಅದು ಬೇರೆ ಮಾತು. ಆದ್ದರಿಂದ, ಅನಾಣ್ಯೀಕರಣ, ಬ್ಯಾಂಕ್‌ಗಳ ಬಳಿ ಇರುವ ಅಪಾರ ಹಣ ಮತ್ತು ಬಡ್ಡಿ ದರಗಳ ಇಳಿಕೆಗಳಿಗೆ ಸಂಬಂಧವಿಲ್ಲ.

ಜನರಿಗೆ ಸತ್ಯಾಂಶಗಳನ್ನು ತಿಳಿಸುವುದು ಆಳುವ ಪಕ್ಷದ ಹೊಣೆಗಾರಿಕೆ. ಅದರ ಬದಲು, ಉದ್ದೇಶಪೂರ್ವಕವಾಗಿಯೇ ಸುಳ್ಳು ಪ್ರಚಾರದಲ್ಲಿ ತೊಡಗಿರುವುದು ಒಂದು ಅಪ್ರಜಾಸತ್ತಾತ್ಮಕ ಕ್ರಮ. ಬಿಜೆಪಿಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ?



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಭವಿಷ್ಯ ನಿಧಿ:ಮಾಲಕರಿಗೆ ಸಬ್ಸಿಡಿ,ಕಾರ್ಮಿಕರಿಗೆ ವಂತಿಗೆ ಕೊಡದಿರುವ 'ಆಯ್ಕೆ'!

ಸರಕಾರ ಉದ್ಯೋಗ ನಿರ್ಮಾಣದ ಹೆಸರಿನಲ್ಲಿ ಕಾರ್ಮಿಕರ ಹಿತಗಳನ್ನು ಬದಿಗೊತ್ತಿ ಮಾಲಕರಿಗೆ ಪ್ರಯೋಜನ ಕೊಡುವ ಮತ್ತೊಂದು ಕ್ರಮವನ್ನು ಸದ್ದಿಲ್ಲದೆ ತರುತ್ತಿದೆ ಎಂದು ವರದಿಯಾಗಿದೆ. ಎಷ್ಟು ಸದ್ದಿಲ್ಲದೆ ಎಂದರೆ ಕಾರ್ಮಿಕ ಇಲಾಖೆಗೂ ಇದು ತಿಳಿದಿಲ್ಲವಂತೆ.

ಈ ಹಿಂದೆ ಗಾರ್ಮೆಂಟ್– ಸಿದ್ಧ ಉಡುಪು ವಲಯದಲ್ಲಿ ಭವಿಷ್ಯ ನಿಧಿಗೆ ಮಾಲಕರ ಪರವಾಗಿ ಸರಕಾರವೇ 8.33% ವಂತಿಗೆ ನೀಡುವುದಾಗಿ ಪ್ರಕಟಿಸಿತ್ತು. ಈಗ ಅದನ್ನು 12% ಕ್ಕೆ ಏರಿಸಲು ನಿರ್ಧರಿಸಲಾಗಿದೆಯಂತೆ. ಇದರಿಂದ ಗಾರ್ಮೆಂಟ್ ಮಾಲಕರಿಗೆ ಉತ್ತೇಜನೆ ದೊರೆತು ಹೆಚ್ಚಿನ ಉದ್ಯೋಗಾವಕಾಶಗಳು ನಿರ್ಮಾಣವಾಗುತ್ತವೆ ಎಂಬುದು ಸರಕಾರದ ತರ್ಕ.

ಅದೇ ವೇಳೆಗೆ 15,000ರೂ.ಗಿಂತ ಕಡಿಮೆ ಸಂಬಳ ಪಡೆಯುವ ಕಾರ್ಮಿಕರು ಭವಿಷ್ಯನಿಧಿಗೆ ವಂತಿಗೆ ನೀಡಬೇಕಾಗಿಲ್ಲ ಎನ್ನುವ ಬಗ್ಗೆಯೂ ಯೋಚಿಸಲಾಗುತ್ತಿದೆಯಂತೆ.. ಅಂದರೆ ಮಾಲಕರ ಪರವಾಗಿ ಸರಕಾರವೇ ಕೊಡುವಂತೆ ಈ ಕಾರ್ಮಿಕರ ಪರವಾಗಿಯೂ ಕೊಡುತ್ತದೆ ಎಂದೇನೂ ಅರ್ಥವಲ್ಲ.

ಕಾರ್ಮಿಕ ಸಂಘಗಳು ಈ ಕ್ರಮವನ್ನು ಬಲವಾಗಿ ವಿರೋಧಿಸಿವೆ. ಅಂತಿಮವಾಗಿ ಕಾರ್ಮಿಕರಿಗೆ ಈಗ ಸ್ವಲ್ಪ ಪ್ರಮಾಣದಲ್ಲಾದರೂ ಲಭ್ಯವಿರುವ ಸಾಮಾಜಿಕ ಭದ್ರತಾ ಯೋಜನೆಗಳನ್ನು ಕಳಚಿ ಹಾಕುವುದೇ ಸರಕಾರದ ಗುರಿ ಇದ್ದಂತೆ ಕಾಣುತ್ತದೆ ಎಂದು ಕಾರ್ಮಿಕ ಸಂಘಗಳು ಅಭಿಪ್ರಾಯ ಪಡುತ್ತಿವೆ.

ಭವಿಷ್ಯ ನಿಧಿ ಮತ್ತು ಕಾರ್ಮಿಕ ಕಾನೂನುಗಳಿಗೆ ತಿದ್ದುಪಡಿಗಳನ್ನು ಕಾರ್ಮಿಕ ಇಲಾಖೆಯ ಗಮನಕ್ಕೆ ತರದೆಯೇ ಇತ್ತೀಚೆಗೆ ಕೆಲವು ಸಮಯದಿಂದ ಮಾಡಲಾಗುತ್ತಿದೆ ಎಂದು ಮಾಧ್ಯಮ ವರದಿಗಳು ತಿಳಿಸುತ್ತವೆ. ತ್ರಿಪಕ್ಷೀಯ ಸಮಿತಿಗಳಲ್ಲಿ ಸ್ವತಃ ಕಾರ್ಮಿಕ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಕೈಗೊಂಡ ನಿರ್ಣಯಗಳನ್ನೂ ಹಣಕಾಸು ಮಂತ್ರಾಲಯ ಬದಲಿಸುತ್ತಿದೆ. ಇವನ್ನು ಸರಿಪಡಿಸಲು ಮತ್ತೆ ಕಾರ್ಮಿಕ ಸಂಘಗಳು ಹೋರಾಟ ನಡೆಸಬೇಕಾಗುತ್ತದೆ.

ಕಾರ್ಮಿಕರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಸರಕಾರ ಈ ರೀತಿಯಾಗಿ ಏಕಪಕ್ಷೀಯವಾಗಿ ನಿರ್ಧರಿಸುವುದನ್ನು ಸಿಐಟಿಯು ಬಲವಾಗಿ ಪ್ರತಿಭಟಿಸಿದೆ, ಈ ಎಲ್ಲ ನಿರ್ಧಾರಗಳನ್ನು ಹಿಂತೆ–ಗೆದು ಕೊಳ್ಳಬೇಕು ಮತ್ತು ಎಲ್ಲ ಕಾರ್ಮಿಕ ವಿಷಯಗಳಲ್ಲೂ ಕಾರ್ಮಿಕ ಸಂಘಗಳೊಂದಿಗೆ ಸಮಾಲೋಚನೆ ನಡೆಸಬೇಕು ಎಂದು ಆಗ್ರಹಿಸಿದೆ.



ಭ್ರಷ್ಟಾಚಾರ ನಿಗ್ರಹಕ್ಕೆ ಕೇರಳ ಸರಕಾರದಿಂದ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ

ಭ್ರಷ್ಟಾಚಾರದ ವಿರುದ್ಧದ ಹೋರಾಟದಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಕಾರಣದಿಂದ ಕೇರಳ ಸರಕಾರ ಎರಡು ಹೊಸ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡಿದೆ, ಇದನ್ನು ಭ್ರಷ್ಟಾಚಾರ ನಡೆದುದರ ಬಗ್ಗೆ ಮಾಹಿತಿ ನೀಡಲು ಉಪಯೋಗಿಸಬಹುದು.

ಅಂತರಾಷ್ಟ್ರೀಯ ಭ್ರಷ್ಟಾಚಾರ ವಿರೋಧೀ ದಿನಾಚರಣೆಯ ಕಾರ್ಯಕ್ರಮ ಸಂಧರ್ಭದಲ್ಲಿ ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಈ ಅಪ್ಲಿಕೇಶನ್‌ಗಳನ್ನು ಬಿಡುಗಡೆ ಮಾಡಿದರು.

ಈ ಅಪ್ಲಿಕೇಶನ್‌ಗಳ ಮೂಲಕ ಭ್ರಷ್ಟಾಚಾರದಲ್ಲಿ ನಿರತರಾದವರ, ವೀಡಿಯೋ, ಧ್ವನಿ ಮುದ್ರಣಗಳನ್ನು ಕಳುಹಿಸಬಹುದು, ಗೂಗಲ್ ಪ್ಲೇ ನಲ್ಲಿ ಇವುಗಳನ್ನು ಡೌನ್‌ಲೋಡ್ ಮಾಡಿಕೊಂಡು, ತಮ್ಮ ಅಭಿಪ್ರಾಯಗಳನ್ನೂ ಅದರಲ್ಲಿ ತಿಳಿಸಬಹುದು ಎಂದರು. ಈ ಅಪ್ಲಿಕೇಶನ್‌ಗಳನ್ನು ಭ್ರಷ್ಟಾಚಾರ-ವಿರೋಧಿ ಸಂಸ್ಥೆ ಹಾಗೂ ರಾಜ್ಯ ಜಾಗೃತ ದಳ (ವಿಜಿಲೆನ್ಸ್) ದವರು ತಮ್ಮ 'ಭ್ರಷ್ಟಾಚಾರ ವಿರುದ್ಧ ನಡೆಸುತ್ತಿರುವ ಆವಿಶ್ಕಾರೀ ಕ್ರಮದ ಭಾಗವಾಗಿ ನಿರ್ಮಿಸಿದ್ದಾರೆ ಎಂದರು.



ಒಂದು ಭ್ರಷ್ಟಾಚಾರರಹಿತ ಮತ್ತು ಸುಸ್ಥಿರ ಅಭಿವೃದ್ಧಿಯುಕ್ತ ರಾಜ್ಯ ನಿರ್ಮಾಣದ ಗುರಿಯನ್ನು ಸರಕಾರ ಹೊಂದಿದೆ. 'ಭ್ರಷ್ಟಾಚಾರಕ್ಕೆ ಶೂನ್ಯ ಸಹನೆಯ' ನೀತಿಯ ಭಾಗವಾಗಿ ಹಲವಾರು ಕಾರ್ಯಕ್ರಮಗಳನ್ನು ಸರಕಾರೀ ಮತ್ತು ಅರೆ-ಸರಕಾರೀ ಸಂಸ್ಥೆಗಳಲ್ಲಿ ಸರಕಾರ ಆರಂಭಿಸುತ್ತಿದೆ. ಭ್ರಷ್ಟಾಚಾರದ ವಿರುದ್ಧ ಹೋರಾಡುವವರ ಜತೆಗೆ ಸರಕಾರ ಸದಾ ಇರುವುದಾಗಿ ಆಶ್ವಾಸನೆ ನೀಡಿದ ಅವರು ಸಂಭಂಧಪಟ್ಟ ಯಾವುದೇ ಘಟನೆಯ ಬಗ್ಗೆ ಜಾಗೃತ ದಳ ಕಾರ್ಯಾಚರಣೆ ಮಾಡಿಯೇ ಮಾಡುವುದು, ಹಾಗೆಂದ ಮಾತ್ರಕ್ಕೆ ತನಿಖೆಯ ಆರಂಭದಲ್ಲಿಯೇ ಯಾವುದೇ ವ್ಯಕ್ತಿಯ ಬಗ್ಗೆ ಊಹಾಪೋಹವನ್ನು ಹರಿಬಿಡುವುದು, ಬೆಂಬಿಡದೇ ಹಿಂಸಿಸುವುದು ಸೂಕ್ತವಲ್ಲ ಎಂದರು.

ಪರಿಸರ ಮತ್ತು ಶಿಕ್ಷಣ ಕ್ಷೇತ್ರದಲ್ಲೂ ನಡೆಯುತ್ತಿರುವ ಭ್ರಷ್ಟಾಚಾರ ತಡೆಗಟ್ಟಲು ಕ್ರಮ ಜರುಗಿಸಲಾಗುವದೆಂದು ಇದೇ ಸಂದರ್ಭದಲ್ಲಿ ಅವರು ನುಡಿದರು.

ಕಾಶ್ಮೀರ: ತಾತ್ಕಾಲಿಕ ಪರಿಹಾರದ ಬದಲು ಅಕ್ಕಿ, ಹಿಟ್ಟು ಮತ್ತು ಮರದ ಸರಕುಗಳ ಬೆಲೆ ಏರಿಕೆ

ಅಕ್ಕಿ, ಹಿಟ್ಟು ಮತ್ತು ಮರದ ಸರಕುಗಳ ಬೆಲೆ ಏರಿಕೆ ಮಾಡಿರುವ ಸರಕಾರದ ಜನವಿರೋಧೀ ನಿರ್ಧಾರದ ಬಗ್ಗೆ ಸಿಪಿಐ(ಎಂ) ಮುಖಂಡ ಮೊಹಮ್ಮದ್ ಯೂಸುಫ್ ತಾರಿಗಮಿ ಆತಂಕ ವ್ಯಕ್ತಪಡಿಸಿದ್ದಾರೆ. ಇದರಿಂದ ಈಗಾಗಲೇ ಅಸಮಾಧಾನ ಹೊಂದಿರುವ ಕಣಿವೆ ರಾಜ್ಯದ ಜನ ಇನ್ನಷ್ಟು ಸಂಕಷ್ಟಕ್ಕೆ ಈಡಾಗಲಿದ್ದಾರೆ, ಸರಕಾರ ತಾತ್ಕಾಲಿಕ ಪರಿಹಾರವಾದರೂ ಒದಗಿಸುವದೆಂಬ ನಿರೀಕ್ಷೆಯಲ್ಲಿದ್ದ ರಾಜ್ಯದ ಜನರಿಗೆ ' ಇನ್ನಷ್ಟು ಸಮಸ್ಯೆಗಳನ್ನೇ ತಂದಿಟ್ಟದ್ದು ನಿರಾಸೆ ತಂದಿದೆ ಎಂದ ಅವರು, ಮೊದಲಿಗೆ ಅಕ್ಕಿ ಮತ್ತು ಸಕ್ಕರೆ ಮಿತಿಯನ್ನು ಇಳಿಸಿ ಈಗ ಬೆಲೆಏರಿಕೆಯನ್ನೂ ಮಾಡಿದೆ, ಚಳಿಗಾಲದಲ್ಲಿ ಇಲ್ಲಿ ಕಟ್ಟಿಗೆಯ ಅವಶ್ಯಕತೆ ಹೆಚ್ಚಿರುತ್ತದೆ, ಅದೇ ಸಂದರ್ಭದಲ್ಲಿ ಸರಕಾರ ಅವುಗಳ ಬೆಲೆ ಏರಿಸಿದೆ ಎಂಬ ಸಂಗತಿಯತ್ತ ಅವರು ಗಮನ ಸೆಳೆದಿದ್ದಾರೆ.

ಉಪಕುಲಪತಿಗಳೊಂದಿಗೆ ಅಸಭ್ಯ ವರ್ತನೆ

ವಿಶ್ವವಿದ್ಯಾಲಯದ ಕುಲಪತಿಗಳ ಬಗ್ಗೆ ಒಬ್ಬ ಪೋಲಿಸ್ ಅಧಿಕಾರಿ ಅವಮಾನಕರವಾಗಿ ವರ್ತಿಸಿದ್ದಕ್ಕೆ ತಾರಿಗಮಿ ಅಸಂತುಷ್ಟತೆ ವ್ಯಕ್ತಪಡಿಸಿ, ಪೋಲೀಸ್ ಅಧಿಕಾರಿಯೊಬ್ಬರ ಈ ರೀತಿಯ ವರ್ತನೆ ಅಸಭ್ಯ ಎಂದಿದ್ದಾರೆ.

ಇದೊಂದು ಪ್ರಚಾರ ತಂತ್ರವಷ್ಟೇ, ಆ ಪೋಲೀಸ್ ಅಧಿಕಾರಿ ತನ್ನ ಕರ್ತವ್ಯಕ್ಕೆ ಬದ್ಧನಾಗಿರುವದಕ್ಕಿಂತ ಹೆಚ್ಚಾಗಿ ವೀಡಿಯೋ ಮಾಡುವದರಲ್ಲೇ ಹೆಚ್ಚು ಆಸಕ್ತಿ ಇದ್ದಂತೆ ತೋರುತ್ತಿದೆ. ಆ ಅಧಿಕಾರಿ ಕುಲಪತಿಗಳಿಗೆ ಗೌರವ ಸೂಚಿಸುವ ಮತ್ತು ಶಿಷ್ಟಾಚಾರ ಪಾಲಿಸುವಲ್ಲಿ ವಿಫಲರಾಗಿದ್ದಾರೆ. ಒಂದು ವಾಕ್ಯದಲ್ಲಿ ಈ ಘಟನೆಯ ಖಂಡನೆ ಸಾಕಾಗುವದಿಲ್ಲ ಎಂದು ಅಭಿಪ್ರಾಯಪಟ್ಟರು.

ಪೋಲೀಸ್ ಒಂದು ಅತಿದೊಡ್ಡ ಗೌರವಾನ್ವಿತ ಸಂಸ್ಥೆ ಆದರೆ ಕೆಲ ಅಧಿಕಾರಿಗಳ ನಿಷ್ಠಾಕೊರತೆಯಿಂದಾಗಿ ವಿಶ್ವಾಸ ಕಳೆದುಕೊಳ್ಳುತ್ತಿದೆ. ಮುಖ್ಯಮಂತ್ರಿ ಮೆಹಬೂಬಾ ಮುಫ್ತಿ ಮಧ್ಯಪ್ರವೇಶಿಸಿ ಹಲವಾರು ಶಿಕ್ಷಕ ಮತ್ತು ವಿದ್ಯಾರ್ಥಿ ಬಳಗದ ಭಾವನೆಗೆ ಘಾಸಿಮಾಡಿರುವ ಈ ಘಟನೆಯನ್ನು ಪರಿಶೀಲಿಸಲು ಆಗ್ರಹಿಸಿದರು.

ತಪ್ಪಿತಸ್ಥ ಅಧಿಕಾರಿಯ ವಿರುದ್ಧ ತನಿಖೆ ನಡೆಸಿ ಕ್ರಮ ಜರುಗಿಸುವ ಕಾರ್ಯ ಆರಂಭವಾಗುವದೆಂಬ ಆಶಯವನ್ನು ಅವರು ವ್ಯಕ್ತಪಡಿಸಿದರು.

ತಮಿಳುನಾಡು: ಜನರ ಶಕ್ತಿಗೆ ವಿಜಯ

29 ನವೆಂಬರ್‌ದಂದು, ಕೊಯಂಬತ್ತೂರ್ ಬಳಿ ಸಾವಿರಾರು ಜನರು ನ್ಯಾಯಯುತವಾಗಿ ತಮಗೆ ಸೇರಬೇಕಾದ ಭೂಮಿಯನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.

ಮಿಗುತಾಯ ಭೂಮಿ ಕಾಯಿದೆಯಡಿ 44 ಎಕರೆ ಭೂಮಿಯನ್ನು ದಲಿತರು ಮತ್ತು ಆದಿವಾಸಿಗಳಿಗೆ ಹಂಚಲಾಗಿತ್ತು, ಆದರೆ ಕೆಲ ಸರಕಾರೀ ಅಧಿಕಾರಿಗಳ ಸಹಾಯದಿಂದ ಈ ಭೂಮಿ ಅತಿಕ್ರಮಣವಾಯಿತು.

ಆ ಭೂಮಿಯನ್ನು ಆಳುವ ಮಂದಿಗಳಿಗೆ ಆಪ್ತರಾಗಿರುವ ಸ್ವಾಮಿ ಜಗ್ಗಿ ವಾಸುದೇವ್ ನೇತೃತ್ವದಲ್ಲಿ ನಡೆಯುತ್ತಿರುವ ಈಶಾ ಫೌಂಡೇಶನ್ ಅವರು ಕಾನೂನುಬಾಹಿರವಾಗಿ ಆಕ್ರಮಿಸಿಕೊಂಡಿದ್ದರು. ಹದಿನೈದು ದಿನಗಳಿಗೊಮ್ಮೆಯಾದರೂ ಕೇಂದ್ರದ ಮಂತ್ರಿಯೊಬ್ಬರು ಇಲ್ಲಿ ಭೇಟಿ ನೀಡುತ್ತಾರೆ, ಸಾರ್ವಜನಿಕ ವಲಯದ ಸಂಸ್ಥೆಗಳು ಸಾರ್ವಜನಿಕ ಹಣವನ್ನು ಈ ಫೌಂಡೇಶನ್‌ಗೆ ಕೊಡುತ್ತಿದ್ದಾರೆ. ಅವರು ಆಕ್ರಮಿಸಿಕೊಂಡ ಬಡವರ ಭೂಮಿ ಕೊಯಂಬತ್ತೂರಿನ ಹೊರವಲಯದಲ್ಲಿರುವ ವೆಲ್ಲಿಮಗಿರಿ ಬೆಟ್ಟದಲ್ಲಿದೆ.

ರಾಜೇಶ ಕುಮಾರ್ ಎಂಬ ಸಾಮಾಜಿಕ ಕಾರ್ಯಕರ್ತರೋರ್ವರು ಈ ಅತಿಕ್ರಮಣದ ಸಮಸ್ಯೆಯನ್ನು ಬೆಳಕಿಗೆ ತಂದುದರ ಫಲವಾಗಿ ನಿಲೆಯಾರ್ ಅಣೆಕಟ್ಟು ಬಳಿ ನಿಗೂಢವಾಗಿ ಸಾವನ್ನಪ್ಪಿದ್ದಾರೆ, ಅವರನ್ನು ಕೊಲೆ ಮಾಡಿರಬಹುದಾದ ಬಲವಾದ ಸಂಶಯವಿದೆ. ಶಿವ ಎನ್ನುವ ಇನ್ನೊಬ್ಬ ಸಾಮಾಜಿಕ ಕಾರ್ಯಕರ್ತನನ್ನು ಸುಳ್ಳು ಮೊಕದ್ದಮ್ಮೆ ದಾಖಲಿಸಿ ಜೈಲಿಗೆ ತಳ್ಳಲಾಗಿದೆ. ವಿರೋಧ-' ತಣ್ಣಗಾಗುತ್ತಿದ್ದಂತೆ ಫೌಂಡೇಶನ್‌ನವರು ಆಕ್ರಮಿತ ಭೂಮಿಯ ಸುತ್ತಲೂ ಬೇಲಿ ಹಾಕಿದ್ದಾರೆ.

ಆ ಭಾಗದ ಜನರೆಲ್ಲ ಸೇರಿ ಬೇಲಿ ನಿರ್ಮಾಣ ಕಾರ್ಯವನ್ನು ನಿಲ್ಲಿಸಿದರಾದರೂ ಅದನ್ನು ಕಟ್ಟಲು ನಿರ್ಮಿಸಿದ್ದ ಆಧಾರ ಕಂಭಗಳು ಹಾಗೇ ಉಳಿದಿದೆ. ಸರಕಾರ ಮತ್ತು ಜಿಲ್ಲಾಡಳಿತ ಯಾವುದೇ ಕ್ರಮವನ್ನು ತೆಗೆದುಕೊಳ್ಳಲು ಮುಂದಾಗಲಿಲ್ಲ. ದಲಿತರು ಮತ್ತು ಬುಡಕಟ್ಟಿನವರಿಗೆ ಹಂಚಲಾಗಿದ್ದ ಭೂಮಿ ಅವರ ನ್ಯಾಯಯುತ ಹಕ್ಕು ಅದನ್ನು ಉಳಿಸಿಕೊಳ್ಳಲು ಅವರು ಹೋರಾಟ ಮುಂದುವರೆಸಿದರು.

ಈ ಸಂಗತಿಯನ್ನು ಕೆಲವು ಎನ್‌ಜಿಓಗಳು ಸಿಪಿಐ(ಎಂ), ಮಹಿಳಾ ಸಂಘಟನೆ, ರೈತ ಸಂಘ ಮತ್ತು ತಮಿಳುನಾಡು ಅಸ್ಪೃಶ್ಯತಾ ನಿರ್ಮೂಲನ ರಂಗ(ಟಿಎನ್‌ಯುಇಎಫ್) ಗಮನಕ್ಕೆ ತಂದರು. ಇಲ್ಲಿ ಮಧ್ಯಪ್ರವೇಶ ಅಗತ್ಯ ಎಂದು ಮನಗಂಡು ಈ ಸಂಘಟನೆಗಳ ಮುಖಂಡರು ಸರಕಾರೀ ಅಧಿಕಾರಿಗಳಿಗೆ ಮನವಿ ಸಲ್ಲಿಸಿದರು. ಅಧಿಕಾರಿಗಳು ಸುಮ್ಮನಿದ್ದಾಗ ಚಳುವಳಿಗಳನ್ನು ನಡೆಸಲು ನಿರ್ಧರಿಸಲಾಯಿತು.

ಆಗಸ್ಟ್ 17 ರಂದು ಸಿಪಿಐ(ಎಂ) ಕೇಂದ್ರ ಸಮಿತಿ ಸದಸ್ಯೆ ಯು.ವಾಸುಕಿಯವರ ನೇತೃತ್ವದಲ್ಲಿ ಮತಪ್ರದರ್ಶನ ನಡೆಯಿತು. ಅಕ್ಟೋಬರ್ 10ರಂದು ಮತ್ತೊಂದು ಮತಪ್ರದರ್ಶನ ನಡೆಸಲಾಯಿತು. ಇದರಲ್ಲಿ ಈ ಮೇಲಿನ ಸಂಘಟನೆಗಳಲ್ಲದೆ ಇನ್ನೂ ಕೆಲವು ಸಂಘಟನೆಗಳು ಭಾಗವಹಿಸಿದವು. ಅಕ್ಟೋಬರ್ 21ರಂದು ಅಲಂದುರೈನಲ್ಲಿ ಪಿಕೆಟಿಂಗ್ ನಡೆಸಲಾಯಿತು.

ಆಡಳಿದವರು ಇವೆಲ್ಲವನ್ನೂ ಉಪೇಕ್ಷಿಸಿದಾಗ ನವಂಬರ್ 18ರಂದು ಟಿಎನ್‌ಯುಇಎಫ್ ಅಧ್ಯಕ್ಷ ಪಿ.ಸಂಪತ್ ಅಧ್ಯಕ್ಷತೆಯಲ್ಲಿ ಒಂದು ಸಭೆ ನಡೆಸಲಾಯಿತು. ಹಲವು ಸಾಮೂಹಿಕ ಸಂಘಟನೆಗಳು ಮತ್ತು ದಲಿತ ಸಂಘಟನೆಗಳು ಇದರಲ್ಲಿ ಭಾಗವಹಿಸಿದವು. ಈ ಸಭೆಯಲ್ಲಿಯೇ ನವೆಂಬರ್29 ರಂದು ನೇರ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಯಿತು. ಅದರಂತೆ ಆ ದಿನ ಸಹಸ್ರಾರು ಜನ ಮೆರವಣಿಗೆ ನಡೆಸಿ ತಮ್ಮ ಭೂಮಿಯನ್ನು ಮರಳಿ ಪಡೆಯುವ ನೇರ ಕ್ರಮಕ್ಕೆ ಮುಂದಾದರು.

ಮಧ್ಯಪ್ರದೇಶದ ಆಡಳಿತ ಮುಖ್ಯಮಂತ್ರಿಗಳ ಕೈಯಲ್ಲಿದೆಯೋ ಅಥವ ಆರೆಸ್ಸೆಸ್‌ನವರ ಕೈಯಲ್ಲೋ -ಸಿಪಿಐ(ಎಂ) ಪ್ರಶ್ನೆ

ಡಿಸೆಂಬರ್ 10 ರಂದು ಭೋಪಾಲಕ್ಕೆ ಬಂದಿದ್ದ ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್‌ರನ್ನು ನಗರದಲ್ಲಿರುವ ಕೇರಳೀಯರು ಸನ್ಮಾನಿಸಲು ಒಂದು ಸಮಾರಂಭಕ್ಕೆ ಆಹ್ವಾನಿಸಿದ್ದರು. ಆದರೆ ಅಲ್ಲಿಗೆ ಹೊರಟ ಮುಖ್ಯಮಂತ್ರಿಗಳನ್ನು ಅಲ್ಲಿಯ ಪೋಲೀಸ್ ಅಧಿಕಾರಿಗಳು ತಡೆದರು, ಅಲ್ಲಿಗೆ ಹೋಗಬೇಡಿ, ಆರೆಸ್ಸೆಸ್‌ನ ಕೆಲವರು ಅಲ್ಲಿ ಪ್ರತಿಭಟನೆ ನಡೆಸಲಿದ್ದಾರೆ, ನಿಮಗೆ ರಕ್ಷಣೆ ಕೊಡಲು ನಮಗೆ ಸಾಧ್ಯವಿಲ್ಲ ಎಂದರಂತೆ. ಇದರಿಂದ ಕುಪಿತರಾದ ವಿಜಯನ್ ಸಮಾರಂಭಕ್ಕೆ ಹೋಗದೆ ಹಿಂದಿರುಗಿದರು.

ಬೇರೆ ರಾಜ್ಯದ ಮುಖ್ಯಮಂತ್ರಿಗಳು ಬಂದಾಗ, ತಮ್ಮ ರಾಜ್ಯದಿಂದ ಬಂದು ನೆಲೆಸಿದವರನ್ನು ಭೇಟಿ ಮಾಡುವ ಸಾಮಾನ್ಯ ಸಮಾರಂಭಕ್ಕೂ ಹೋಗಬೇಡಿ ಎನ್ನುವುದು ಆ ರಾಜ್ಯದ ಕಾನೂನು ವ್ಯವಸ್ಥೆ ಆ ರಾಜ್ಯದ ಪೋಲೀಸರ ಕೈಯಲ್ಲಿಲ್ಲ, ಕೆಲವು ಕಿಡಿಗೇಡಿಗಳ ಕೈಯಲ್ಲಿದೆ ಎಂಬುದನ್ನು ತೋರಿಸುತ್ತದೆ ಎಂದು ಸಿಪಿಐ(ಎಂ) ಮಧ್ಯಪ್ರದೇಶ ರಾಜ್ಯಸಮಿತಿ ಬಲವಾಗಿ ಖಂಡಿಸಿದೆ.

ಆ ನಂತರ ರಾಜ್ಯ ಮುಖ್ಯಮಂತ್ರಿಗಳು ಈ ಬಗ್ಗೆ ವಿಷಾದ ವ್ಯಕ್ತಪಡಿಸುತ್ತ ಕ್ಷಮೆ ಕೇಳಿರುವುದಾಗಿ ವರದಿಯಾಗಿದೆ. ಅಂದರೆ ಮಧ್ಯಪ್ರದೇಶದ ಆಡಳಿತ ಅಲ್ಲಿಯ ಮುಖ್ಯಮಂತ್ರಿಗಳ ಕೈಯಲ್ಲಿದೆಯೋ ಅಥವ ಆರೆಸ್ಸೆಸ್‌ನವರ ಕೈಯಲ್ಲೋ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಕೇಳಿದೆ.

ಪೊಲಿಟ್‌ಬ್ಯುರೊ ಖಂಡನೆ

ಮಧ್ಯಪ್ರದೇಶ ಪೋಲೀಸ್ ಮತ್ತು ಆಡಳಿತದ ಈ ವರ್ತನೆಯನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಬಲವಾಗಿ ಖಂಡಿಸಿದೆ.

ಈ ಘಟನೆ ಮಧ್ಯಪ್ರದೇಶ ಸರಕಾರ ಆರೆಸ್ಸೆಸ್ ಫರ್ಮಾನುಗಳಂತೆ ಕೆಲಸ ಮಾಡುತ್ತಿದೆ ಎಂಬುದನ್ನು ತೋರಿಸುತ್ತದಲ್ಲದೆ, ತನ್ನ ರಾಜಧಾನಿಯಲ್ಲೇ ಬೇ-ರೊಂದು ರಾಜ್ಯದ ಮುಖ್ಯಮಂತ್ರಿಗಳಿಗೆ ರಕ್ಷಣೆ ಕೊಡಲಾರದ ಅಲ್ಲಿನ ಕಾನೂನು ವ್ಯವಸ್ಥೆಯ ಬಗ್ಗೆಯೂ ಸಾಕಷ್ಟು ಹೇಳುತ್ತದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಟಿಪ್ಪಣಿ ಮಾಡಿದೆ.

ನಿತೀಶ್ ಕುಮಾರ್ ಸರಕಾರದ ಒಂದು ವರ್ಷ: ಭರವಸೆಗಳು ಮತ್ತು ವಾಸ್ತವದ ನಡುವೆ ಕಂದರ

ಕಳೆದ ನವೆಂಬರ್‌ನಲ್ಲಿ ಅಧಿಕಾರ ವಹಿಸಿಕೊಂಡ ನಿತೀಶ್‌ಕುಮಾರ್ ನೇತೃತ್ವದ ಸರಕಾರ ಒಂದು ವರ್ಷದ ತನ್ನ ಪ್ರಗತಿಯ ವರದಿಯನ್ನು ಪ್ರಕಟಿಸಿದೆ. ಎಲ್ಲ ಸರಕಾರಿ ನೌಕರಿಯಲ್ಲಿ ಮಹಿಳೆಯರಿಗೆ 35% ಮೀಸಲಾತಿ, ಗಂಗಾ ನದಿಮೇಲೆ ಕಾಚಿದರ್ಗಾ-ಬಂಡಿಪುರದಲ್ಲಿ 6 ಮಾರ್ಗದ ಸೇತುವೆ, 10ನೇ ತರಗತಿ ವಿದ್ಯಾರ್ಥಿಗಳಿಗಾಗಿ ಮುಕ್ತ ಮತ್ತು ನ್ಯಾಯಯುತ ಪರೀಕ್ಷೆ ಮುಂತಾದ ಸಾಧನೆಗಳ ಪಟ್ಟಿ ಇದರಲ್ಲಿದೆ.ವಿಧಾನ ಸಭೆ ಚುನಾವಣೆ ಸಂದರ್ಭದಲ್ಲಿ, ಕುಮಾರ್ ಅವರ ಮಹಾಮೈತ್ರಿ ಜೆಡಿಯು ಮತ್ತು ಆರ್‌ಜೆಡಿಯೊಂದಿಗೆ ಮಾಡಿದ ಏಳು ಪ್ರಮುಖ ಆಶ್ವಾಸನೆಗಳ ಕಾರ್ಯಾರಂಭ ಈಗಾಗಲೇ ಆಗಿದೆ ಎಂಬುದು ಅವರ ಹೇಳಿಕೆ. ತಡೆರಹಿತ ವಿದ್ಯುತ್ ಪೂರೈಕೆ, ಪ್ರತೀ ಮನೆಗೂ ನೀರು, ಶೌಚಾಲಯ, ಯುವಕರಿಗೆ ಕುಶಲ ತರಬೇತಿ, ಪ್ರತೀಗುಡಿಸಲಿಗೂ ತಲುಪುವಂತೆ ರೋಡ್ ಇವೇ ಕೆಲವು ಅವರ ಆಶ್ವಾಸನೆಗಳಾಗಿದ್ದವು.

ಆದರೆ ಈ ಪ್ರಗತಿ ಪತ್ರದಲ್ಲಿ ಬಿಹಾರ ರಾಜ್ಯದ ಅರ್ಥವ್ಯವಸ್ಥೆಯ ಬೆನ್ನೆಲುಬಾದ ಕೃಷೀ ವಲಯ, ಶಿಕ್ಷಣ, ಆರೋಗ್ಯ ಮತ್ತು ಪಡಿತರ ವ್ಯವಸ್ಥೆ, ಉದ್ಯೋಗ ಖಾತ್ರಿಯೋಜನೆಯಂತಹ ಸಾಮಾಜಿಕ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಏನೂ ಮಾತಿಲ್ಲ. ಎಗ್ಗಿಲ್ಲದಂತೆ ಬೆಳೆಯುತ್ತಿರುವ ಅಸಂಘಟಿತ ವಲಯ ಮತ್ತವರ ಮೇಲಿನ ಅಮಾನವೀಯ ಶೋಷಣೆಯು ಕಳೆದ 11 ವರ್ಷಗಳಿಂದ ಅಧಿಕಾರದಲ್ಲಿರುವ ಕುಮಾರ್ ನೇತೃತ್ವದ ಸರಕಾರ ಯಾರ ಪರವಾದ ಅಭಿವೃದ್ಧಿ ಪಥವನ್ನು ಅನುಸರಿಸುತ್ತಿದೆ ಎಂದು ಸ್ಪಷ್ಟಪಡಿಸುತ್ತದೆ.

ಹೇಳಿಕೊಳ್ಳಲು ಲೋಹಿಯಾವಾದಿ ಸಮಾಜವಾದಿ ಯಾದರೂ ನಿತಿಶ್ ಕುಮಾರ್ ಭೂಸುಧಾರಣೆಯ ಪ್ರಾಜೆಕ್ಟನ್ನು ಮರೆತೇ ಬಿಟ್ಟಿದ್ದಾರೆ, ಈ ಕುರಿತ ಬಂದೋಪಾಧ್ಯಾಯ ಆಯೋಗದ ವರದಿ ಕಸದ ಬುಟ್ಟಿ ಸೇರಿದೆ.

ರಾಜ್ಯದಲ್ಲಿ ಬಿಜೆಪಿಯೂ ಒಂದು ಪ್ರಗತಿ ಪತ್ರ ತಯಾರಿಸಿದೆ, ನಿತಿಶ ಕುಮಾರ್ ಜೊತೆಗೆ ಮೈತ್ರಿಹೊಂದಿ ಸರಕಾರ ನಡೆಸುತ್ತಿದ್ದಾಗ ರಾಜ್ಯ ಅಭಿವೃದ್ಧಿ ಹೊಂದಿತ್ತು ಈಗ ಅಧೋಗತಿ ಕಾಣುತ್ತಿದೆ ಎಂಬುದು ಅದರ ಸಾರಾಂಶ.

ಈ ಎಲ್ಲ ಗೌಜಿನ ಮಧ್ಯೆ ಬಿಹಾರದ ಅಭಿವೃದ್ಧಿಗೆ ಪರ್ಯಾಯದಂತಿರುವ ಎಡಪಕ್ಷಗಳ ಜವಾಬ್ದಾರಿ ದೊಡ್ಡದಿದೆ. ಎಡಪಕ್ಷಗಳು ರಾಜ್ಯದಲ್ಲಿ ಸರಕಾರ ಅನುಸರಿಸುತ್ತಿರುವ ಜನವಿರೋಧೀ ನೀತಿಗಳನ್ನು ವಿರೋಧಿಸಿ, ಬಿಜೆಪಿಯ ಕೋಮುವಾದೀ-ಕಾರ್ಪೊರೇಟ್ ಅಜೆಂಡಾವನ್ನು ಹಿಮ್ಮೆಟ್ಟಿಸಬೇಕಾಗಿದೆ ಎಂದು ಇಲ್ಲಿಯ ಎಡಶಕ್ತಿಗಳು ಅಭಿಪ್ರಾಯ ಪಡುತ್ತಿವೆ.

ಭಾರತ–ವಿಯೇಟ್ನಾಮ್ ಜನಮೈತ್ರಿ ಉತ್ಸವ..... ಪುಟ 16 ರಿಂದ

ತೋರಿಸಲಾಯಿತು.

ಹೊ ಚಿ ಮಿನ್ ವಸತಿ ಸಂಕೀರ್ಣದ ಗೈಡ್ ಆಗಿದ್ದ ಮಹಿಳೆ ಬಹಳ ಭಾವನಾತ್ಮಕವಾಗಿ ಮನ ಮುಟ್ಟುವಂತೆ ಹೊ ಚಿ ಮಿನ್ ಬಗ್ಗೆ ಹೇಳುತ್ತಿದ್ದಳು. ಗೈಡ್ ಕೆಲಸ ಅವಳಿಗೆ ಬರಿಯ ಒಂದು ಉದ್ಯೋಗವಾಗಿರಲಿಲ್ಲ ಅಂತ ಅನಿಸುತ್ತಿತ್ತು. ಹೊ ಚಿ ಮಿನ್ ದೇಹವನ್ನು ಏಕೆ ಇಡಲಾಯಿತು? ಇದು ವ್ಯಕ್ತಿಪೂಜೆಯಲ್ಲವೇ? ಎಂಬ ನಮ್ಮ ಮನಸ್ಸಿನಲ್ಲಿ ಇದ್ದ ಪ್ರಶ್ನೆಯನ್ನು ಕೇಳುವ ಮೊದಲೇ ಅವಳು ಅದಕ್ಕೆ ಉತ್ತರಿಸಿದಳು. ಇಡೀ ವಿಯೇಟ್ನಾಮಿನ ಸ್ವಾತಂತ್ರ್ಯ ಹೋರಾಟದ ಜನಪ್ರಿಯ ನಾಯಕರಾಗಿದ್ದ ಹಾಗೂ ಜನರ ನಡುವೆಯೇ ಇರುತ್ತಿದ್ದ ಹೊ ಚಿ ಮಿನ್ ಅವರನ್ನು ದಕ್ಷಿಣ ವಿಯೇಟ್ನಾಂ ಜನತೆಗೆ 1954ರ ದೇಶವಿಭಜನೆ ನಂತರ ಪ್ರತ್ಯಕ್ಷ ನೋಡುವ ಅವಕಾಶ ಸಿಕ್ಕಿರಲಿಲ್ಲ. ಆದ್ದರಿಂದ ವಿಯೇಟ್ನಾಂ ಏಕೀಕರಣದ ನಂತರ ದಕ್ಷಿಣ ವಿಯೇಟ್ನಾಂ ಜನತೆಗೆ ತಮ್ಮ ನೆಚ್ಚಿನ ನಾಯಕನನ್ನು ನೋಡಲು ಅವಕಾಶ ಸಿಗಬೇಕೆಂದು ಅವರ ದೇಹವನ್ನು ಇಡಲು ನಿರ್ಧರಿಸಲಾಯಿತಂತೆ.

ಬಿರ್ಲಾ ಅನಾಥಾಲಯದಲ್ಲಿ

ಹನೊಯ್ ನಲ್ಲಿ ಬಿರ್ಲಾ ಅನಾಥಾಲಯಕ್ಕೂ ಭೇಟಿ ಏರ್ಪಡಿಸಲಾಗಿತ್ತು. ಫ್ರೆಂಚ್, ಜಪಾನೀ ಮತ್ತು ಅಮೆರಿಕನ್ ವಸಾಹತುಶಾಹಿ–ಸಾಮ್ರಾಜ್ಯಶಾಹಿಯ ವಿರುದ್ಧ ಸುಮಾರು 30 ವರ್ಷಗಳ ಸತತ ವಿಮೋಚನಾ ಹೋರಾಟದಲ್ಲಿ ಹುತಾತ್ಮರಾದವರ ಮತ್ತು ದಾಳಿಗಳಲ್ಲಿ ಸತ್ತವರ ಮಕ್ಕಳು ಹೀಗೆ ಲಕ್ಷಾಂತರ ಅನಾಥ ಮಕ್ಕಳ ಸಮಸ್ಯೆಯನ್ನು ವಿಯೇಟ್ನಾಂ ಎದುರಿಸಬೇಕಾಯಿತು. ಈ ಸಮಸ್ಯೆ ನಿವಾರಣೆಯ ಪ್ರಯತ್ನದಲ್ಲಿ ದೊಡ್ಡ ಪ್ರಮಾಣದಲ್ಲಿ ವಿಶ್ವವ್ಯಾಪಿ ಸೌಹಾರ್ದ ಚಳುವಳಿ ಕೈ ಜೋಡಿಸಿತು. ಇದರ ಭಾಗವಾಗಿ ಹಲವು ಅನಾಥಾಲಯಗಳನ್ನು ಸ್ಥಾಪಿಸಲಾಯಿತು. ಇಂದಿಗೂ ಹಲವು ಇತರ ಸಾಮಾಜಿಕ ಕಾರಣಗಳಿಂದಾಗಿ ಅನಾಥ ಮಕ್ಕಳ ಸಮಸ್ಯೆ ಕಡಿಮೆ ಪ್ರಮಾಣದಲ್ಲಾದರೂ ಮುಂದುವರೆದಿದೆ. ಜಿ ಡಿ ಬಿರ್ಲಾ ನೆರವಿನಲ್ಲಿ 1980ರ ದಶಕದಲ್ಲಿ ಆರಂಭಿಸಿದ ಅನಾಥಾಲಯದ ಮಕ್ಕಳು ಮತ್ತು ಸಿಬ್ಬಂದಿ ಭೇಟಿ ಮಾಡುವ ಅವಕಾಶ ಸಿಕ್ಕಿತು. ಅನಾಥಾಲಯವನ್ನು 30 ಮಕ್ಕಳಿರುವ ಎರಡು 'ತಾಯಂದಿರಿರುವ' 'ಮನೆ'ಗಳಾಗಿ ಸಂಘಟಿಸಲಾಗಿದೆ. ಇಲ್ಲಿ 2–18 ವರ್ಷದ ಅನಾಥ ಮಕ್ಕಳ ವಸತಿಗೆ ಅವಕಾಶ ಇದ್ದು, ಅವರು ತಮ್ಮ ಕಾಲ ಮೇಲೆ ನಿಂತುಕೊಳ್ಳುವವರೆಗೆ ನೋಡಿಕೊಳ್ಳಲಾಗುತ್ತದೆ.

ಹನೊಯ್ ಜನತಾ ಸಮಿತಿ (ಪೀಪಲ್ಸ್ ಕಮಿಟಿ – ಇಲ್ಲಿನ ಸ್ಥಳೀಯ ಸರಕಾರದಂತೆ)ಯ ಉಪಾಧ್ಯಕ್ಷ ಮತ್ತು ಜನಮೈತ್ರಿ ಸಂಘದ ಹಿರಿಯ ಕಾರ್ಯಕರ್ತರ ಭೇಟಿ ಮತ್ತು ಔತಣಕೂಟವನ್ನೂ ಏರ್ಪಡಿಸಲಾಗಿತ್ತು. ಇಲ್ಲೂ ವಿಯೇಟ್ನಾಮಿ ತಂಡದ ಸಾಂಸ್ಕೃತಿಕ ಕಾರ್ಯಕ್ರಮಗಳು ಇದ್ದವು. ನಾವು (ಕರ್ನಾಟಕದ ತಂಡ) ಇಳಿದುಕೊಂಡ ಹೋಟೆಲಿಗೆ ಸ್ವಲ್ಪ ದೂರದಲ್ಲೇ ಕ್ಯೂಬಾ ರಾಯಭಾರ ಕಚೇರಿ ಇದ್ದು ಅಲ್ಲಿ ಪ್ರವೇಶದ್ವಾರದಲ್ಲೇ ಹೂಗುಚ್ಛಗಳ ರಾಶಿ ಬಿದ್ದಿತ್ತು. ಕುತೂಹಲದಿಂದ ಒಳಗೆ ಹೋದೆವು. ಕಚೇರಿಯ ತುಂಬಾ ಫಿಡೆಲ್ ಫೋಟೋಗಳು ಹೂಗುಚ್ಛಗಳು ಇದ್ದವು. ಸ್ವತಃ ರಾಯಭಾರಿ ನಮ್ಮನ್ನು ಸ್ವಾಗತಿಸಿದ. ನಾವು ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳು ಎಂದಾಗ ಅವನಿಗೆ ಇನ್ನಷ್ಟು ಸಂತೋಷ ಆಯಿತು. ಶ್ರದ್ಧಾಂಜಲಿ ರಿಜಿಸ್ಟರಿನಲ್ಲಿ ಬರೆದು ಸಹಿ ಹಾಕುವಂತೆ ಕೋರಿದ. ನಾವು ಅದನ್ನು ಸಂತೋಷದಿಂದ ಮಾಡಿದೆವು.



ಈ ಎರಡು ದಿನಗಳಲ್ಲಿ ಭಾರತದ ಇಡೀ ತಂಡ ಪರಿಚಯವಾಗಿತ್ತು. ಭಾರತದ ತಂಡದಲ್ಲಿ 34 ಜನ ಇದ್ದು ದೆಹಲಿಯಿಂದ 6, ತೆಲಂಗಾಣದಿಂದ 18, ಕರ್ನಾಟಕದಿಂದ 8, ಪಾಂಡಿಚೇರಿ ಮತ್ತು ಉತ್ತರಾಖಂಡ ತಲಾ 1 ಜನ ಇದ್ದರು. ಸಾಂಸ್ಕೃತಿಕ ತಂಡದ 13 ಜನ ಇದ್ದರೆ, ಉಳಿದವರು ಎ.ಐ.ಪಿ.ಎಸ್.ಓ. ಪದಾಧಿಕಾರಿಗಳು, ಲೇಖಕರು, ಉದ್ಯಮಿಗಳು, ರಾಜಕೀಯ ಪಕ್ಷಗಳ ನಾಯಕರು ಇದ್ದರು. ಏಳು ರಾಜಕೀಯ ಪಕ್ಷಗಳ (ಸಿಪಿಐ, ಸಿಪಿಐ(ಎಂ), ಫಾರ್ವರ್ಡ್ ಬ್ಲಾಕ್, ಕಾಂಗ್ರೆಸ್, ಟಿ.ಡಿ.ಪಿ, ಟಿ.ಆರ್.ಎಸ್., ಲೋಕಸತ್ತಾ) ಪ್ರತಿನಿಧಿಗಳು. ತಂಡದಲ್ಲಿ ಸಿಪಿಐ(ಎಂ)ನ್ನು ತೆಲಂಗಾಣ ರಾಜ್ಯ ಸಮಿತಿ ಸದಸ್ಯ ಕಾಂ. ರಘುಪಾಲ ಮತ್ತು ನಾನು ಪ್ರತಿನಿಧಿಸಿದ್ದೆವು. ಕರ್ನಾಟಕದಿಂದ ಡಾ. ಸಿದ್ಧನಗೌಡ ಪಾಟಿಲ್, ಪಿ ವಿ ಲೋಕೇಶ್, ಜಿ.ಆರ್.ಶಿವಶಂಕರ್ ತಂಡದಲ್ಲಿದ್ದರು.

ಭಾರತದ ಅಕ್ಕಿ ಋಣ

ಎರಡು ದಿನಗಳನ್ನು ಹನೊಯ್ ನಲ್ಲಿ ಕಳೆದ ಮೇಲೆ ಮುಂದಿನ ಭೇಟಿ ಕಾನ್ ತೋ ನಗರ–ಕ್ಕೆ. ಇದು ದಕ್ಷಿಣದ ತುದಿಯಲ್ಲಿದ್ದು ಹನೊಯ್ ನಿಂದ ಸುಮಾರು 2 ಸಾವಿರ ಕಿ.ಮಿ. ದೂರದಲ್ಲಿತ್ತು. 36 ಗಂಟೆಗಳ ರೈಲು ಪ್ರಯಾಣವಂತೆ. ಆದ್ದ–ರಿಂದ ವಿಮಾನ ಪ್ರಯಾಣ ಏರ್ಪಡಿಸಿದ್ದರು. ಕಾನ್ ತೋ ನಮ್ಮ ಗೋವಾದಂತೆ ಪ್ರವಾಸಿ ತಾಣವಾಗಿ ಪ್ರಸಿದ್ಧವಾಗಿದೆ. ಅಲ್ಲಿ ಉತ್ಸವದ ಎರಡನೇ ಬಹಿರಂಗ ಸಾಂಸ್ಕೃತಿಕ ಕಾರ್ಯಕ್ರಮವನ್ನು ಕ್ಯಾನ್ ತೋ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಲಾಗಿತ್ತು. ಇಲ್ಲೂ ದೊಡ್ಡ ಸಭಾಂಗಣ ತುಂಬಿ ತುಳುಕುತ್ತಿತ್ತು. ವಿಶ್ವವಿದ್ಯಾಲಯದಲ್ಲಿ ಕುಲಪತಿಗಳು ಉದ್ಘಾಟನೆ ಮಾಡಿದರು. ಭಾರತ ತಂಡದ ಪರವಾಗಿ ಇಲ್ಲಿ ಡಿ ಸುಧಾಕರ (ತೆಲಂಗಾಣ ಸಿಪಿಐ ಕಾರ್ಯದರ್ಶಿ ಮತ್ತು ಎ.ಐ.ಪಿ.ಎಸ್.ಓ. ಪದಾಧಿಕಾರಿ) ಮಾತನಾಡಿದರು. ಎರಡು ಭಾಷಣಗಳ ನಂತರ ಎರಡೂ ತಂಡಗಳು ಸಾಂಸ್ಕೃತಿಕ ಕಾರ್ಯಕ್ರಮ ಪ್ರದರ್ಶಿಸಿದವು. ಭಾರತದ ತಂಡ ಹನೊಯ್ ನಲ್ಲಿ ಪ್ರದರ್ಶಿಸಿದ್ದೇ ಆಗಿ–ತ್ತು. ಆದರೆ ವಿಯೇಟ್ನಾಮಿ ತಂಡದ ಸಂಗೀತ–ನೃತ್ಯ ಪ್ರಸ್ತುತಿಗಳು ಪೂರ್ಣವಾಗಿ ಬೇರೆಯೇ ಆಗಿದ್ದವು. ಇಲ್ಲಿನ ಸಾಂಸ್ಕೃತಿಕ ಕಾರ್ಯಕ್ರಮಗಳ ಜವಾಬ್ದಾರಿಯನ್ನು ವಿ.ವಿ. ವಿದ್ಯಾರ್ಥಿಗಳಿಗೆ ವಹಿಸಲಾಗಿತ್ತಂತೆ. ಅವರ ಸಂಗೀತ–ನೃತ್ಯ ಐಟಂಗಳ ಗುಣಮಟ್ಟ, ವೈವಿಧ್ಯತೆ, ಅರ್ಥಪೂರ್ಣತೆ ಗಳಲ್ಲಿ ಹನೊಯ್ ನಷ್ಟೇ 'ಪ್ರೊಫೆಷನಲ್' ಆಗಿತ್ತು ಅಥವಾ ಅವರನ್ನೂ ಮೀರಿಸಿತ್ತು ಎಂದೂ ಹೇಳಬಹುದು. ಅವರ ಥೀಮ್ ಗಳೂ ಇನ್ನಷ್ಟು ಭಿನ್ನವಾಗಿಯೂ ವೈವಿಧ್ಯಮಯವೂ ಆಗಿದ್ದವು. ವಿಯೇಟ್ನಾಮಿನ ಸಾಂಸ್ಕೃತಿಕ ಬದುಕಿನಲ್ಲಿ ರೇಷ್ಮೆಯ ಪಾತ್ರ, ಪರಿಸರ ಸಮಸ್ಯೆ, ಗೆರಿಲ್ಲಾ ಸಮರ ಮತ್ತು ಜನತೆ, ಯುದ್ಧ ಮತ್ತು ಶಾಂತಿ – ಮುಂತಾದ ವಿಶಿಷ್ಟ ಥೀಮ್ ಗಳು ಇದ್ದವು. ಬಾರತದ ನೃತ್ಯ ತಂಡ ಇಲ್ಲೊಂದು ಸ್ವಯಂ–ಸ್ಫೂರ್ತ ಪ್ರಯೋಗ ಮಾಡಿತು. ಬಾಲಿವುಡ್ ಡ್ಯಾನ್ಸ್ ನಂಬರುಗಳಿಗೆ ಸಭಿಕರನ್ನು ಆಹ್ವಾನಿಸಿದರು. ಆಗ ಹಲವರು ಯುವಕ–ಯುವತಿಯರು (ಕೆಲವು ಮುದುಕ–ಮುದುಕಿಯರೂ!) ಉತ್ಸಾಹದಿಂದ ವೇದಿಕೆ ತುಂಬಾ ತುಂಬಿ ಹೆಜ್ಜೆ ಹಾಕಿದ್ದು ಸಹ, ಹಿಂದೆ ಹೇಳಿದಂತೆ ಸಂಗೀತ–ನೃತ್ಯಗಳಿಗೆ ದೇಶ–ಭಾಷೆಗಳ ಗಡಿಗಳಿಲ್ಲ ಎಂಬುದನ್ನು ಸಮರ್ಥಿಸುವಂತಿತ್ತು.

ಕ್ಯಾನ್ ತೊ ಬಳಿ ಇರುವ ವಿಶಿಷ್ಟ ಪ್ರಸಿದ್ಧ 'ತೇಲುವ ಮಾರುಕಟ್ಟೆ' (ಹಳ್ಳಿಯ ಸಂತೆಯಂತೆ, ಆದರೆ ಮಾರಾಟ ಮಾಡುವವರೂ, ಕೊಳ್ಳುವವರೂ ದೋಣಿಯಲ್ಲಿ ಬರುತ್ತಾರೆ), ವಿಯೇಟ್ನಾಮಿ ಪಗೋಡಾ, ಮಾದರಿ ಹಳ್ಳಿಗೂ ಭೇಟಿ ಏರ್ಪಡಿಸಲಾಗಿತ್ತು. ಕ್ಯಾನ್ ತೊ ಜನತಾ ಸಮಿತಿ (ಪೀಪಲ್ಸ್ ಕಮಿಟಿ)ಯ ಉಪಾಧ್ಯಕ್ಷ ಮತ್ತು ಜನಮೈತ್ರಿ ಸಂಘದ ಹಿರಿಯ ಕಾರ್ಯಕರ್ತರ ಭೇಟಿ ಮತ್ತು ಔತಣಕೂಟವನ್ನೂ ಇಲ್ಲೂ ಏರ್ಪಡಿಸಲಾಗಿತ್ತು.



ಕ್ಯಾನ್ ತೊ ಬಳಿ ಇರುವ ಕೂ ಲಾಂಗ್ ಅಕ್ಕಿ ಸಂಶೋಧನಾ ಸಂಸ್ಥೆಯಲ್ಲಿ ಬಾರತ–ವಿಯೇಟ್ನಾಮ್ ಮೈತ್ರಿ ಗಟ್ಟಿಗೊಳಿಸುವ ಬಗ್ಗೆ ಸಂವಾದದ ಕಾರ್ಯಕ್ರಮ ಇತ್ತು. ಕೂ ಲಾಂಗ್ ಅಕ್ಕಿ ಸಂಶೋಧನಾ ಸಂಸ್ಥೆಯೇ ಇಂತಹ ಮೈತ್ರಿಯ ಉತ್ತಮ ಉದಾಹರಣೆ ಎಂದು ಹೇಳಲಾಯಿತು. ಭಾರತದ ನೆರವಿನಿಂದ ಆರಂಭಿಸಲಾದ ಈ ಸಂಸ್ಥೆಯ 240 ರಲ್ಲಿ 40 ವಿಜ್ಞಾನಿಗಳು ಸ್ನಾತ–ಕೋತ್ತರ ಮತ್ತು ಪಿ.ಎಚ್.ಡಿ.ಯನ್ನು ಭಾರತದಲ್ಲಿ ಮುಗಿಸಿದವರು. ಅಕ್ಕಿ ಆಮದುದಾರನಾಗಿದ್ದ ವಿಯೇಟ್ನಾಂ ಇಂದು ಎರಡನೇ ಅತಿ ದೊಡ್ಡ ಅಕ್ಕಿ ರಫ್ತುದಾರ ಆಗುವಲ್ಲಿ ಭಾರತದ 'ಅಕ್ಕಿ ಋಣ'ವನ್ನು ಸ್ಮರಿಸಲಾಯಿತು. ಇಂತಹುದೇ ಸಹಕಾರವನ್ನು ಹೊಸ ಐಟಿ–ಬಿಟಿ ತಂತ್ರಜ್ಞಾನಗಳಲ್ಲಿ ಸಾಧಿಸಬೇಕು. ಇನ್ನೂ ಹೆಚ್ಚಿನ ವ್ಯಾಪಾರ, ಎರಡು ದೇಶಗಳ ನಡುವೆ ಅವಳಿ–ರಾಜ್ಯ ಅವಳಿ–ನಗರ ವ್ಯವಸ್ಥೆ – ಮುಂತಾದ ಐಡಿಯಾಗಳು ಸಂವಾದದಲ್ಲಿ ಹೊಮ್ಮಿದವು.

ಕೂ ಚಿ ಸುರಂಗದಲ್ಲಿ

ಎರಡು ದಿನಗಳ ಕ್ಯಾನ್ ತೊ ಭೇಟಿಯ ನಂತರ ಸುಮಾರು 300 ಕಿಮಿ. ದೂರ ಇರುವ ಹೊ ಚಿ ಮಿನ್ (ಹಿಂದಿನ ದಕ್ಷಿಣ ವಿಯೇಟ್ನಾಂ ರಾಜಧಾನಿ – ಸೈಗಾನ್) ನಗರಕ್ಕೆ ಸುಮಾರು 4 ಗಂಟೆಗಳಲ್ಲಿ ತಲುಪಿದೆವು. ಹೊ ಚಿ ಮಿನ್ ನಗರ ವಿಯೇಟ್ನಾಮಿನ ಅತಿ ದೊಡ್ಡ (ಸುಮಾರು 1 ಕೋಟಿ ಜನಸಂಖ್ಯೆ ಇರುವ) ನಗರ. ದೇಶದ ಕಾಲುಭಾಗ ಜಿಡಿಪಿ ಉತ್ಪಾದಿಸುವ ಶೇ. 44 ಹೂಡಿಕೆ ಆಕರ್ಷಿಸುವ ಪ್ರದೇಶ. ನಮ್ಮ ಮುಂಬಯಿಯಂತೆ ದೇಶದ ಕಮರ್ಶಿಯಲ್ ರಾಜಧಾನಿ. ಹೊ ಚಿ ಮಿನ್ ನಗರದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಇರಲಿಲ್ಲ. ಪ್ರಸಿದ್ಧ ಯುದ್ಧ–ಸ್ಮಾರಕ ಕೂ ಚಿ ಸುರಂಗಗಳಿಗೆ ಭೇಟಿ ಮತ್ತು ಜನಮೈತ್ರಿ ಸಂಘದ ಕಾರ್ಯಕರ್ತರ ಜತೆ ಭೇಟಿ ಮತ್ತು ಔತಣಕೂಟ ಮಾತ್ರ ಇತ್ತು. ಹೊ ಚಿ ಮಿನ್ ನಗರ ಕಮ್ಯುನಿಸ್ಟ್ ಪಕ್ಷದ ಉಪ ಕಾರ್ಯದರ್ಶಿ(ಮಹಿಳೆ) ಜತೆ ತಂಡದ ರಾಜಕೀಯ ಪ್ರತಿನಿಧಿಗಳ ಸಂವಾದ ಏರ್ಪಡಿಸಲಾಗಿತ್ತು. ಒಂದು ಪ್ರಶ್ನೆಗೆ ಆಕೆ ನಗರ ಕಮ್ಯುನಿಸ್ಟ್ ಪಕ್ಷದ 2 ಲಕ್ಷ ಸದಸ್ಯರಲ್ಲಿ ಶೇ.40 ಮಹಿಳೆಯರು. 9 ಕೋಟಿ ಜನಸಂಖ್ಯೆಯ ವಿಯೇಟ್ನಾಮಿನಲ್ಲಿ 40 ಲಕ್ಷ ಕಮ್ಯುನಿಸ್ಟ್ ಪಕ್ಷದ ಸದಸ್ಯರು ಇದ್ದಾರೆ ಎಂದರು.

ಎರಡು ಟೀ ಶರ್ಟುಗಳು ಮತ್ತು 'ಆನೆಗಳನ್ನು ಮಣಿಸಿದ ಮಿಡತೆಗಳು' ಎಂಬ ರೂಪಕ ಒಂದು ವಾರದ ಭೇಟಿಯಲ್ಲಿ ನಾ ಕಂಡ ವಿಯೇಟ್ನಾಮಿನ ಸಾರವನ್ನು ಸಮರ್ಥವಾಗಿ ಹೇಳುತ್ತವೆ.

ಹೊ ಚಿ ಮಿನ್ ನಗರದ ಹತ್ತಿರ ಇರುವ ಕೂ ಚಿ ಸುರಂಗಗಳಿಗೆ ಏರ್ಪಡಿಸಿದ್ದ ಭೇಟಿ ವಿಯೇಟ್ನಾಂ ಚರಿತ್ರೆಗೆ ನಮ್ಮನ್ನು ಒಯ್ದಿತು. ಇದು ಅಮೆರಿಕದ ವಿರುದ್ಧ ಗೆರಿಲ್ಲಾ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದೆ. 1954ರಲ್ಲಿ ಫ್ರೆಂಚರ ಜತೆ ಒಪ್ಪಂದದ ಪ್ರಕಾರ ಉತ್ತರ ವಿಯೇಟ್ನಾಂ ಸ್ವತಂತ್ರವಾಯಿತು. ದಕ್ಷಿಣ ವಿಯೇಟ್ನಾಂನಲ್ಲಿ ವರ್ಷದೊಳಗೆ ಜನಮತಸಂಗ್ರಹ ನಡೆಸಬೇಕಾಗಿತ್ತು. ಆದರೆ ದಕ್ಷಿಣ ವಿಯೇಟ್ನಾಂನ ಕೈಗೊಂಬೆ ಸರಕಾರ ಅದನ್ನು ಈಡೇರಿಸಲಿಲ್ಲ ಮಾತ್ರವಲ್ಲ, ಅದರ ಮೇಲೆ ಅಮೆರಿಕದ ಹಿಡಿತ ಹೆಚ್ಚುತ್ತಾ ಹೋಯಿತು. ಶಾಂತಿಯುತ ವಿಧಾನಗಳು ಮುರಿದು ಬಿದ್ದಾಗ ದಕ್ಷಿಣ ವಿಯೇಟ್ನಾಂನಲ್ಲಿ ಗೆರಿಲ್ಲಾ ಯುದ್ಧ ಆರಂಭವಾಯಿತು. ಈ ಯುದ್ಧದ ಪ್ರಮುಖ ನೆಲೆ ಮಿಲಿಟರಿ ಕೇಂದ್ರ ಕೂ ಚಿ ಸುರಂಗ ಪ್ರದೇಶ ಆಗಿತ್ತು. ಅಮೆರಿಕದ ವಿರುದ್ಧ ಗೆರಿಲ್ಲಾ ಯುದ್ಧದ (1955–75) 20 ವರ್ಷಗಳ ಕಾಲ 20 ಸಾವಿರಕ್ಕೂ ಹೆಚ್ಚು ಗೆರಿಲ್ಲಾ ಯೋಧರು ಇಲ್ಲಿ ವಾಸಿಸುತ್ತಿದ್ದರು. 5 ಮಾಳಿಗೆಗಳ ಕಟ್ಟಡದಂತೆ, ನೆಲದ ಕೆಳಗೆ 5 ಹಂತಗಳಲ್ಲಿ ಯೋದರ ವಾಸಸ್ಥಳ, ಶಸ್ತ್ರ ತಯಾರಿಕಾ ವರ್ಕಶಾಪ್, ಆಸ್ಪತ್ರೆ, ಅಡುಗೆ ಮನೆ, ಇತ್ಯಾದಿಗಳು ಇರುವ ವ್ಯವಸ್ಥೆಯನ್ನು ನೆಲದಡಿ ಮಾಡಲಾಗಿತ್ತು. ಈ ಎಲ್ಲಾ ಸ್ಥಳಗಳಿಗೆ ತೆವಳಿಕೊಂಡೇ ಹೋಗಬೇಕಾದ ಸುಮಾರು 200 ಕಿ.ಮಿ. ಉದ್ದದ ಸುರಂಗ ಮಾರ್ಗಗಳನ್ನು ನಿರ್ಮಿಸಲಾಗಿತ್ತು. ಇಷ್ಟು ದೂರದ ಆಳದ ಭೂಗತ ವ್ಯವಸ್ಥೆಯನ್ನು ಬರಿಯ ಹಾರೆ–ಪಿಕ್ಕಾಸು ಮತ್ತು ಕೈಗಳಿಂದಲೇ ಮಾಡಬೇಕಾಗಿತ್ತು. ಈ ಭೂಗತ ವ್ಯವಸ್ಥೆಗೆ ಗಾಳಿ ಬರುವಂತೆ, ವೈರಿಗಳ ಮೇಲೆ ಗುಂಡಿನ ದಾಳಿ ಮಾಡಲು ಗುಪ್ತ ಕಿಂಡಿಗಳಿದ್ದವು. ಅದೇ ರೀತಿ ವೈರಿ ಸೈನಿಕ ಬಂದರೆ ಅವರನ್ನು ಖೆಡ್ಡಾ ಮಾಡುವ ವ್ಯವಸ್ಥೆಯೂ ಇತ್ತು. ಈ ನೆಲೆಗೆ ಇತರ ಪ್ರದೇಶಗಳಿಂದ ಸಂಪರ್ಕ ಮತ್ತು ಆಹಾರ–ಶಸ್ತ್ರ ಪೂ–ರೈಕೆಗೆ ಗುಪ್ತ ದಾರಿಗಳನ್ನು ಮಾಡಲಾಗಿತ್ತು. ಈಗ ಕೂ ಚಿ ಸುರಂಗ ಒಂದು ಪ್ರಸಿದ್ಧ ಯುದ್ಧ–ಸ್ಮಾರಕ ಪಾರ್ಕ್. ಮೊದಲ ಹಂತದಲ್ಲಿರುವ ಕೆಲವು ಸುರಂಗ ಮತ್ತಿತರ ಮಿಲಿಟರಿ ವ್ಯವಸ್ಥೆಗಳನ್ನು ಎತ್ತರ–ಅಗಲ ಮಾಡಿ ಪ್ರವಾಸಿಗಳು (ಅಮೆರಿಕನ್ ಸಹ) ಹೋಗುವಂತೆ ಮಾಡಲಾಗಿದೆ. ಇದರ ಭಾಗವಾಗಿ ಕೆಲವು ಸುರಂಗ ಮಾರ್ಗಗಳು, ಒಂದು ಭೂಗತ ಮಿಲಿಟರಿ ಆಸ್ಪತ್ರೆ, ಭೂಗತ ಮಿಲಿಟರಿ ಮುಖ್ಯ ಕಚೇರಿಗಳ ನೇರ ಅನುಭವ ಪಡೆಯುವುದು ಸಾಧ್ಯವಾಯಿತು. ಇಲ್ಲೂ ನಮ್ಮ ಗೈಡ್ ಬಹಳ ಭಾವನಾತ್ಮಕವಾಗಿ ಮನಮುಟ್ಟುವಂತೆ ಈ ಸುರಂಗಗಳಲ್ಲಿ ವಾಸಿಸಿ ಎರಡು ದಶಕಗಳ ಕಾಲ ಅದಮ್ಯ ಸ್ಫೂರ್ತಿಯಿಂದ ಹೋರಾಡಿದ, ಮಡಿದ, ಅಂಗವಿಕಲರಾದ ಕತೆಯನ್ನು ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದ– ಚಾರ್ಟ್, ಮ್ಯಾಪ್, ಮಾಡೆಲ್ ಗಳು, ಫೋಟೋಗಳ ಮೂಲಕ.

ಹೊ ಚಿ ಮಿನ್ ನಗರದಲ್ಲೇ ಇದ್ದ ಯುದ್ಧ ಸ್ಮಾರಕ ಮ್ಯೂಸಿಯಂಗೂ ನಾವು ಭೇಟಿ ನೀಡಿದೆವು. ಇಲ್ಲಿ ಪ್ರಮುಖವಾಗಿ ಫೋಟೋಗಳ ಮೂಲಕ ವಿಯೇಟ್ನಾಮಿನ 30 ವರ್ಷಗಳ ವಿಮೋಚನಾ ಯುದ್ಧದ ಚಿತ್ರಣ ನೀಡಲಾಗಿದೆ. ಫ್ರೆಂಚ್, ಜಪಾಮಿ, ಅಮೆರಿಕನ್ ಸಾಮ್ರಾಜ್ಯಶಾಹಿಯ ಬಲಿಷ್ಟ ಸೈನ್ಯಗಳ ವಿರುದ್ಧ ಹೋರಾಟದಲ್ಲಿ ಯುದ್ಧದ ಕ್ರೌರ್ಯ, ಜನರ ಬವಣೆ ಎಲ್ಲವನ್ನೂ ಫೋಟೋಗಳ ಮೂಲಕ ಕೊಡಲಾಗಿದೆ. ವಿಯೇಟ್ನಾಮ್ ಹೋರಾಟಗಾರರು, ಜನತೆಯ ಮಾಡಿದ ಚಿತ್ರಹಿಂಸೆಯಲ್ಲಿ ಬಳಸಿದ (ಒಂದು ಗಿಲಟಿನ್ ಸೇರಿದಂತೆ) ಕೆಲವು ಉಪಕರಣಗಳ ಮಾದರಿಗಳನ್ನು ಇಡಲಾಗಿದೆ. ಆಗ ಮತ್ತು ಈಗಲೂ ಅಮೆರಿಕದ ರಾಸಾಯನಿಕ ಯುದ್ಧದ (ನಾಪಾಮ್, ಏಜೆಂಟ್ ಆರೇಂಜ್) ಪರಿಣಾಮಗಳ ಬಗ್ಗೆ ವಿಶೇಷ ಗ್ಯಾಲರಿ ಇದೆ. ಪ್ರತಿಯೊಂದು ಯುದ್ಧ ಸ್ಮಾರಕವೂ ಶಾಂತಿಪರವಾಗಿರಬೇಕು, ಯುದ್ಧವನ್ನು ವೈಭವೀಕರಿಸಬಾರದು ಎಂಬ ನೀತಿಯಂತೆ, ಮಕ್ಕಳು ಶಾಂತಿ ಬಗ್ಗೆ ಬಿಡಿಸಿದ ಚಿತ್ರಗಳ, ವಿಯೇಟ್ನಾಂ ಯುದ್ಧ–ವಿರೋಧಿ ಚಳುವಳಿಗಳ ವಿಶೇಷ ಗ್ಯಾಲರಿಗಳೂ ಇವೆ.

ಹೊ ಚಿ ಮಿನ್ ನಗರದಲ್ಲಿ ಕೊನೆ ದಿನ ಅಡ್ಡಾಡುತ್ತಿದ್ದಾಗ ಎರಡು ಟೀ ಶರ್ಟುಗಳು ನನ್ನ ಕಣ್ಣಿಗೆ ಬಿದ್ದವು. ಒಂದು ಟೀ ಶರ್ಟ್ ಹೇಳುತ್ತಿತ್ತು – ಈ ಭೂಮಿಯ ಮೇಲೆ ಅಮೆರಿಕದ ಸೈನ್ಯ ಅಜೇಯವಾಗಿತ್ತು, ವಿಯೇಟ್ನಾಮ್ ಮಾತ್ರ ಅದನ್ನು ಸೋಲಿಸಿತ್ತು ಅಂತಾರೆ. ಇದು ಪೂರ್ಣ ನಿಜವಲ್ಲ. ಭೂಮಿಯ ಮೇಲೆ ಅಮೆರಿಕದ ಸೈನ್ಯ ಅಜೇಯವೇ ಆಗಿತ್ತು, ವಿಯೇಟ್ನಾಮ್ ಅಮೆರಿಕದ ಸೈನ್ಯವನ್ನು ಸೋಲಿಸಿದ್ದು ಭೂಮಿಯ ಕೆಳಗೆ – ಕೂ ಚಿ ಯಂತಹ ಭೂಗತ ನೆಲೆಗಳ ಮೂಲಕ. ಇನ್ನೊಂದು ಟೀ ಶರ್ಟು ಹೇಳುತ್ತಿತ್ತು – ಇದು ಸ್ವಾತಂತ್ರ್ಯಕ್ಕಾಗಿ 10 ಸಾವಿರ ದಿನ–ರಾತ್ರಿ ಮೂರು ಸಾಮ್ರಾಜ್ಯಶಾಹಿ ಶಕ್ತಿಗಳೊಂದಿಗೆ ಇಡೀ ದೇಶದಲ್ಲಿ ನಡೆದ ಸಶಸ್ತ್ರ ಹೋರಾಟ ಮಾಡಿ ಗೆದ್ದ ನಾಡು.

ಈ ಎರಡು ಟೀ ಶರ್ಟುಗಳು ಮತ್ತು 'ಆನೆಗಳನ್ನು ಮಣಿಸಿದ ಮಿಡತೆಗಳು' ಎಂಬ ರೂಪಕ ಒಂದು ವಾರದ ಭೇಟಿಯಲ್ಲಿ ನಾ ಕಂಡ ವಿಯೇಟ್ನಾಮಿನ ಸಾರವನ್ನು ಸಮರ್ಥವಾಗಿ ಹೇಳುತ್ತವೆ. ●

JANASHAKTHI KANNADA VARA PATRIKE DEC 25, 2016 Price : Rs. 10/-
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026

RNI No. KARKAN /2006/17926 Posted on every Satuarday
Licensed to Post without prepayment License No. WPP-283

8ನೇ ಭಾರತ–ವಿಯೇಟ್ನಾಮ್ ಜನಮೈತ್ರಿ ಉತ್ಸವ 'ಆನೆಗಳನ್ನು ಮಣಿಸಿದ ಮಿಡತೆಗಳ' ನಾಡಿನಲ್ಲಿ

ಎರಡೂ ತಂಡಗಳ ಸಂಗೀತ–ನೃತ್ಯಗಳಿಗೆ ಸಭಿಕರ ಉತ್ಸಾಹಪೂರ್ಣ ಸ್ಪಂದನೆ ಬರಿಯ ಔಪಚಾರಿಕವಾಗಿ ಕಾಣಲಿಲ್ಲ. ಸಂಗೀತ–ನೃತ್ಯಗಳಿಗೆ ದೇಶ–ಭಾಷೆಗಳ ಗಡಿಗಳಿಲ್ಲ. ಇವೇ ಜನಮೈತ್ರಿ ಸಾಧಿಸಲು ಉತ್ತಮ ಸಾಧನಗಳು ಎನ್ನುವಂತಿತ್ತು.

ವಸಂತರಾಜ ಎನ್.ಕೆ.



1970–80 ದಶಕದಲ್ಲಿ ವಿಯೇಟ್ನಾಮ್ ಹೋರಾಟದ ಬಗ್ಗೆ ಒಂದು ಸ್ಫೂರ್ತಿದಾಯಕವಾದ ಪುಸ್ತಕ ಬಂದಿತ್ತು. ಅದರ ಹೆಸರು "ಆನೆಗಳನ್ನು ಮಣಿಸಿದ ಮಿಡತೆಗಳು'. ಕಳೆದ ವಾರ "ಆನೆಗಳನ್ನು ಮಣಿಸಿದ ಮಿಡತೆಗಳ' ನಾಡಿಗೆ ಹೋಗುವ ಅವಕಾಶ ಸಿಕ್ಕಿತು. ಡಿಸೆಂಬರ್ 2ರಿಂದ 9ರವರೆಗೆ ವಿಯೇಟ್ನಾಮಿನಲ್ಲಿ ನಡೆದ 8ನೇ ಭಾರತ–ವಿಯೇಟ್ನಾಮ್ ಜನಮೈತ್ರಿ ಉತ್ಸವದಲ್ಲಿ ಸಿಪಿಐ(ಎಂ) ಪ್ರತಿನಿಧಿಯಾಗಿ ಭಾರತದ ತಂಡದ ಭಾಗವಾಗಿ ಒಂದು ವಾರ ಕಾಲ ವಿಯೇಟ್ನಾಮ್ ದರ್ಶನದ ಅವಕಾಶ ಸಿಕ್ಕಿತು. ಈ ಉತ್ಸವವನ್ನು ಅಖಿಲ ಭಾರತ ಶಾಂತಿ ಮತ್ತು ಸೌಹಾರ್ದತಾ ಸಂಘಟನೆ (ಎ.ಐ.ಪಿ.ಎಸ್.ಒ.) ಮತ್ತು ಭಾರತ–ವಿಯೇಟ್ನಾಮ್ ಮೈತ್ರಿ ಸಂಘಟನೆ ಹಮ್ಮಿಕೊಂಡಿದ್ದವು. ಈ ಉತ್ಸವ ಒಂದು ವರ್ಷ ಭಾರತದಲ್ಲಿ, ಮುಂದಿನ ವರ್ಷ ವಿಯೇಟ್ನಾಮಿನಲ್ಲಿ ನಡೆಯುತ್ತವೆ.

ಹಲವು ಸಮಾರಂಭಗಳು, ವಿಯೇಟ್ನಾಮಿನ ಹಲವು ಸಂಘಟನೆಗಳ ಜತೆ ಭೇಟಿಗಳು, ನೋಡಬೇಕಾದ ಸ್ಥಳಗಳ ಭೇಟಿ – ಒಂದು ವಾರದ ವಿಯೇಟ್ನಾಮ್ ದರ್ಶನದ ಕಾರ್ಯಕ್ರಮ ಪ್ಯಾಕಾಗಿ–ತ್ತು. ಡಿಸೆಂಬರ್ 1ರ ಬೆಳಿಗ್ಗೆ ಬ್ಯಾಂಕಾಕ್ ಮೂಲಕ ಹನೊಯ್ ಗೆ ಸುಮಾರು 6 ಗಂಟೆಗಳ ವಿಮಾನ ಪಯಣ.

'ಸೌಹಾರ್ದತೆ–ಸಹಕಾರ–ಅಭಿವೃದ್ಧಿ'

ಹನೊಯ್ ನಲ್ಲಿ ಮೊದಲ ದಿನ ಭಾರತ–ವಿಯೇಟ್ನಾಮ್ ಮೈತ್ರಿ ಸಂಘಟನೆ ಮತ್ತು ವಿಯೇಟ್ನಾಮ್ ಮೈತಿ ್ರಸಂಘಟನೆಗಳ ಒಕ್ಕೂಟದ ರಾಷ್ಟ್ರಮಟ್ಟದ ಹಾಗೂ ಹನೊಯ್ ನಗರದ ಪ್ರತಿನಿಧಿಗಳ ಜತೆ ಭೇಟಿ ಇತ್ತು. ಭಾರತದ ತಂಡವನ್ನು ವಿಯೇಟ್ನಾಮಿಗೆ ಸ್ವಾಗತಿಸುವ ಔತಣಕೂಟವೂ ಇತ್ತು. ವಿಯೇಟ್ನಾಮ್ ಮೈತಿ ್ರಸಂಘಟನೆಗಳ ಒಕ್ಕೂಟದ ರಾಷ್ಟ್ರೀಯ ನಾಯಕರೊಬ್ಬರು ಮಾತನಾಡಿ, ಭಾರತ–ವಿಯೇಟ್ನಾಮ್ ಮೈತ್ರಿ ಸಂಘಟನೆ ಮತ್ತು ವಿಯೇಟ್ನಾಮ್ ಮೈತಿ ್ರಸಂಘಟನೆಗಳ ಒಕ್ಕೂಟದ ಚರಿತ್ರೆ, ಕೆಲಸಗಳ ಬಗ್ಗೆ ವಿವರಿಸಿದರು. ಪ್ರಸಕ್ತ 8 ನೇ ಜನಮೈತ್ರಿ ಉತ್ಸವದ ಕಾರ್ಯಕ್ರಮಗಳ ವಿವರಗಳನ್ನು ಕೊಟ್ಟರು. ದೀರ್ಘಕಾಲದ ಭಾರತ–ವಿಯೇಟ್ನಾಮ್ ಮೈತ್ರಿ ಸೌಹಾರ್ದ ಸಂಬಂಧಗಳನ್ನು ನೆನಪಿಸಿದರು. ಭಾರತ ತಂಡದ ನಾಯಕತ್ವವನ್ನು ವಹಿಸಿದ್ದ ಎ.ಐ.ಪಿ.ಎಸ್.ಒ. ಪ್ರಧಾನ ಕಾರ್ಯದರ್ಶಿ (ಹಾಗೂ ಸಿಪಿಐ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯ, ಅಂತರ್‍ರಾಷ್ಟ್ರೀಯ ವಿಭಾಗದ ಮುಖ್ಯಸ್ಥ) ಕಾ. ಪಲ್ಲಬ್ ಸೇನ್ ಗುಪ್ತಾ ಮತ್ತು ಎ.ಐ.ಪಿ.ಎಸ್.ಒ. ಉಪಾಧ್ಯಕ್ಷ ಹಾಗೂ ಪಾಂಡಿಚೇರಿ ಕಾಂಗ್ರೆಸ್ ಶಾಸಕ ಕಣ್ಣನ್ ಲಕ್ಷ್ಮಿನಾರಾಯಣನ್ ಭಾರತದ ತಂಡದ ಪರವಾಗಿ ಮಾತನಾಡಿದರು. ವಿಯೇಟ್ನಾಂ ಸಾಂಸ್ಕೃತಿಕ ತಂಡ ಸಂಗೀತ–ನೃತ್ಯಗಳ ರಸದೌತಣ ಬಡಿಸಿತು. ಹಲವು ವಿಯೇಟ್ನಾಂಗೆ ವಿಶಿಷ್ಟವಾದ (ಅದರಲ್ಲೂ ಬಿದಿರಿನ) ಸಂಗೀತ ವಾದ್ಯಗಳ ಬಳಕೆ ವಿಶೇಷವಾಗಿತ್ತು.

ಡಿಸೆಂಬರ್ 3ರಂದು. ವಿಯೇಟ್ನಾಮಿನ ವಿಜ್ಞಾನ–ತಂತ್ರಜ್ಞಾನ ಮಂತ್ರಿ ಹಾಗೂ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸದಸ್ಯ ಉತ್ಸವದ ಬಹಿರಂಗ ಉದ್ಘಾಟನೆ ಮಾಡಿದರು. ವರ್ಣರಂಜಿತ ಉತ್ಸವದ ಬಹಿರಂಗ ಉದ್ಘಾಟನೆ ಹನೋಯ್ ನಲ್ಲಿರುವ



ಜಲಸಂಪನ್ಮೂಲ ವಿಶ್ವವಿದ್ಯಾಲಯದ ವಿಶಾಲ ಸಭಾಂಗಣದಲ್ಲಿ ನಡೆಯಿತು. ಅವರು ವಿಯೇಟ್ನಾಂ ಗೆ ಭಾರತದ ದೀರ್ಘ ಕಾಲದ ಅದರಲ್ಲೂ ಅಮೆರಿಕದ ವಿರುದ್ಧ ಯುದ್ಧದಲ್ಲಿ ಸೌಹಾರ್ದ ಬೆಂಬಲವನ್ನು ಸ್ಮರಿಸಿದ ಅವರು, ವಿಯೇಟ್ನಾಮ್ ಫ್ರೆಂಚರಿಂದ ವಿಮೋಚನೆಯಾದ ಮೇಲೆ ಭೇಟಿ ನೀಡಿದ ಮೊದಲ ವಿದೇಶಿ ಗಣ್ಯರಲ್ಲಿ ಪ್ರಧಾನಿ ನೆಹರೂ ಒಬ್ಬರಾಗಿದ್ದರು. ಅದೇ ರೀತಿ ವಿಯೇಟ್ನಾಮ್ ಸರಕಾರವನ್ನು ಮಾನ್ಯ ಮಾಡಿದ ಮೊದಲ ದೇಶಗಳಲ್ಲಿ ಭಾರತ ಒಂದಾಗಿತ್ತು ಎಂದರು. 2017 ಬಹಳ ಮಹತ್ವಪೂರ್ಣ ವರ್ಷ ಎಂದ ಅವರು, ಇದು ಭಾರತ–ವಿಯೇಟ್ನಾಂ ಪೂರ್ಣ ರಾಯಭಾರ ಸಂಬಂಧ (ಜನವರಿ 7, 1972) ಸ್ಥಾಪಿಸಿದ್ದರ 45 ನೇ ವಾರ್ಷಿಕೋತ್ಸವ; ವ್ಯೂಹಾತ್ಮಕ ಸಹಭಾಗಿತ್ವ ಒಪ್ಪಂದದ (ಜುಲೈ 6, 2007) 10ನೇ ವಾರ್ಷಿಕ; ಮತ್ತು ಭಾರತ––ವಿಯೇಟ್ನಾಂ ಮೈತ್ರಿ ಸಂಘ ಸ್ಥಾಪನೆಯ (ನವೆಂಬರ್ 11, 1982) 35ನೇ ವಾರ್ಷಿಕ. ಇದನ್ನು ಸಂಭ್ರಮದಿಂದ ಆಚರಿಸಲಾಗುವುದು. ಉತ್ಸವದ ಥೀಮ್ "ಸೌಹಾರ್ದತೆ, ಸಹಕಾರ, ಅಭಿವೃದ್ಧಿ" ಬಗ್ಗೆ ಪ್ರಸ್ತಾಪಿಸುತ್ತಾ, ಈ ವರೆಗಿನ ಸೌಹಾರ್ದತೆ ಯನ್ನು ಹಲವು ಕ್ಷೇತ್ರಗಳಲ್ಲಿ ಸಹಕಾರ ಮತ್ತು ಅಭಿವೃದ್ಧಿಯತ್ತ ಒಯ್ಯಬೇಕಾಗಿದೆ ಎಂದರು. ಭಾರತದ ತಂಡವಾಗಿ ಮಾತನಾಡಿದ ಕಣ್ಣನ್ ಲಕ್ಷ್ಮಿನಾರಾಯಣನ್ ವಿಯೇಟ್ನಾಂ ನ 30 ವರ್ಷಗಳ ದೀರ್ಘಕಾಲದ ವಿಮೋಚನಾ ಹೋರಾಟ ಮತ್ತು ಆ ಮೇಲಿನ ದೇಶವನ್ನು ಪುನಃ ಕಟ್ಟಿ ಬೆಳೆಸುವ ಮಹಾನ್ ಕಾಯಕದ ಬಗ್ಗೆ ಮೆಚ್ಚುಗೆಯ ಮಾತು ಹೇಳಿದರು. ಸೌಹಾರ್ದತೆ ಯನ್ನು ಹಲವು ಕ್ಷೇತ್ರಗಳಲ್ಲಿ ಸಹಕಾರ ಮತ್ತು ಅಭಿವೃದ್ಧಿಯತ್ತ ಒಯ್ಯುವ ಪ್ರಕ್ರಿಯೆಯಲ್ಲಿ ಭಾರತ–ವಿಯೇಟ್ನಾಮ್ ಪೂರ್ಣವಾಗಿ ತೊಡಗಿಸಿಕೊಳ್ಳುವುದು ಎಂದರು. ಅಮೆರಿಕ ಹೂಡಿದ ಯುದ್ಧದಿಂದ (ಏಜೆಂಟ್ ಆರೇಂಜ್, ನಾಪಾಮ್ ಬಾಂಬ್ ಮುಂತಾದ ಕಾನೂನು–ಬಾಹಿರ ರಾಸಾಯನಿಕ ಅಸ್ತ್ರಗಳ ಬಳಕೆ ಸೇರಿದಂತೆ) ವಿಯೇಟ್ನಾಮ್ ಗೆ ಆದ ನಷ್ಟ–ಸಂಕಷ್ಟಗಳಿಗೆ ಪರಿಹಾರ ಕೇಳುವ ವಿಯೇಟ್ನಾಮಿನ ಅಂತರ್‍ರಾಷ್ಟ್ರೀಯ ಪ್ರಯತ್ನಗಳಿಗೆ ಬೆಂಬಲ ಕೊಡುವುದಾಗಿ ಹೇಳಿದ್ದು ಗಮನಾರ್ಹವಾಗಿತ್ತು.



ಹೊ ಚಿ ಮಿನ್ ಮನೆ

ಶಾರ್ಪ್ ಶೂಟರ್ ಹಾಡುಗಾರ್ತಿ!

ಈ ಎರಡು ಭಾಷಣಗಳ ನಂತರ ಸುಮಾರು ಎರಡು ಗಂಟೆಗಳ ಕಾಲ ಭಾರತ ಮತ್ತು ವಿಯೇಟ್ನಾಮ್ ಸಾಂಸ್ಕೃತಿಕ ತಂಡಗಳಿಂದ ಪ್ರಸ್ತುತಪಡಿಸಲಾದ ಸಂಗೀತ–ನೃತ್ಯ ಕಾರ್ಯಕ್ರಮಗಳು ಸುಮಾರು ಒಂದು ಸಾವಿರ ಸಾಮರ್ಥ್ಯದ ಸಭಾಂಗಣದಲ್ಲಿ ಕಿಕ್ಕಿರಿದು ತುಂಬಿದ್ದ ಪ್ರೇಕ್ಷಕರನ್ನು ಮಂತ್ರಮುಗ್ಧಗೊಳಿಸಿದವು. ಭಾರತೀಯ ಹಾಡುಗಾರ್ತಿ (ಹೈದರಾಬಾದಿನ ಮಧುಶ್ರೀ) ವಿಯೇಟ್ನಾಮಿ ಹಾಡು ಹಾಡಿದ್ದು, ವಿಯೇಟ್ನಾಮಿ ಹಾಡುಗಾರ್ತಿ ಹಿಂದಿ ಹಾಡು ಹಾಡಿದ್ದು, 'ಹೊ ಹೊ ಹೊ ಚಿ ಮಿನ್' ಹಾಡು ಪ್ರೇಕ್ಷಕರ ಹೆಚ್ಚಿನ ಗಮನ ಸೆಳೆದ ಕಾರ್ಯಕ್ರಮಗಳಾಗಿದ್ದವು. ಅದೇ ರೀತಿ ಭಾರತೀಯ ತಂಡ ಪ್ರಸ್ತುತ ಪಡಿಸಿದ 'ಜೈ ಹೋ' ಗೀತ–ನೃತ್ಯದೊಂದಿಗೆ ವಿಯೇಟ್ನಾಮಿ ನೃತ್ಯ–ಹಾಡಿನ ತಂಡ ಒಂದುಗೂಡಿ ಎರಡು ದೇಶಗಳ ಧ್ವಜಗಳು ಹಾರಾಡಿ, ಎರಡೂ ದೇಶಗಳಿಗೆ 'ಜೈ ಹೋ' ಆಗಿದ್ದು ಇನ್ನೊಂದು ಗಮನ ಸೆಳೆದ ಐಟಂ. ಇವಲ್ಲದೆ ವಿಯೇಟ್ನಾಮಿ ತಂಡ ಪ್ರಸ್ತುತ ಪಡಿಸಿದ ಹಲವು ಸಂಗೀತ–ನೃತ್ಯ ಕಾರ್ಯಕ್ರಮಗಳು ಅತ್ಯಂತ ಕಲಾತ್ಮಕವಾಗಿಯೂ ಅರ್ಥಪೂರ್ಣವಾಗಿಯೂ ಇದ್ದವು. ಸಮೂಹ ನೃತ್ಯಗಳ ಕೊರಿಯೊಗ್ರಫಿ, ಸಂಗೀತ, ವರ್ಣ ಸಂಯೋಜನೆ, ಲಯಬದ್ಧ ನಡೆಗಳು ಉತ್ಸವಕ್ಕೆ ರಂಗೇರಿಸಿದವು. ಭಾರತದ ತಂಡ ಭರತ ನಾಟ್ಯ, ಗದ್ದರ್ ಶೈಲಿಯಲ್ಲಿ ಪ್ರಸ್ತುತ ಪಡಿಸಿದ 'ವೀರ ತೆಲಂಗಾಣ' ಕಥನ, ಬಾಲಿವುಡ್ ಶೈಲಿಯ ನೃತ್ಯಗಳನ್ನು ಪ್ರಸ್ತುತಪಡಿಸಿತು. ಆದರೆ ವಿಯೇಟ್ನಾಮಿ ತಂಡದ ಹಾಡುಗಾರಿಕೆ–ನೃತ್ಯಗಳ ಗುಣಮಟ್ಟ, ಗಟ್ಟಿ ಥೀಮ್ ಗಳು, ವೈವಿಧ್ಯತೆಗೆ ಹೋಲಿಸಿದರೆ, ಭಾರತದ ತಂಡದ ಐಟಂಗಳು ದೇಶದ ಸಾಂಸ್ಕೃತಿಕ ವೈವಿಧ್ಯತೆಯನ್ನಾಗಲಿ ಶ್ರೀಮಂತಿಕೆಯನ್ನಾಗಲಿ ಸೃಜನಶೀಲತೆಯನ್ನಾಗಲಿ ಪ್ರತಿನಿಧಿಸಲಿಲ್ಲ ಎಂದು ಅನಿವಾರ್ಯವಾಗಿ ಒಪ್ಪಿಕೊಳ್ಳಲೇಬೇಕು. ವಿಯೇಟ್ನಾಮಿ ತಂಡದ ನೃತ್ಯ–ಸಂಗೀತ ಪ್ರಸ್ತುತಿಯ ಗುಣಮಟ್ಟ ನೊಡಿದರೆ ಇದೊಂದು ಪೂರ್ಣಕಾಲೀನ 'ಪ್ರೊಫೆಶನಲ್ ತಂಡ'ದ್ದು ಅನಿಸುತ್ತಿತ್ತು. ಆದರೆ ಈ ಬಗ್ಗೆ ವಿಚಾರಿಸಿದಾಗ ತಿಳಿದು ಬಂದದ್ದು ನಮ್ಮನ್ನು ದಂಗಬಡಿಸಿತು. ವಿಯೇಟ್ನಾಮಿ ಪ್ರಸ್ತುತಿಯನ್ನು ಹನೊಯ್ ಪೊಲಿಸ್ ಅಕಾಡೆಮಿಯ ಸಾಂಸ್ಕೃತಿಕ ತಂಡಕ್ಕೆ ವಹಿಸಲಾಗಿತ್ತು. ಅಂದರೆ ಅವರು ನಿಜಜೀವನದಲ್ಲಿ ಪೊಲೀಸರು ! ತಂಡದ ಅತ್ಯಂತ ಜನಪ್ರಿಯ ಹಾಡುಗಾರ್ತಿ ಪರಿಣತ ಶಾರ್ಪ್ ಶೂಟರ್ ಅಂತೆ! ಎರಡೂ ತಂಡಗಳ ಸಂಗೀತ–ನೃತ್ಯಗಳಿಗೆ ಸಭಿಕರ ಉತ್ಸಾಹಪೂರ್ಣ ಸ್ಪಂದನೆ ಬರಿಯ ಔಪಚಾರಿಕವಾಗಿ ಕಾಣಲಿಲ್ಲ. ಸಂಗೀತ–ನೃತ್ಯಗಳಿಗೆ ದೇಶ–ಭಾಷೆಗಳ ಗಡಿಗಳಿಲ್ಲ. ಇವೇ ಜನಮೈತ್ರಿ ಸಾಧಿಸಲು ಉತ್ತಮ ಸಾಧನಗಳು ಎನ್ನುವಂತಿತ್ತು.

ಹೊ ಚಿ ಮಿನ್ ಮನೆಯಲ್ಲಿ

ಹನೊಯ್ ನಲ್ಲಿ ಹೊ ಚಿ ಮಿನ್ ದೇಹ ಇಟ್ಟಿರುವ ಮುಸೋಲಿಯಂ ಮತ್ತು ಮನೆಗೆ ಭೇಟಿ ಸಂಘಟಿಸಲಾಗಿತ್ತು. ಅಗತ್ಯ ನಿರ್ವಹಣಾ ಕಾರ್ಯಕ್ರಮಗಳಿಗಾಗಿ ಮುಸೋಲಿಯಂ ಮುಚ್ಚಿತ್ತು. ಅದೇ ಸಂಕೀರ್ಣದಲ್ಲಿದ್ದ ಅಧ್ಯಕ್ಷೀಯ ಅರಮನೆ, ಹೊ ಚಿ ಮಿನ್ ವಾಸವಾಗಿದ್ದ ಮನೆಗಳಿಗೆ ಭೇಟಿ ಕೊಡುವ ಅವಕಾಶ ಇತ್ತು. ಉತ್ತರ ವಿಯೇಟ್ನಾಮ್ ಫ್ರೆಂಚರಿಂದ 1954ರಲ್ಲಿ ಸ್ವಾತಂತ್ರ್ಯ ಪಡೆದು ಹೊ ಚಿ ಮಿನ್ ಅ ಧ್ಯಕ್ಷರಾಗಿ ಚುನಾಯಿತರಾದರು. ಅವರು ಹಿಂದೆ ಫ್ರೆಂಚ್ ವಸಾಹತುಶಾಹಿ ದಮನದ ಪ್ರತೀಕವಾಗಿದ್ದ ಫ್ರೆಂಚ್ ಗವರ್ನರ್ ಅರಮನೆಯಲ್ಲಿ ಅಧ್ಯಕ್ಷರಾಗಿ ವಾಸಿಸಲು ನಿರಾಕರಿಸಿದರಂತೆ. ಅವರು ಗವರ್ನರ್ ಅರಮನೆಯ ಇಲೆಕ್ಟ್ರಿಶಿಯನ್ ಕ್ವಾರ್ಟರ್ ಒಂದರಲ್ಲಿ ವಾಸವಾಗಿದ್ದರು. ಅದನ್ನು ಒಂದು ಬೆಡ್ ರೂಂ, ಚಿಕ್ಕ ಹಾಲ್, ಅಡುಗೆ ಕೋಣೆ ಇರುವ ಅತ್ಯಂತ ಸರಳ ಮನೆ. ಅಧ್ಯಕ್ಷೀಯ ಅರಮನೆಯನ್ನು ವಿದೇಶಿ ಗಣ್ಯರ ಭೇಟಿ ಸಮಯದಲ್ಲಿ ಸರಕಾರಿ ಕಚೇರಿಯಾಗಿ ಬಳಸುತ್ತಿದ್ದರಂತೆ. ಈ ಮನೆ ಬೇಸಗೆಯಲ್ಲಿ ಅತ್ಯಂತ ಬಿಸಿಯಾಗಿದ್ದು ಪಾಲಿಟ್ ಬ್ಯುರೊ ಒತ್ತಾಯ ಮಾಡಿ ಒಂದು ಪ್ರತ್ಯೇಕ ಮನೆ ಕಟ್ಟಲಾಯಿತು. ಅದೂ ಭೇಟಿಗೆ ತೆರೆದಿಡಲಾಗಿದೆ. ಅದು ಹೊ ಚಿ ಮಿನ್ ದಶಕಗಳ ಕಾಲ ಭೂಗತರಾಗಿ ಕಳೆದ ಪರ್ವತ ಪ್ರದೇಶದ ಮಾದರಿಯ ಮರದ ಅತ್ಯಂತ ಸರಳ 'ಅಟ್ಟಣಿಗೆ ಮನೆ'. ಕೆಳಗೆ ಪೊಲಿಟ್ ಬ್ಯುರೊ ಸಭೆಗೆ ಒಂದು ಟೇಬಲ್ ಹಾಗೂ ಕುರ್ಚಿಗಳಿರುವ ತೆರೆದ ಭಾಗ. ಅಟ್ಟಣಿಗೆಯಲ್ಲಿ ಒಂದು ಬೆಡ್ ರೂಂ, ಚಿಕ್ಕ ಹಾಲ್, ಅಡುಗೆ ಕೋಣೆಗಳು. ಇದಲ್ಲದೆ ಹೊ ಚಿ ಮಿನ್ ಅವರಿಗೆ ಕೊನೆಯ ವರ್ಷಗಳಲ್ಲಿ ಒಂದು ಬಂಕರ್ ಮನೆ ಕಟ್ಟಲಾಯಿತು. ಆಗ ಹನೊಯ್ ಮೇಲೆ ಅಮೆರಿಕನ್ ಬಾಂಬ್ ದಾಳಿ ಹೆಚ್ಚಿದ್ದರಿಂದ ಹೊ ನಿರಾಕರಿಸಿದರೂ ಅವರನ್ನು ಈ ಬಂಕರ್ ಮನೆಗೆ ವರ್ಗಾಯಿಸಲಾಯಿತು. ಆದರೆ ಅಲ್ಲಿಗೆ ಹೋದ ಕೆಲವೇ ತಿಂಗಳುಗಳಲ್ಲಿ ಆರೋಗ್ಯ ಬಿಗಡಾಯಿಸಿ ಅವರು ನಿಧನಹೊಂದಿದರು. ಅವರ ಕೊನೆಯ ದಿನದ ಹಾಗೂ ನಿಧನದ ನಂತರದ ಒಂದು ಬಹಳ ಭಾವನಾತ್ಮಕವಾದ ಕಿರು ಡಾಕ್ಯುಮೆಂಟರಿ ಫಿಲಂ

ಪುಟ 15 ಕ್ಕೆ



JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**